prajavani.net prajavani | ಶುಕ್ರವಾರ, ನವೆಂಬರ್ 28, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 328 | ಪುಟ 16 | www.prajavani.net

ಬಿಗ್‌ಬಾಷ್‌ಗೆ ಜೆಮಿಮಾ ಅಲಭ್ಯ



ಮಹಿಳಾ ಕ್ರಿಕೆಟ್ ವಿಶ್ವಕಪ್ ವಿಜೇತ ಭಾರತ ತಂಡದ ಆಟಗಾರ್ತಿ ಜೆಮಿಮಾ ರಾಡ್ರಿಗಸ್ ಅವರು ಈ ವರ್ಷದ ಮಹಿಳಾ ಬಿಗ್‌ಬಾಷ್ ಲೀಗ್‌ನಲ್ಲಿ ಆಡದಿರಲು ನಿರ್ಧರಿಸಿದ್ದಾರೆ

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ನೃತ್ಯ ಲಾಲಿತ್ಯ



ಮೈಸೂರಿನಲ್ಲಿ ಭರತ ನೃತ್ಯ ಸಂಗೀತ ಅಕಾಡೆಮಿ, ನೂಪುರ ಕಲಾವಿದರು ಸಾಂಸ್ಕೃತಿಕ ಟ್ರಸ್ಟ್ ಆಯೋಜಿಸಿದ್ದ ನೃತ್ಯೋತ್ಸವ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಭರತನಾಟ್ಯ ಪ್ರದರ್ಶಿಸಿದರು

ಸೆನ್ಸೆಕ್ಸ್ 85,720 | ನಿಫ್ಟಿ 26,215 | $/₹ 89.36 | ಚಿನ್ನ (Std. 10g) ₹1,31,600 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,73,000 (ಬೆಂಗಳೂರು)

ಮೋದಿ ಇಂದು ಉಡುಪಿಗೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಉಡುಪಿ ಶ್ರೀಕೃಷ್ಣ ಮಠದಲ್ಲಿ ಶುಕ್ರವಾರ (ನ.28) ನಡೆಯುವ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಪಾಲ್ಗೊಳ್ಳುವರು.

ಶುಕ್ರವಾರ ಬೆಳಿಗ್ಗೆ 8.15ಕ್ಕೆ ನವದೆಹಲಿಯಿಂದ ಹೊರಡುವ ಪ್ರಧಾನಿ 11.05ಕ್ಕೆ ಮಂಗಳೂರು ವಿಮಾನ ನಿಲ್ದಾಣ ತಲುಪಲಿದ್ದಾರೆ. ನಂತರ ಹೆಲಿಕಾಪ್ಟರ್‌ನಲ್ಲಿ ಉಡುಪಿಗೆ ತೆರಳುವರು. ಅಲ್ಲಿನ ಕಾರ್ಯಕ್ರಮ ಮುಗಿಸಿ, ಮಧ್ಯಾಹ್ನ 2.10ಕ್ಕೆ ಮಂಗಳೂರು ವಿಮಾನ ನಿಲ್ದಾಣಕ್ಕೆ ಬಂದು, ಗೋವಾಕ್ಕೆ ತೆರಳಲಿದ್ದಾರೆ.



ನರೇಂದ್ರ ಮೋದಿ

ಉಡುಪಿಯಲ್ಲಿ ರೋಡ್‌ಶೋ ನಡೆಸಲಿರುವ ಪ್ರಧಾನಿ, ನಂತರ ಕೃಷ್ಣಮಠಕ್ಕೆ ತೆರಳುವರು. ಕನಕನ ಕಿಂಡಿಗೆ ಹೊದಿಸಿರುವ ಚಿನ್ನದ ಕವಚ, ಸುವರ್ಣ ತೀರ್ಥ ಮಂಟಪ ಅನಾವರಣಗೊಳಿಸುವರು.

ರಾಮನಮೂರ್ತಿ ಅನಾವರಣ: (ಕಾರವಾರ ವರದಿ): ಗೋವಾ ರಾಜ್ಯಕ್ಕೆ ಸೇರಿದ ಕಾಣಕೋಣ ಬಳಿ ಗೋಕರ್ಣ ಪರ್ತಗಾಳಿ ಜೀವೋತ್ತಮ ಮಠದ ಆವರಣದಲ್ಲಿ ನಿರ್ಮಿಸಿರುವ 77 ಅಡಿ ಎತ್ತರದ ಶ್ರೀರಾಮನ ಕಂಚಿನ ಮೂರ್ತಿಯನ್ನು ಶುಕ್ರವಾರ ಮಧ್ಯಾಹ್ನ 3.45ಕ್ಕೆ ಅನಾವರಣ ಮಾಡುವರು.

ಬೀದಿಗೆ ಬಂತು ಕುರ್ಚಿ ಕುಸ್ತಿ

ರಾಜ್ಯ ಸರ್ಕಾರದ ನಾಯಕತ್ವದ ‘ಅಂತರ್ಯುದ್ಧ’ ಉಲ್ಬಣ

‘ಅಹಿಂದ ಕದನ’

ಬೆಂಗಳೂರು: ರಾಜ್ಯ ಸರ್ಕಾರದ ನಾಯಕತ್ವ ಬದಲಾವಣೆ ವಿಚಾರದಲ್ಲಿ ಅಹಿಂದ ಸಂಘಟನೆಗಳು ಸಿದ್ದರಾಮಯ್ಯ ಪರವಾಗಿ ಲಾಬಿಗೆ ಇಳಿದಿದ್ದು, ಒಕ್ಕಲಿಗ ಮಠ–ಸಂಘಟನೆಗಳ ಬೆದರಿಕೆಗೆ ಜಗ್ಗುವುದಿಲ್ಲ ಎಂದಿವೆ. ಸಿದ್ದರಾಮಯ್ಯ ಅವರನ್ನು ಅಧಿಕಾರದಿಂದ ಇಳಿಸಿದರೆ ಅಹಿಂದ ಸಮುದಾಯದವರು ಸುಮ್ಮನೆ ಕೂರುವುದಿಲ್ಲ ಎಂದು ಎಚ್ಚರಿಕೆ ನೀಡಿವೆ.

ಒಕ್ಕಲಿಗ ಸಂಘವು ಡಿ.ಕೆ. ಶಿವಕುಮಾರ್ ಅವರ ಪರ ಗುರುವಾರ ಮಾತನಾಡಿದ ಬೆನ್ನಲ್ಲೇ ಕರ್ನಾಟಕ ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟವು ತುರ್ತು ಸುದ್ದಿಗೋಷ್ಠಿ ಕರೆಯಿತು.

▶ 8

‘ಸಿ.ಎಂ ಸ್ಥಾನ ಬಿಡಿ’

ಡಿ.ಕೆ.ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಸ್ಥಾನ ಬಿಟ್ಟುಕೊಡಬೇಕು ಎಂದು ಸ್ಫಟಿಕಪುರಿ ಮಹಾ ಸಂಸ್ಥಾನ ಮಠದ ನಂಜಾವಧೂತ ಸ್ವಾಮೀಜಿ ಆಗ್ರಹಿಸಿದ್ದಾರೆ. ಒಕ್ಕಲಿಗರ ಸಂಘವೂ ಈ ಮಾತಿಗೆ ಧ್ವನಿಗೂಡಿಸಿದೆ.

ಸುದ್ದಿಗಾರರ ಜತೆ ಮಾತನಾಡಿರುವ ಸ್ವಾಮೀಜಿ, ‘ಶಿವಕುಮಾರ್ ಮುಖ್ಯಮಂತ್ರಿ ಆಗಬೇಕು ಎಂಬುದು ಒಕ್ಕಲಿಗ ಸಮುದಾಯದ ಒತ್ತಾಸೆ. ಅದನ್ನೇ ಆದಿಚುಂಚನಗಿರಿ ಶ್ರೀಗಳು ಹೇಳಿದ್ದಾರೆ. ಇದರಲ್ಲಿ ರಾಜಕೀಯ ಏನೂ ಇಲ್ಲ. ತಮ್ಮ ಸಮುದಾಯದವರಿಗೆ ಅವಕಾಶ ಕೈತಪ್ಪುವಾಗ ಸ್ವಾಮೀಜಿಗಳು ಮಾತನಾಡುವುದು ಸಹಜ’ ಎಂದರು.

▶ 8

‘ಮಾತಿನ ಶಕ್ತಿ...’

‘ವರ್ಡ್ ಪವರ್ ಈಸ್ ವರ್ಲ್ಡ್ ಪವರ್, ಜಗತ್ತಿನ ಅತಿ ದೊಡ್ಡ ಶಕ್ತಿ ಎಂದರೆ ಕೊಟ್ಟ ಮಾತನ್ನು ಉಳಿಸಿಕೊಳ್ಳುವುದು’ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಬುಧವಾರ ಹೇಳಿದ್ದರು.


‘ನ್ಯಾಯಾಧೀಶರಾಗಲಿ, ಅಧ್ಯಕ್ಷರಾಗಲಿ ಅಥವಾ ನಾನು ಸೇರಿದಂತೆ ಬೇರೆ ಯಾರೇ ಆಗಿರಲಿ, ಎಲ್ಲರೂ ಮಾತಿನಂತೆ ನಡೆಯಬೇಕು. ಮಾತಿನ ಶಕ್ತಿಯೇ ವಿಶ್ವದ ಶಕ್ತಿ’ ಎಂದಿದ್ದರು



ಅಧಿಕೃತ ‘ಎಕ್ಸ್’ ಖಾತೆಯಲ್ಲಿ ಅಂಥದ್ದೇ ಪೋಸ್ಟರ್ ಅನ್ನು ಪೋಸ್ಟ್ ಮಾಡಲಾಗಿತ್ತು. ಆದರೆ, ಅದು ತಾವು ಹಾಕಿದ್ದಲ್ಲ ಎಂದು ಶಿವಕುಮಾರ್ ಹೇಳಿದ್ದಾರೆ.

▶ 8

‘ಬದುಕು ಸುಧಾರಿಸದ ಮಾತಿಗೆ ಬಲವಿಲ್ಲ’



‘ಜನರ ಬದುಕನ್ನು, ಜಗತ್ತನ್ನು ಸುಧಾರಿಸದೇ ಇರುವಂತಹ ಮಾತಿಗೆ ಯಾವ ಬಲವೂ ಇಲ್ಲ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

▶ 8

‘ದೆಹಲಿಗೆ ಕರೆಯಿಸಿ ಇತ್ಯರ್ಥ’

‘ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಸೇರಿದಂತೆ ಮೂರ್ನಾಲ್ಕು ಕಾಂಗ್ರೆಸ್ ನಾಯಕರನ್ನು ದೆಹಲಿಗೆ ಕರೆಸಿಕೊಂಡು ಚರ್ಚಿಸಲಾಗುವುದು. ಎಲ್ಲದಕ್ಕೂ ಪರಿಹಾರ ಕಂಡುಕೊಂಡು ಇತ್ಯರ್ಥ (ಸೆಟಲ್) ಮಾಡಲಾಗುವುದು’ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದರು.


ದೆಹಲಿಗೆ ತೆರಳುವ ಮುನ್ನ ಸುದ್ದಿಗಾರರ ಜತೆ ಗುರುವಾರ ಮಾತನಾಡಿದ ಅವರು, ‘ಹೈಕಮಾಂಡ್ ಎಂದರೆ ಒಬ್ಬ ವ್ಯಕ್ತಿಯಲ್ಲ, ಒಂದು ತಂಡ. ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಸೇರಿ ಕಾಂಗ್ರೆಸ್‌ನ ಪ್ರಮುಖ ನಾಯಕರನ್ನು ಒಳಗೊಂಡ ತಂಡವು ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಸಮ್ಮುಖದಲ್ಲೇ ರಾಜ್ಯದ ಸಮಸ್ಯೆಗಳ ಬಗ್ಗೆ ನಿರ್ಧಾರ ತೆಗೆದುಕೊಳ್ಳಲಿದೆ’ ಎಂದರು.

114 ‘ಆಯುಷ್ಮಾನ್ ಆರೋಗ್ಯ ಮಂದಿರ’ ▶ 8

ಒಳಮೀಸಲು: ನೇಮಕಾತಿಗೆ ಷರತ್ತುಬದ್ಧ ಅನುಮತಿ ▶ 9

ಕ್ಲೇಮ್‌ಗೆ ಏಕೀಕೃತ ಪೋರ್ಟಲ್ ▶ 12

ಚಿನಕುರುಳಿ ಪ್ರಕಾಶ್ ಶೆಟ್ಟಿ



ಆಲ್‌ರೌಂಡರ್ ದೀಪ್ತಿಗೆ ಜಾಕ್‌ಪಾಟ್

ಭಾರತ ಮಹಿಳಾ ತಂಡವು ಈಚೆಗೆ ಏಕದಿನ ಕ್ರಿಕೆಟ್ ವಿಶ್ವಕಪ್ ಜಯಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದ ದೀಪ್ತಿ ಶರ್ಮಾ ಅವರು ಗುರುವಾರ ನಡೆದ ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯುಪಿಎಲ್) ಟೂರ್ನಿಯ ಬಿಡ್ ಪ್ರಕ್ರಿಯೆಯಲ್ಲಿ ‘ಬಂಪರ್’ ಮೌಲ್ಯ ಪಡೆದರು.



ಡಬ್ಲ್ಯುಪಿಎಲ್

- **ಅಮೇಲಿಯಾ ಕರ್** ಮುಂಬೈ ಇಂಡಿಯನ್ಸ್ : ₹**3** ಕೋಟಿ
- **ಶಿಖಾ ಪಾಂಡೆ** ಯು.ಪಿ. ವಾರಿಯರ್ಸ್ : ₹**2.4** ಕೋಟಿ
- **ಸೋಫಿ ಡಿವೈನ್** ಗುಜರಾತ್ ಜೈಂಟ್ಸ್ : ₹**2** ಕೋಟಿ
- **ಮೆಗ್ ಲ್ಯಾನಿಂಗ್** ಯು.ಪಿ. ವಾರಿಯರ್ಸ್ : ₹**1.9** ಕೋಟಿ

ಮೂಲ: ಡಬ್ಲ್ಯುಪಿಎಲ್ ವೆಬ್‌ಸೈಟ್

ರೈತರಿಗೆ ₹1033 ಕೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಗಾರು ಹಂಗಾಮಿನಲ್ಲಾದ ಅತಿವೃಷ್ಟಿಯಿಂದ ಬೆಳೆನಷ್ಟ ಅನುಭವಿಸಿದ 27 ಜಿಲ್ಲೆಗಳ 14.24 ಲಕ್ಷ ರೈತರಿಗೆ ರಾಜ್ಯ ಸರ್ಕಾರ ₹1,033.60 ಕೋಟಿ ಪರಿಹಾರ ನೀಡಿದ್ದು, ಎಲ್ಲ ರೈತರ ಬ್ಯಾಂಕ್ ಖಾತೆಗಳಿಗೆ 24 ಗಂಟೆಗಳಲ್ಲಿ ಈ ಮೊತ್ತ ಜಮೆಯಾಗಲಿದೆ.



ಕೇಂದ್ರ ಸರ್ಕಾರ ಬಿಡುಗಡೆ ಮಾಡಿದ ರಾಜ್ಯ ವಿಪತ್ತು ನಿರ್ವಹಣಾ ನಿಧಿಯ (ಎಸ್‌ಡಿಆರ್‌ಎಫ್) ₹1,218 ಕೋಟಿ ಮೊತ್ತದ ಹೊರತಾಗಿ ರಾಜ್ಯ ಸರ್ಕಾರ ಪ್ರತಿ ಹೆಕ್ಟೇರ್‌ಗೆ ₹8,500 ಹೆಚ್ಚುವರಿ ಪರಿಹಾರ ಘೋಷಿಸಿದೆ. ಈ ವಿಶೇಷ ಪ್ಯಾಕೇಜ್ ವಿತರಣೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಗುರುವಾರ ಚಾಲನೆ ನೀಡಿದರು.

ನಂತರ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಮುಂಗಾರಿನಲ್ಲಿ 82.56 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಮಾಡಲಾಗಿತ್ತು. ಜೂನ್‌ನಿಂದ ಸೆಪ್ಟೆಂಬರ್ ಅವಧಿಯಲ್ಲಿನ ಅತಿವೃಷ್ಟಿ ಯಿಂದ 14.58 ಲಕ್ಷ ಹೆಕ್ಟೇರ್‌ನಲ್ಲಿ ಬೆಳೆ ನಷ್ಟವಾಗಿತ್ತು. ₹10,748 ಕೋಟಿ ಹಾನಿ ಅಂದಾಜಿಸಲಾಗಿತ್ತು’ ಎಂದರು.

▶ 9

JAPAN CHERRY BLOSSOM 2026

trawel mart™
(Govt. of Tourism Recg. Tour Operator)

IATA Accredited Agent 14376740

2026 ಯುರೋಪ್



ಕ್ಲಾಸಿಕ್ ಯುರೋಪ್ 9 ದಿನಗಳು

ಯುರೋಪ್ ಪ್ರವಾಸಕ್ಕೆ ನಿಮ್ಮ ಕನಸು ಈಗ ಹತ್ತಿರ
ಕೇವಲ ರೂ. 2,20,000/–

ಟ್ರಾವೆಲ್ ಮಾರ್ಟ್ ವರ್ಲ್ಡ್ ಟೂರ್ಸ್ ಪ್ರೈ. ಲಿ. | 080 4642 7999



Trawel Mart World Tours Pvt Ltd
EXCELLENT TRAVEL COMPANY
Corporate and Family Tour

ಜಾಗತಿಕ ಪ್ರಯಾಣದಲ್ಲಿ 17 ವರ್ಷಗಳ ವಿಶ್ವಾಸಾರ್ಹ ಪರಂಪರೆ । ಪ್ರಪಂಚದಾದ್ಯಂತ 3 ಲಕ್ಷಕ್ಕೂ ಹೆಚ್ಚು ಸಂತೋಷದ ಗ್ರಾಹಕರು ಮೂರು ನಿರಂತರ ವರ್ಷಗಳ ಕಾಲ "ET ಎಕ್ಸಲೆಂಟ್ ಟ್ರಾವೆಲ್ ಕಂಪನಿ" ಎಂದು ಮಾನ್ಯತೆ ಪಡೆದ ಸಂಸ್ಥೆ

ಗೋಲ್ಡನ್ ಯುರೋಪ್ ಪ್ರವಾಸ 18 ದಿನಗಳು ₹ 1,35,000 + € 2,650

ಇಂಗ್ಲೆಂಡ್, ಸ್ಕಾಟ್‌ಲೆಂಡ್, ನೆದರ್‌ಲ್ಯಾಂಡ್, ಬೆಲ್ಜಿಯಂ, ಫ್ರಾನ್ಸ್, ಲಕ್ಸಮ್‌ಬರ್ಗ್, ಸ್ವಿಡ್ಜರ್‌ಲ್ಯಾಂಡ್, ಲಿಚೆನ್‌ಸ್ಟೈನ್, ಆಸ್ಟ್ರಿಯಾ, ಇಟಲಿ ಮತ್ತು ವ್ಯಾಟಿಕನ್

Air Ticket · Visa · Cruise · Hotel · Meal · Sightseeing · Transfer · Tour Manager

ಪ್ರವಾಸ	ದಿನಗಳು	ದರ
ಸ್ಪೆಂಡರ್ ಯುರೋಪ್ – ಇಂಗ್ಲೆಂಡ್, ಫ್ರಾನ್ಸ್, ಬೆಲ್ಜಿಯಂ, ನೆದರ್‌ಲ್ಯಾಂಡ್, ಸ್ವಿಡ್ಜರ್‌ಲ್ಯಾಂಡ್, ಜರ್ಮನಿ, ಇಟಲಿ ಮತ್ತು ವ್ಯಾಟಿಕನ್	11 ದಿನಗಳು	₹ 1,25,000 + € 1,600
ಸ್ಪೇನ್ ಮತ್ತು ಪೋರ್ಚುಗಲ್ ಪ್ರವಾಸ – ಮ್ಯಾಡ್ರಿಡ್, ಟೊಲೆಡೊ, ಪೋರ್ಟೊ, ಫಾತಿಮಾ, ಲಿಸ್‌ಬನ್, ಸೆವಿಲ್ಲೆ, ಕೊರ್ಡೋಬಾ, ಗ್ರನಾಡ, ವಾಲೆನ್ಸಿಯಾ, ಮತ್ತು ಬಾರ್ಸಿಲೋನ	12 ದಿನಗಳು	₹ 1,15,000 + € 1,900
ಬೆಸ್ಟ್ ಆಫ್ ಯುರೋಪ್ ಪ್ರವಾಸ – ಫ್ರಾನ್ಸ್, ಬೆಲ್ಜಿಯಂ, ನೆದರ್‌ಲ್ಯಾಂಡ್, ಲಕ್ಸಮ್‌ಬರ್ಗ್, ಜರ್ಮನಿ, ಸ್ವಿಡ್ಜರ್‌ಲ್ಯಾಂಡ್, ಇಟಲಿ ಮತ್ತು ವ್ಯಾಟಿಕನ್	12 ದಿನಗಳು	₹ 1,05,000 + € 1,750
ಈಸ್ಟರ್ನ್ ಯುರೋಪ್ ಪ್ರವಾಸ – ಮ್ಯೂನಿಚ್, ಬರ್ಲಿನ್, ಡ್ರೆಸ್‌ಡೆನ್, ಪ್ರಾಗ್, ವಿಯಾನ್ನಾ, ಬ್ರಾಟಿಸ್ಲಾವ, ಬುಡಪೆಸ್ಟ್ ಮತ್ತು ಜೆಲ್‌ಆ್ಯಂಸೀ	11 ದಿನಗಳು	₹ 1,15,000 + € 1,775
ಗ್ರೇಟ್ ಬ್ರಿಟನ್ ಪ್ರವಾಸ – ಡಬ್ಲಿನ್, ಬೆಲ್‌ಫಾಸ್ಟ್, ಗ್ಲಾಸ್‌ಗೋ, ಈಡೆನ್‌ಬರ್ಗ್, ವಿಂಡರ್‌ಮೆರೆ, ಮ್ಯಾಂಚೆಸ್ಟರ್, ಆಕ್ಸ್‌ಫರ್ಡ್ ಮತ್ತು ಲಂಡನ್	11 ದಿನಗಳು	₹ 1,15,000 + € 2,200
ಸ್ಕ್ಯಾಂಡಿನೇವಿಯಾ, ಪ್ರವಾಸ – ಹೆಲ್ಸಿಂಕಿ, ಸ್ಟಾಕ್‌ಹೋಮ್, ನಾರ್ವೆ ಇನ್ ನಟ್‌ಷೆಲ್, ಓಸ್ಲೊ ಮತ್ತು ಕೋಪನ್ ಹ್ಯಾಂಗ್	11 ದಿನಗಳು	₹ 1,35,000 + € 2,150

ಗುಂಪು ಪ್ರವಾಸ ಪ್ಯಾಕೇಜ್‌ಗಳು

ದುಬೈ 6 ದಿನಗಳು ₹ 98,000/–	ಸಿಂಗಾಪುರ್ ಮತ್ತು ಮಲೇಷಿಯಾ 7 ದಿನಗಳು ₹ 1,15,000/–	ವಿಯೆಟ್ನಾಂ 8 ದಿನಗಳು ₹ 1,22,000/–	ಸಿಂಗಾಪುರ್, ಮಲೇಷಿಯಾ ಮತ್ತು ಥೈಲ್ಯಾಂಡ್ 11 ದಿನಗಳು ₹ 1,55,000/–	ವಿಯೆಟ್ನಾಂ ಮತ್ತು ಕಾಂಬೋಡಿಯಾ 11 ದಿನಗಳು ₹ 1,65,000/–
ಈಜಿಪ್ಟ್ 9 ದಿನಗಳು ₹ 1,85,000/–	ಸೌತ್ ಆಫ್ರಿಕಾ 10 ದಿನಗಳು ₹ 2,25,000/–	ಚೀನಾ 9 ದಿನಗಳನ್ನು ₹ 1,85,000/–	ಜಪಾನ್ 8 ದಿನಗಳು ₹ 2,89,000/–	ಆಸ್ಟ್ರೇಲಿಯಾ 10 ದಿನಗಳು ₹ 3,50,000/–

WHATSAPP · WEBSITE

ಕಸ್ಟಮೈಸ್ಡ್ ಪ್ರವಾಸ ಪ್ಯಾಕೇಜ್‌ಗಳು

* ವಿಮಾನ ಟಿಕೆಟ್ ಹೆಚ್ಚುವರಿ

ಮಲೇಷಿಯಾ 5 ದಿನಗಳು ₹ 38,000/–	ಶ್ರೀಲಂಕಾ 6 ದಿನಗಳು ₹ 38,000/–	ಥೈಲ್ಯಾಂಡ್ 7 ದಿನಗಳು ₹ 42,000/–	ಕಜಖಿಸ್ತಾನ್ 6 ದಿನಗಳು ₹ 48,000/–	ಬಾಲಿ 6 ದಿನಗಳು ₹ 48,000/–
ಮಾರಿಷಸ್ 7 ದಿನಗಳು ₹ 49,000/–	ಜಾರ್ಜಿಯಾ 6 ದಿನಗಳು ₹ 58,000/–	ಮಾಲ್ಡೀವ್ಸ್ 5 ದಿನಗಳು ₹ 62,000/–	ಹಾಂಗ್ ಕಾಂಗ್ ಮತ್ತು ಮಕಾವು 6 ದಿನಗಳು ₹ 83,000/–	ಜೋರ್ಡಾನ್ 8 ದಿನಗಳು ₹ 93,000/–
ಕೀನ್ಯಾ 8 ದಿನಗಳು ₹ 1,10,000/–	ಸೀಶೆಲ್ಸ್ 7 ದಿನಗಳು ₹ 1,35,000/–	ನ್ಯೂಜಿಲ್ಯಾಂಡ್ 9 ದಿನಗಳು ₹ 1,50,000/–	ದಕ್ಷಿಣ ಕೊರಿಯಾ 7 ದಿನಗಳು ₹ 1,80,000/–	ಫಿನ್‌ಲ್ಯಾಂಡ್ ಮತ್ತು ಸ್ವೀಡೆನ್ 11 ದಿನಗಳು ₹ 2,60,000/–

www.trawelmart.com www.trawelmart.com www.trawelmart.com www.trawelmart.com www.trawelmart.com

enquiry@trawelmart.com 080 4642 7999

ಬೆಂಗಳೂರು ನಂ. 357, ಟ್ರಾವೆಲ್ ಮಾರ್ಟ್ ಗೃಹ, 10ನೇ ಬಿ ಮುಖ್ಯ ರಸ್ತೆ, ಜಯನಗರ 3ನೇ ಬಡಾವಣೆ, ಬೆಂಗಳೂರು–560011

ಮಲ್ಲೇಶ್ವರಂ 1ನೇ ಟೆಂಪಲ್ ಸ್ಟ್ರೀಟ್, 20, 10ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560003.

ಎಚ್‌ಎಸ್‌ಆರ್ ಲೇಔಟ್ 9ನೇ ಮುಖ್ಯರಸ್ತೆ, ಸೆಕ್ಟರ್ 6 HSR ಲೇಔಟ್, ಬೆಂಗಳೂರು, ಕರ್ನಾಟಕ 560102

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಹಗುರ ಪ್ರಮಾಣದ ಮಳೆಯಾಗಲಿದೆ.

ಪರಪ್ಪನ ಅಗ್ರಹಾರ: ಮೊಬೈಲ್, ಸಿಮ್ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ವಿಚಾರಣಾಧೀನ ಕೈದಿಗಳು ಹಾಗೂ ಸಜಾ ಬಂದಿಗಳಿರುವ ವಿವಿಧ ಬ್ಯಾರಕ್‌ಗಳಲ್ಲಿ ಜೈಲಿನ ಸಿಬ್ಬಂದಿ ಬುಧವಾರ ರಾತ್ರಿ ದಿಢೀರ್ ದಾಳಿ ನಡೆಸಿ ಪರಿಶೀಲನೆ ನಡೆಸಿದರು. ಈ ವೇಳೆ ಮೊಬೈಲ್ ಹಾಗೂ ನಗದು ಪತ್ತೆಯಾಗಿದೆ.

ಪರಿಶೀಲನೆಯ ವೇಳೆ ನಾಲ್ಕು ಮೊಬೈಲ್ ಫೋನ್‌ಗಳು, ಐದು ಸಿಮ್ ಕಾರ್ಡ್‌ಗಳು, ಒಂದು ಚಾರ್ಜರ್ ಹಾಗೂ ₹15,880 ನಗದು ಪತ್ತೆಯಾಗಿದೆ. ಅವುಗಳನ್ನು ಜಪ್ತಿ ಮಾಡಲಾಗಿದೆ ಎಂದು ಕೇಂದ್ರ ಕಾರಾಗೃಹದ ಮೂಲಗಳು ತಿಳಿಸಿವೆ.

ಜೈಲಿನ ಸಹಾಯಕ ಸೂಪರಿಂಟೆಂಡೆಂಟ್ ಶಿವಾನಂದ ಶಿವಾಪುರ ಅವರ ನೇತೃತ್ವದ ತಂಡವು ಅಂದು ರಾತ್ರಿ 7.20ರಿಂದ ರಾತ್ರಿ 7.50ರವರೆಗೆ ಹಾಗೂ ಜೈಲರ್ ಎಚ್.ಎನ್.ಅಭಿಷೇಕ್ ನೇತೃತ್ವದ ತಂಡವು ಅಂದೇ ರಾತ್ರಿ 10.50ರಿಂದ 11.20ರ ವರೆಗೆ ವಿವಿಧ ಬ್ಯಾರಕ್‌ಗಳಿಗೆ ಭೇಟಿ ನೀಡಿ ಪರಿಶೀಲಿಸಿತು.

ನಿಷೇಧಿತ ವಸ್ತುಗಳನ್ನು ಸಾಗಿಸಿದವರು, ಕೃತ್ಯಕ್ಕೆ ಸಹಕಾರ ನೀಡಿದವರು ಹಾಗೂ ನಿಷೇಧಿತ ವಸ್ತುಗಳನ್ನು ಕಾರಾಗೃಹದಲ್ಲಿ ಉಪಯೋಗಿಸಿದವರ ವಿರುದ್ಧ ಕಾರಾಗೃಹ (ತಿದ್ದುಪಡಿ) ಅಧಿನಿಯಮ-2022ರ ಕಲಂ 42ರ ಅನ್ವಯ ಪ್ರಕರಣ ದಾಖಲಿಸಿಕೊಂಡು ಕ್ರಮ ಜರುಗಿಸಲು ಪರಪ್ಪನ ಅಗ್ರಹಾರ ಠಾಣೆಗೆ ದೂರು ನೀಡಲಾಗಿದೆ. ದೂರು ಮೇರೆಗೆ ಎಫ್‌ಐಆರ್ ದಾಖಲಾಗಿದೆ ಎಂದು ಮೂಲಗಳು ಹೇಳಿವೆ.

ಪಲ್ಲವಿ ಮಾನಸಿಕವಾಗಿ ಸದೃಢ: ವರದಿ

ರಾಜ್ಯದ ನಿವೃತ್ತ ಡಿಜಿ ಮತ್ತು ಐಜಿಪಿ ಓಂ ಪ್ರಕಾಶ್ ಹತ್ಯೆ ಪ್ರಕರಣ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- 15 ದಿನ ಆಪ್ತ ಸಮಾಲೋಚನೆ
- ನಿಮ್ಹಾನ್ಸ್ ಆಸ್ಪತ್ರೆ ವೈದ್ಯರಿಂದ ವರದಿ

ಬೆಂಗಳೂರು: ರಾಜ್ಯದ ನಿವೃತ್ತ ಪೊಲೀಸ್ ಮಹಾನಿರ್ದೇಶಕ (ಡಿಜಿ ಮತ್ತು ಐಜಿಪಿ) ಓಂ ಪ್ರಕಾಶ್ (68) ಕೊಲೆ ಪ್ರಕರಣದಲ್ಲಿ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ಅವರ ಪತ್ನಿ ಪಲ್ಲವಿ ಅವರು 'ಮಾನಸಿಕವಾಗಿ ಸದೃಢರಾಗಿದ್ದಾರೆ' ಎಂದು ನಿಮ್ಹಾನ್ಸ್ ವೈದ್ಯರು ವರದಿ ಸಲ್ಲಿಸಿದ್ದಾರೆ ಎಂದು ಗೊತ್ತಾಗಿದೆ.

ಏಪ್ರಿಲ್ 20ರಂದು ಓಂ ಪ್ರಕಾಶ್ ಅವರ ಕೊಲೆ ನಡೆದಿತ್ತು. ಕೊಲೆ ಪ್ರಕರಣದ ಆರೋಪದಡಿ ಪಲ್ಲವಿ (ಮೊದಲ ಆರೋಪಿ) ಹಾಗೂ ಅವರ ಪುತ್ರಿ ಕೃತಿಕಾ (ಎರಡನೇ ಆರೋಪಿ) ವಿರುದ್ಧ ಎಚ್‌ಎಸ್‌ಆರ್ ಲೇಔಟ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು. ಏಪ್ರಿಲ್ 21ರಂದು ಪಲ್ಲವಿ ಅವರನ್ನು ಪೊಲೀಸರು ಬಂಧಿಸಿದ್ದರು. ಓಂ ಪ್ರಕಾಶ್ ಪುತ್ರ ಕಾರ್ತಿಕೇಶ್ ದೂರು ನೀಡಿದ್ದರು.

ಕೊಲೆ ಪ್ರಕರಣದ ತನಿಖೆ ಪೂರ್ಣಗೊಳಿಸಿದ್ದ ಸಿಸಿಬಿ ಪೊಲೀಸರು ಕಳೆದ ವಾರ ನ್ಯಾಯಾಲಯಕ್ಕೆ 1,150 ಪುಟಗಳ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಕೃತ್ಯ ನಡೆದ ಬಳಿಕ ಪಲ್ಲವಿ ಅವರನ್ನು ಬಂಧಿಸಲು ಪೊಲೀಸರು ತೆರಳಿದ್ದರು. ಆಗ, ಪಲ್ಲವಿ ಅವರು ರಾದ್ಧಾಂತ ನಡೆಸಿದ್ದರು. ಮಾನಸಿಕ ಅಸ್ವಸ್ಥರಂತೆ ವರ್ತಿಸಿದ್ದರು. ಬಂಧನದ ಬಳಿಕ ಅವರನ್ನು ನಿಮ್ಹಾನ್ಸ್‌ಗೆ ದಾಖಲಿಸಿ ಆಪ್ತ ಸಮಾಲೋಚನೆಗೆ ಒಳಪಡಿಸಲಾಗಿತ್ತು. ಆ ವರದಿಯು ಪೊಲೀಸರ ಕೈಸೇರಿದೆ.

'ಪಲ್ಲವಿ ಆರೋಗ್ಯವಾಗಿದ್ದಾರೆ. ಅವರಿಗೆ ಯಾವುದೇ ಮಾನಸಿಕ ಕಾಯಿಲೆಗಳು ಇಲ್ಲವೆಂದು' ವರದಿಯಲ್ಲಿ ಉಲ್ಲೇಖಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

1981ರ ಬ್ಯಾಚ್ ಐಪಿಎಸ್ ಅಧಿಕಾರಿ ಹಾಗೂ ಡಿಜಿಪಿಯಾಗಿ ನಿವೃತ್ತರಾಗಿದ್ದ ಓಂಪ್ರಕಾಶ್ ಅವರನ್ನು ಎಚ್‌ಎಸ್‌ಆರ್ ಲೇಔಟ್‌ನಲ್ಲಿರುವ ಅವರ ಮನೆಯಲ್ಲಿ ಹಲವು ಬಾರಿ ಇರಿದು ಭೀಕರವಾಗಿ ಹತ್ಯೆ ಮಾಡಲಾಗಿತ್ತು. ಸಮಗ್ರ ತನಿಖೆಗಾಗಿ ಸಿಸಿಬಿಗೆ ಪ್ರಕರಣವನ್ನು ವರ್ಗಾವಣೆ ಮಾಡಲಾಗಿತ್ತು.

ಪಲ್ಲವಿ ಅವರಿಗೆ 15 ದಿನ ಆಪ್ತ ಸಮಾಲೋಚನೆ ನಡೆಸಿದ ವೈದ್ಯರು, ಆಕೆಯ ವೈಯಕ್ತಿಕ ವಿಚಾರಣೆ, ಸಿ.ಸಿ.ಟಿ.ವಿ ಕ್ಯಾಮೆರಾ ಕಣ್ಗಾವಲು, ಐಕ್ಯೂ ಪರೀಕ್ಷೆ ಹಾಗೂ ಪ್ರಶ್ನೋತ್ತರ, ಬುದ್ಧಿಮತ್ತೆ ಪರೀಕ್ಷೆ ಸೇರಿ ವಿವಿಧ ಪರೀಕ್ಷೆಗೆ ಒಳಪಡಿಸಲಾಗಿತ್ತು. 'ಅವರು ಮಾನಸಿಕವಾಗಿ ಸದೃಢವಾಗಿರುವುದು ಖಚಿತವಾಗಿದೆ. ಜತೆಗೆ, ಅವರು ಆರೋಗ್ಯವಾಗಿಯೂ ಇದ್ದಾರೆ' ಎಂದು ನಿಮ್ಹಾನ್ಸ್ ಆಸ್ಪತ್ರೆ ವೈದ್ಯರು ವರದಿ ಸಲ್ಲಿಸಿದ್ದಾರೆ.

ಪತಿ ಹತ್ಯೆ ಬಳಿಕ ಪಲ್ಲವಿ ತಮ್ಮ ಸ್ನೇಹಿತರ ವಾಟ್ಸ್‌ಆ್ಯಪ್ ಗ್ರೂಪ್‌ಗೆ ವಾಯ್ಸ್ ನೋಟ್ ಕಳುಹಿಸಿದ್ದರು. ಈ ವಾಯ್ಸ್ ನೋಟ್ ಸಂಗ್ರಹಿಸಿ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ (ಎಫ್‌ಎಸ್‌ಎಲ್) ಕಳುಹಿಸಲಾಗಿತ್ತು. ವರದಿಯಲ್ಲಿ ವಾಯ್ಸ್ ನೋಟ್‌ನಲ್ಲಿ ಇರುವ ಧ್ವನಿ ಹಾಗೂ ಪಲ್ಲವಿ ಧ್ವನಿ ತಾಳೆ ಆಗಿರುವುದು ದೃಢಪಟ್ಟಿದೆ ಎಂದು ಮೂಲಗಳು ಹೇಳಿವೆ.

ದೋಷಾರೋಪ ಪಟ್ಟಿಯಲ್ಲಿ ಏನಿದೆ?

'ಕೊಲೆ ಪ್ರಕರಣದಲ್ಲಿ ಪುತ್ರಿಯ ಪಾತ್ರ ಕಂಡುಬಂದಿಲ್ಲ. ಆಕೆಯ ಹೆಸರನ್ನು ದೋಷಾರೋಪ ಪಟ್ಟಿಯಿಂದ ಕೈಬಿಟ್ಟು ಆರೋಪ ಮುಕ್ತಗೊಳಿಸಲಾಗಿದೆ. ಪಲ್ಲವಿ ಅವರೇ ಕೃತ್ಯ ಎಸಗಿರುವುದು ಸಾಬೀತಾಗಿದೆ. ಈ ಹಿಂದೆಯೇ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ' ಎಂದು ಮೂಲಗಳು ಹೇಳಿವೆ.

ಕಮಿಷನರೇಟ್ ವ್ಯಾಪ್ತಿಗೆ ಮತ್ತೆ ಎರಡು ಠಾಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮಾಂತರ ವ್ಯಾಪ್ತಿಯ ಇನ್ನೂ ಎರಡು ಪೊಲೀಸ್ ಠಾಣೆಗಳನ್ನು ಬೆಂಗಳೂರು ನಗರ ಕಮಿಷನರೇಟ್ ವ್ಯಾಪ್ತಿಗೆ ಸೇರ್ಪಡೆ ಮಾಡಿ ರಾಜ್ಯ ಸರ್ಕಾರ ಗುರುವಾರ ಆದೇಶಿಸಿದೆ.

ನೆಲಮಂಗಲ ಉಪ ವಿಭಾಗದ ಮಾದನಾಯಕನಹಳ್ಳಿ ಹಾಗೂ ದೊಡ್ಡಬಳ್ಳಾಪುರ ಉಪ ವಿಭಾಗದ ರಾಜಾನುಕುಂಟೆ ಪೊಲೀಸ್ ಠಾಣೆಗಳನ್ನು ನಗರ ಕಮಿಷನರೇಟ್ ವ್ಯಾಪ್ತಿಗೆ ಸೇರ್ಪಡೆ ಮಾಡಲಾಗಿದೆ. ಈ ಎರಡೂ ಠಾಣೆಗಳನ್ನು ವಾಯವ್ಯ (ಪೀಣ್ಯ) ಉಪ ವಿಭಾಗಕ್ಕೆ ಸೇರ್ಪಡೆ ಮಾಡಲಾಗಿದೆ.

ಈ ಹಿಂದೆ ಹೊರವಲಯದ ಕೆಲವು ಠಾಣೆಗಳನ್ನು ನಗರ ವ್ಯಾಪ್ತಿಗೆ ಸೇರ್ಪಡೆ ಮಾಡುವಾಗ ಈ ಎರಡೂ ಠಾಣೆಗಳನ್ನು ಕೈಬಿಡಲಾಗಿತ್ತು. ರಾಜಾನುಕುಂಟೆ ಹಾಗೂ ಮಾದನಾಯಕನಹಳ್ಳಿ ಪೊಲೀಸ್ ಠಾಣೆಗಳನ್ನು ನಗರ ಪೊಲೀಸ್ ಕಮಿಷನರೇಟ್ ವ್ಯಾಪ್ತಿಗೆ ಸೇರಿಸುವಂತೆ ರಾಜ್ಯ ಪೊಲೀಸ್ ಮಹಾನಿರ್ದೇಶಕ ಎಂ.ಎ.ಸಲೀಂ ಅವರಿಗೆ ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್ ಅವರು ಕಳೆದ ಆಗಸ್ಟ್‌ನಲ್ಲಿ ಪ್ರಸ್ತಾವ ಸಲ್ಲಿಸಿದ್ದರು.

ರಾಜಾನುಕುಂಟೆ ಹಾಗೂ ಮಾದನಾಯಕನಹಳ್ಳಿ ಠಾಣಾ ವ್ಯಾಪ್ತಿಯ 40 ಹಳ್ಳಿಗಳು ಈಗಾಗಲೇ ಕಮಿಷನರೇಟ್ ವ್ಯಾಪ್ತಿಯಲ್ಲಿವೆ. ಹೊರವಲಯದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವುದು ಹಾಗೂ ಅಪರಾಧಗಳಿಗೆ ಕಡಿವಾಣ ಹಾಕಲು ಈ ಠಾಣೆಗಳನ್ನು ಕಮಿಷನರೇಟ್ ವ್ಯಾಪ್ತಿಗೆ ಸೇರಿಸಬೇಕು ಎಂದು ಪ್ರಸ್ತಾವದಲ್ಲಿ ಉಲ್ಲೇಖಿಸಲಾಗಿತ್ತು.

ರಾಜಾನುಕುಂಟೆ ಠಾಣೆ ವ್ಯಾಪ್ತಿಯಲ್ಲಿ ಕಾಲೇಜುಗಳು ಹೆಚ್ಚಿವೆ. ವಿದೇಶಿ ಪ್ರಜೆಗಳು ಹೆಚ್ಚಾಗಿ ವಾಸ ಮಾಡುತ್ತಿದ್ದು, ಮನೆಗಳ್ಳತನ ಮತ್ತು ಡ್ರಗ್ಸ್ ಮಾರಾಟ ದಂಧೆಯೂ ನಡೆಯುತ್ತಿದೆ. ಮಾದನಾಯಕನಹಳ್ಳಿ ಠಾಣಾ ವ್ಯಾಪ್ತಿಯ ಗ್ರಾಮಗಳಲ್ಲಿ ಜನದಟ್ಟಣೆ, ಕೈಗಾರಿಕೆಗಳು ಹಾಗೂ ವಾಣಿಜ್ಯ ಸಂಕೀರ್ಣಗಳು, ವಸತಿ ಸಮುಚ್ಚಯಗಳಿವೆ. ಈ ಠಾಣೆಯನ್ನು ನಗರ ವ್ಯಾಪ್ತಿಗೆ ಸೇರ್ಪಡೆ ಮಾಡಿದರೆ ಸಾರ್ವಜನಿಕರ ಕುಂದುಕೊರತೆಗಳನ್ನು ಪರಿಹರಿಸಲು ಹಾಗೂ ತ್ವರಿತವಾಗಿ ಪೊಲೀಸ್ ಠಾಣೆಗೆ ಹೋಗಿ ದೂರು ನೀಡಲು ಅನುಕೂಲ ಆಗಲಿದೆ ಎಂದೂ ಪ್ರಸ್ತಾವದಲ್ಲಿ ಕೋರಲಾಗಿತ್ತು.



ಮಾಳಗಾಲದಲ್ಲಿ ಅಕ್ರಮ ಶೆಡ್‌ಗಳನ್ನು ತೆರವು ಮಾಡಲಾಯಿತು

₹35 ಕೋಟಿ ಮೌಲ್ಯದ ಆಸ್ತಿ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಕಾರ್ಯಾಚರಣೆ ನಡೆಸಿ, ಮಾಳಗಾಲದಲ್ಲಿ ₹35 ಕೋಟಿ ಮೌಲ್ಯದ ಆಸ್ತಿ ವಶಪಡಿಸಿಕೊಂಡಿದೆ.

ಬೆಂಗಳೂರು ಉತ್ತರ ತಾಲ್ಲೂಕಿನ ಯಶವಂತಪುರ ಹೋಬಳಿಯ ಮಾಳಗಾಲ ಗ್ರಾಮದ ಸರ್ವೆ ನಂ. 9ರಲ್ಲಿ 22 ಗುಂಟೆ ಪ್ರದೇಶದಲ್ಲಿ ಅನಧಿಕೃತವಾಗಿ ನಿರ್ಮಿಸಿದ್ದ ಶೆಡ್‌ಗಳನ್ನು ಜೆಸಿಬಿ ಮೂಲಕ ತೆರವುಗೊಳಿಸಿ, ಕೋಟ್ಯಂತರ ರೂಪಾಯಿ ಮೌಲ್ಯದ ಪ್ರದೇಶವನ್ನು ಪ್ರಾಧಿಕಾರ ವಶಪಡಿಸಿಕೊಂಡಿತು. ಬಿಡಿಎ ಕಾರ್ಯನಿರತ ಪಡೆಯ ಆರಕ್ಷಕ ಅಧೀಕ್ಷಕ, ಪಶ್ಚಿಮ ವಿಭಾಗದ ಕಾರ್ಯಪಾಲಕ ಎಂಜಿನಿಯರ್, ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಹಾಗೂ ಸ್ಥಳೀಯ ಪೊಲೀಸರ ಸಹಕಾರದೊಂದಿಗೆ ಕಾರ್ಯಾಚರಣೆ ನಡೆಸಲಾಯಿತು.

ವಿಭಜಕಕ್ಕೆ ಬೈಕ್ ಡಿಕ್ಕಿ: ಟೆಕಿ ಸಾವು

ಬೆಂಗಳೂರು: ಯಲಹಂಕ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಿಯಂತ್ರಣ ತಪ್ಪಿದ ಬೈಕ್‌ವೊಂದು ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದು ಗಂಭೀರವಾಗಿ ಗಾಯಗೊಂಡಿದ್ದ ಟೆಕಿಯೊಬ್ಬರು ಮೃತಪಟ್ಟಿದ್ದಾರೆ.

ಅಟ್ಟೂರು ಲೇಔಟ್ ನಿವಾಸಿ ಆನಂದ್ (35) ಮೃತಪಟ್ಟವರು.

ಚಿಂತಾಮಣಿಯ ಆನಂದ್ ಅವರು ಮಾನ್ಯತಾ ಟೆಕ್ ಪಾರ್ಕ್‌ನ ಸಾಫ್ಟ್‌ವೇರ್ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು.

'ಬುಧವಾರ ರಾತ್ರಿ ಕೆಲಸ ಮುಗಿಸಿಕೊಂಡು ಬೈಕ್‌ನಲ್ಲಿ ಮನೆಯತ್ತ ತೆರಳುತ್ತಿದ್ದರು. ನ್ಯಾಯಾಂಗ ಬಡಾವಣೆಯ ಬಳಿ ಬೈಕ್ ನಿಯಂತ್ರಣ ತಪ್ಪಿ ರಸ್ತೆ ವಿಭಜಕಕ್ಕೆ ಹೊಡೆದಿದೆ. ಆಗ ಬೈಕ್ ಸಹಿತ ರಸ್ತೆಗೆ ಉರುಳಿ ಬಿದ್ದ ಅವರು ಗಂಭೀರವಾಗಿ ಗಾಯಗೊಂಡಿದ್ದರು. ಸ್ಥಳೀಯರು ಅವರನ್ನು ಆಸ್ಪತ್ರೆಗೆ ದಾಖಲಿಸಿದ್ದರು. ಅಲ್ಲಿ ಮೃತಪಟ್ಟಿದ್ದಾರೆ' ಎಂದು ಸಂಚಾರ ಪೊಲೀಸರು ಹೇಳಿದರು.

ಸಾರ್ವಜನಿಕರ ಆಕ್ರೋಶ: 'ಆನಂದ್ ಅವರು ರಸ್ತೆಗೆ ಬಿದ್ದ ರಭಸಕ್ಕೆ ಗಂಭೀರವಾಗಿ ಗಾಯಗೊಂಡಿದ್ದರು. ಅವರಿಗೆ ರಕ್ತಸ್ರಾವ ಆಗಿತ್ತು. ಆಂಬುಲೆನ್ಸ್ ಮೂಲಕ ಗಾಯಾಳುವನ್ನು ಆಸ್ಪತ್ರೆಗೆ ಕರೆದೊಯ್ಯಲು ಹರಸಾಹಸ ಪಡಬೇಕಾಯಿತು. ರಸ್ತೆಯಲ್ಲಿ ವಿಪರೀತ ದಟ್ಟಣೆ ಇತ್ತು. ವಾಹನಗಳು ಮುಂದಕ್ಕೆ ಸಾಗುತ್ತಿರಲಿಲ್ಲ. ಆಂಬುಲೆನ್ಸ್ ಮುಂದಕ್ಕೆ ಸಾಗಲು ಅವಕಾಶ ಸಿಗಲಿಲ್ಲ. ಸಕಾಲದಲ್ಲಿ ಅವರನ್ನು ಆಸ್ಪತ್ರೆಗೆ ದಾಖಲಿಸಿದ್ದರೆ ಜೀವ ಉಳಿಯುತ್ತಿತ್ತು' ಎಂದು ಸ್ಥಳೀಯರು ಹೇಳಿದರು.

ದೇವನಹಳ್ಳಿಯಲ್ಲಿರುವ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ 'ನಮ್ಮ ಮೆಟ್ರೊ' ಕಾಮಗಾರಿ ನಿಧಾನವಾಗಿ ಸಾಗುತ್ತಿದ್ದು, ಪ್ರತಿನಿತ್ಯ ಈ ಮಾರ್ಗದಲ್ಲಿ ವಾಹನ ದಟ್ಟಣೆ ಉಂಟಾಗುತ್ತಿದೆ. ಬೇಗನೆ ಕಾಮಗಾರಿ ಪೂರ್ಣಗೊಳಿಸುವಂತೆ ಬಿಎಂಆರ್‌ಸಿಎಲ್‌ಗೆ ಆಗ್ರಹಿಸಿದ್ದರೂ ಪ್ರಯೋಜನ ಆಗಿಲ್ಲ ಎಂದು ಸ್ಥಳೀಯರು ಆಕ್ರೋಶ ಹೊರಹಾಕಿದ್ದಾರೆ.

ಗಾಂಜಾ ವಶ

ದೇವನಹಳ್ಳಿ: ಬ್ಯಾಂಕಾಕ್‌ನಿಂದ ಗಾಂಜಾ ಕಳ್ಳಸಾಗಣೆ ಮಾಡುತ್ತಿದ್ದ ಪ್ರಯಾಣಿಕರನ್ನು ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬಂಧಿಸಿದ್ದು, 11.43 ಕೆ.ಜಿ ಗಾಂಜಾ ಜಪ್ತಿ ಮಾಡಲಾಗಿದೆ.

ನ.26ರಂದು ಟರ್ಮಿನಲ್-2ರಲ್ಲಿ ಪ್ರಯಾಣಿಕನನ್ನು ತಪಾಸಣೆ ಮಾಡಿದಾಗ 5 ಕೆ.ಜಿ ತೂಕದ ಗಾಂಜಾ ಸಿಕ್ಕಿದೆ. ಅದರ ಮೌಲ್ಯ ₹1.75 ಕೋಟಿ ಎಂದು ಅಂದಾಜಿಸಲಾಗಿದೆ. ಮತ್ತೊಬ್ಬ ಪ್ರಯಾಣಿಕನ ಬಳಿ ₹6.43 ಕೆ.ಜಿ ಗಾಂಜಾ ಸಿಕ್ಕಿದೆ. ಅದರ ಮೌಲ್ಯ ₹2.25 ಕೋಟಿ ಎಂದು ಕಸ್ಟಮ್ಸ್ ಅಧಿಕಾರಿಗಳು ತಿಳಿಸಿದ್ದು, ಇಬ್ಬರನ್ನು ಬಂಧಿಸಲಾಗಿದೆ.

'ಅಸೆಂಟ್ ಕನ್ನಡ ಕಲರವ' ಇಂದು

ಪೀಣ್ಯ ದಾಸರಹಳ್ಳಿ: ಹಾವನೂರು ಬಡಾವಣೆಯ ಅಸೆಂಟ್ ಪದವಿ ಪೂರ್ವ ಕಾಲೇಜು ವತಿಯಿಂದ 'ಅಸೆಂಟ್ ಕನ್ನಡ ಕಲರವ -2025' ಎಂಬ ಶೀರ್ಷಿಕೆಯಡಿ ಎರಡು ದಿನಗಳ ಕರ್ನಾಟಕ ರಾಜ್ಯೋತ್ಸವ ಆಚರಿಸಲಾಗುತ್ತದೆ ಎಂದು ಕಾಲೇಜಿನ ಪ್ರಾಂಶುಪಾಲ ಬಿ.ಎಂ. ವೆಂಕಟೇಶ್ ತಿಳಿಸಿದರು.

ಶಾಸಕ ಎಸ್. ಮುನಿರಾಜು ಅವರು ನ. 28ರ ಬೆಳಿಗ್ಗೆ 8:30ಕ್ಕೆ ಕನ್ನಡ ಧ್ವಜಾರೋಹಣ ಮಾಡಿ ಕಲಾತಂಡಗಳ ಜಾಥಾಕ್ಕೆ ಚಾಲನೆ ನೀಡುವರು. ಮಧ್ಯಾಹ್ನ 2 ಕ್ಕೆ ನಟ ಹೊನ್ನವಳ್ಳಿ ಕೃಷ್ಣ, ಸಾಹಿತಿ ಕಾಳೇಗೌಡ ನಾಗವಾರ, ಕಿರುತೆರೆ ನಟಿ ಪುನೀತ ಗೌಡ, ಪ್ರಾಧ್ಯಾಪಕ ಜಯಶಂಕರ್ ಹಲಗೂರು ಭಾಗವಹಿಸುವರು. ನ.29ರ ಬೆಳಿಗ್ಗೆ 9ಕ್ಕೆ ಕಾಲೇಜಿನ ಸಭಾಂಗಣದಲ್ಲಿ ಯುವ ಕವಿಗೋಷ್ಠಿ ಆಯೋಜಿಸಲಾಗಿದೆ.



ಕೆನರಾ ಬ್ಯಾಂಕ್ ಜೂಬಿಲಿ ಎಜುಕೇಷನ್ ಫಂಡ್ ಮತ್ತು ಯುಟಿಐ ಅಸೆಟ್ ಮ್ಯಾನೇಜ್‌ಮೆಂಟ್ ಕಂಪನಿ ಲಿಮಿಟೆಡ್ ಸಂಸ್ಥೆಗಳ ಸಿಎಸ್‌ಆರ್ ನಿಧಿಯಡಿ ಬೆಂಗಳೂರು ಮಹಿಳಾ ಸರ್ಕಾರಿ ಪಾಲಿಟೆಕ್ನಿಕ್‌ನಲ್ಲಿ ನಿರ್ಮಿಸಿರುವ ಕಂಪ್ಯೂಟರ್ ಲೈಬ್ರರಿ ಹಾಗೂ ಅನಿಮೇಶನ್ ಲ್ಯಾಬ್ ಹಸ್ತಾಂತರಿಸಲಾಯಿತು. ಯುಟಿಐ ಎಎಂಸಿ ನಿರ್ದೇಶಕ ಶೇಷಾದ್ರಿ, ಯುಟಿಐ ಉಪಾಧ್ಯಕ್ಷ ಸಿದ್ದಾರ್ಥ ದಾಸ್, ಕೆನರಾ ಬ್ಯಾಂಕ್ ಜೂಬಿಲಿ ಎಜುಕೇಷನ್ ಫಂಡ್ ಕಾರ್ಯಾಧ್ಯಕ್ಷ ಎಸ್. ಟಿ. ರಾಮಚಂದ್ರ, ಉಪಾಧ್ಯಕ್ಷ ಕೆ. ಎ. ಭಟ್, ಆನಂದಮೂರ್ತಿ, ಪ್ರಾಂಶುಪಾಲರಾದ ಮೀರಾಬಾಯಿ ಉಪಸ್ಥಿತರಿದ್ದರು

10 ತಿಂಗಳಲ್ಲಿ 715 ಮಂದಿ ಸಾವು

ಗುಂಡಿಬಿದ್ದ ರಸ್ತೆ, ವಿಳಂಬ ಕಾಮಗಾರಿಯಿಂದ ಹೆಚ್ಚಿನ ಅವಘಡ

• ಆದಿತ್ಯ ಕೆ.ಎ.

ಬೆಂಗಳೂರು: ಗುಂಡಿಬಿದ್ದ ರಸ್ತೆಗಳು, ಬೀದಿ ದೀಪಗಳ ಅವ್ಯವಸ್ಥೆ, ಅವೈಜ್ಞಾನಿಕ ರಸ್ತೆ ವಿಭಜಕ ನಿರ್ಮಾಣ, ವಿಳಂಬ ಕಾಮಗಾರಿ, ವಾಹನ ಚಾಲಕರ ಅತಿವೇಗ ಹಾಗೂ ಅಜಾಗರೂಕತೆಯ ಚಾಲನೆಯಿಂದ ನಗರದಲ್ಲಿ ಹೆಚ್ಚಿನ ಅಪಘಾತಗಳು ಸಂಭವಿಸುತ್ತಿವೆ. ಕಳೆದ 10 ತಿಂಗಳಲ್ಲಿ ಸಂಭವಿಸಿದ ಅಪಘಾತಗಳಿಂದ 715 ಮಂದಿ ಪ್ರಾಣ ಕಳೆದುಕೊಂಡಿದ್ದಾರೆ.

ಈ ಅವಧಿಯಲ್ಲಿ 3,985 ಅಪಘಾತಗಳು ಸಂಭವಿಸಿದ್ದು, 3,480 ಮಂದಿ ಗಾಯಗೊಂಡಿದ್ದಾರೆ. ಈ ಪೈಕಿ 691 ಮಂದಿ ಶಾಶ್ವತ ಅಂಗವಿಕಲತೆಗೆ ಒಳಗಾಗಿದ್ದಾರೆ ಎಂದು ನಗರದ ಸಂಚಾರ ಪೊಲೀಸರು ಹೇಳಿದರು.

2020ರಲ್ಲಿ ಮೂರು ಸಾವಿರ ಅಪಘಾತಗಳು ಸಂಭವಿಸಿದ್ದವು. 2024ರಲ್ಲಿ ಅಪಘಾತಗಳ ಸಂಖ್ಯೆ ಐದು ಸಾವಿರದ ಸಮೀಪಕ್ಕೆ ತಲುಪಿತ್ತು. ನಗರದಲ್ಲಿ ಪ್ರತಿನಿತ್ಯ ಅಂದಾಜು ಮೂರು ಸಾವಿರ ಹೊಸ ವಾಹನಗಳು ನೋಂದಣಿ ಆಗುತ್ತಿವೆ. ವಾಹನಗಳ ಸಂಖ್ಯೆ ಹೆಚ್ಚಾದಂತೆ ದಟ್ಟಣೆಯೂ ತೀವ್ರ ಸಮಸ್ಯೆಯಾಗಿ ಕಾಡುತ್ತಿದೆ.

ದ್ವಿಚಕ್ರ ವಾಹನ, ಕೆಎಸ್‌ಆರ್‌ಟಿಸಿ–ಬಿಎಂಟಿಸಿ ಬಸ್, ಲಾರಿ, ಟಿಪ್ಪರ್, ಕಾರು, ಜೀಪು, ಕಸ ಸಂಗ್ರಹಿಸುವ ಲಾರಿ ನಡುವೆ ಅಪಘಾತಗಳು ಸಂಭವಿಸುತ್ತಿವೆ. ಹೆಲ್ಮೆಟ್ ಧರಿಸದೇ ದ್ವಿಚಕ್ರ ವಾಹನ ಚಾಲನೆಯಿಂದ ಸಾವುಗಳು ಸಂಭವಿಸುತ್ತಿವೆ. ಸ್ಕೈವಾಕ್ ಇಲ್ಲದ ಸ್ಥಳಗಳಲ್ಲಿ ರಸ್ತೆದಾಟುವ ಪಾದಚಾರಿಗಳಿಗೆ ವಾಹನಗಳು ಡಿಕ್ಕಿ ಹೊಡೆದು ಸಾವಿಗೆ ಕಾರಣವಾಗುತ್ತಿವೆ.

ನೈಸ್ ರಸ್ತೆಯಲ್ಲೂ ಅತಿವೇಗ: ನೈಸ್ ರಸ್ತೆಯಲ್ಲಿ ವೇಗದ ಮಿತಿ ನಿಯಮ ಜಾರಿ ಮಾಡಲಾಗಿದೆ. ಆದರೆ, ಆ ನಿಯಮ ಜಾರಿ ಆಗುತ್ತಿಲ್ಲ. ವಾಹನಗಳು ವೇಗವಾಗಿ ಸಾಗುತ್ತಿವೆ. ನೈಸ್ ರಸ್ತೆಯ ಕೆಲವು ಸ್ಥಳಗಳಲ್ಲಿ ಸರಿಯಾದ ಬೆಳಕಿನ ವ್ಯವಸ್ಥೆಯಿಲ್ಲ. ಅಪಘಾತ ವಲಯಗಳೂ ಸೇರಿ ಹಲವು ಕಡೆ ಅಪಘಾತಗಳು ಸಂಭವಿಸುತ್ತಿವೆ. ನೈಸ್ ರಸ್ತೆ ಉತ್ತಮವಾಗಿದ್ದರೂ ವಾಹನಗಳ ಅತಿವೇಗವು ಸಾವು–ನೋವಿಗೆ ಕಾರಣವಾಗುತ್ತಿದೆ.

ಬಳ್ಳಾರಿ ರಸ್ತೆ, ಹೊಸೂರು ರಸ್ತೆ ಹಾಗೂ ತುಮಕೂರು ರಸ್ತೆಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ ಹೆಚ್ಚಿನ ಅಪಘಾತ ಸಂಭವಿಸಿವೆ. ಈ ಮಾರ್ಗದಲ್ಲಿ ಅಪಘಾತಗಳನ್ನು ಕಡಿಮೆ ಮಾಡಲು ಪ್ರಯತ್ನಿಸಲಾಗುತ್ತಿದೆ. ಕ್ಯಾಮೆರಾ ಅಳವಡಿಕೆ, ಅಲ್ಲಲ್ಲಿ ವೈಜ್ಞಾನಿಕವಾಗಿ ಹಂಪ್ಸ್ ನಿರ್ಮಾಣ, ಬೆಳಕಿನ ವ್ಯವಸ್ಥೆ ಮಾಡಲಾಗುತ್ತಿದೆ. ರಸ್ತೆಗಳಲ್ಲಿ ಗುಂಡಿ ಬಿದ್ದಿರುವುದನ್ನು ತಕ್ಷಣವೇ ಮುಚ್ಚುವಂತೆ ಸಂಬಂಧಪಟ್ಟ ಆಡಳಿತಕ್ಕೆ ತಿಳಿಸಲಾಗುತ್ತಿದೆ ಎಂದು ಸಂಚಾರ ಪೊಲೀಸ್ ವಿಭಾಗದ ಅಧಿಕಾರಿಯೊಬ್ಬರು ತಿಳಿಸಿದರು.

ವಿಳಂಬ ಕಾಮಗಾರಿ: ದೇವನಹಳ್ಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ 'ನಮ್ಮ ಮೆಟ್ರೊ' ಕಾಮಗಾರಿ ನಿಧಾನವಾಗಿ ಸಾಗುತ್ತಿದ್ದು, ವಾಹನ ದಟ್ಟಣೆ ಸಮಸ್ಯೆ ಕಾಡುತ್ತಿದೆ. ಕಾಮಗಾರಿಗಾಗಿ ಅಲ್ಲಲ್ಲಿ ಬ್ಯಾರಿಕೇಡ್ ಅಳವಡಿಸಲಾಗಿದೆ. ಈ ಬ್ಯಾರಿಕೇಡ್‌ಗಳಿಗೆ ವಾಹನಗಳು ಡಿಕ್ಕಿಯಾಗಿ ಅವಘಡಗಳು ಸಂಭವಿಸುತ್ತಿವೆ. ಕ್ಯಾಬ್‌ಗಳಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ತೆರಳಬೇಕಿದ್ದವರು ಪ್ರತಿನಿತ್ಯ ಪರದಾಡುತ್ತಿದ್ದಾರೆ ಎಂದು ಸ್ಥಳೀಯರು ಆಕ್ರೋಶ ಹೊರಹಾಕಿದ್ದಾರೆ.

ಆಗಸ್ಟ್‌ನಲ್ಲಿ ಏಳು ಮಂದಿ ಸಾವು

ಬಿಎಂಟಿಸಿ ಬಸ್ ಅಪಘಾತಗಳಲ್ಲಿ 2024ರ ಜ.1ರಿಂದ 2025ರ ಜುಲೈ ಅಂತ್ಯದವರೆಗೆ 80 ಮಂದಿ ಮೃತಪಟ್ಟಿದ್ದರು. ಕಳೆದ ಆಗಸ್ಟ್‌ನಲ್ಲಿ (ಒಂದೇ ತಿಂಗಳಲ್ಲಿ) ಬಿಎಂಟಿಸಿ ಬಸ್ ಡಿಕ್ಕಿಯಾಗಿ, 7 ಮಂದಿ ಮೃತಪಟ್ಟಿದ್ದರು. ಪೀಣ್ಯ ಮೊದಲ ಹಂತ, ರೇಷ್ಮೆ ಸಂಸ್ಥೆ ಬಳಿ, ಪೀಣ್ಯ 2ನೇ ಹಂತ, ಚಾಮರಾಜಪೇಟೆ, ಮಡಿವಾಳ, ರೂಪೇನಾ ಅಗ್ರಹಾರ, ಸಂಜಯ್ ನಗರ, ಮಾರುತಿನಗರದಲ್ಲಿ ಬಿಎಂಟಿಸಿ ಬಸ್ ಚಾಲಕರ ನಿರ್ಲಕ್ಷ್ಯ, ಅತಿವೇಗದ ಚಾಲನೆಯಿಂದ ಮಹಿಳೆ, ಟೆಕಿ, ವೃದ್ಧರು, ವಿದ್ಯಾರ್ಥಿಗಳು ಪ್ರಾಣ ಕಳೆದುಕೊಂಡಿದ್ದರು. ಅವರ ಕುಟುಂಬಸ್ಥರು ಕಣ್ಣೀರಿನಲ್ಲಿ ಕೈತೊಳೆಯುವಂತೆ ಆಗಿದೆ. ಬಿಎಂಟಿಸಿ ಎಲೆಕ್ಟ್ರಿಕ್ ಬಸ್‌ಗಳಿಂದಲೇ ಹೆಚ್ಚಿನ ಅಪಘಾತಗಳು ಸಂಭವಿಸುತ್ತಿವೆ ಎಂದು ಸಂಚಾರ ಪೊಲೀಸರು ಹೇಳಿದರು.

ನಗರದಲ್ಲಿ ಸಂಭವಿಸಿದ ಅಪಘಾತಗಳ ವಿವರ

ವರ್ಷ	ಅಪಘಾತಗಳು	ಮೃತಪಟ್ಟವರು	ಗಾಯಾಳು
2020	3,236	647	2,760
2021	3,213	654	2,820
2022	3,822	772	3,189
2023	4,974	910	4,191
2024	4,769	894	4,022
2025(ಅ.31ರ ವರೆಗೆ)	3,985	715	3,480

ಬಿಎಂಟಿಸಿ ಬಸ್ ಅಪಘಾತ: ಸಾವು– ನೋವು

- ಫೆ.28: ಬನಶಂಕರಿ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ 2 ಬಿಎಂಟಿಸಿ ಬಸ್‌ಗಳ ಮಧ್ಯೆ ಆಟೊ ಸಿಲುಕಿ ಆಟೊ ಚಾಲಕ, ನಿವೃತ್ತ ವೈದ್ಯ ಸ್ಥಳದಲ್ಲೇ ಸಾವು
- ಆಗಸ್ಟ್ 19: ಸಂಜಯನಗರ ಮುಖ್ಯರಸ್ತೆಯಲ್ಲಿ ಬಿಎಂಟಿಸಿ ಬಸ್ ಡಿಕ್ಕಿಯಾಗಿ ಟೆಕಿ ಸ್ಥಳದಲ್ಲೇ ಸಾವು
- ಆಗಸ್ಟ್ 21: ಯಲಹಂಕದ ಕೋಗಿಲು ಕ್ರಾಸ್‌ನ ಮಾರುತಿನಗರದ ಸಮೀಪ ಬಿಎಂಟಿಸಿ ಬಸ್‌ನ ಚಕ್ರ ಹರಿದು ಐದನೇ ತರಗತಿ ವಿದ್ಯಾರ್ಥಿನಿ ಸಾವು
- ಅ.11: ಟ್ಯೂಷನ್ ಮುಗಿಸಿಕೊಂಡು ತನ್ನ ಸಹೋದರಿ ಮತ್ತು ಸ್ನೇಹಿತೆಯರ ಜತೆ ಮನೆಗೆ ತೆರಳುತ್ತಿದ್ದ ವಿದ್ಯಾರ್ಥಿನಿಗೆ ಬಿಎಂಟಿಸಿ ಬಸ್ ಡಿಕ್ಕಿಯಾಗಿ ವಿದ್ಯಾರ್ಥಿನಿ ಸ್ಥಳದಲ್ಲೇ ಸಾವು. ರಾಜಾಜಿನಗರದ ಒಂದನೇ ಹಂತದಲ್ಲಿ ಘಟನೆ
- ನ.20: ಮಡಿವಾಳ, ವಿಜಯನಗರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸಂಭವಿಸಿದ್ದ ಎರಡು ಪ್ರತ್ಯೇಕ ಅಪಘಾತಗಳಲ್ಲಿ ವೃದ್ಧರಿಬ್ಬರ ಸಾವು

ಮೊಬೈಲ್ ಫೋನ್ ಬಳಸಿದರೆ ವಜಾ

ಬಿಎಂಟಿಸಿ ಬಸ್ ಚಾಲಕರು ಕರ್ತವ್ಯದಲ್ಲಿ ಇರುವಾಗ ಮೊಬೈಲ್ ಫೋನ್ ಬಳಸುವುದನ್ನು ನಿಷೇಧಿಸಲಾಗಿದೆ. ಆದರೂ, ಮೊಬೈಲ್‌ನಲ್ಲಿ ಮಾತನಾಡುತ್ತಾ, ಇಯರ್ ಫೋನ್‌ನಲ್ಲಿ ಹಾಡು ಕೇಳುತ್ತಾ ಬಸ್ ಚಲಾಯಿಸುತ್ತಿರುವುದು ಕಂಡುಬಂದಿದೆ. ಆ ರೀತಿಯ ವರ್ತನೆ ಕಂಡುಬಂದರೆ ಅಮಾನತು ಅಥವಾ ಕೆಲಸದಿಂದ ವಜಾ ಮಾಡಲು ತೀರ್ಮಾನಿಸಲಾಗಿದೆ ಎಂದು ಮೂಲಗಳು ಹೇಳಿವೆ.

ಮೊಬೈಲ್‌ನಲ್ಲಿ ಮಾತನಾಡುತ್ತಾ ಬಸ್ ಚಾಲನೆ ಮಾಡುತ್ತಿದ್ದರೆ, ನಿರ್ವಾಹಕರು, ಪ್ರಯಾಣಿಕರು ಚಾಲಕರಿಗೆ ಬುದ್ಧಿಮಾತು ಹೇಳಬೇಕು. ಬಿಎಂಟಿಸಿ ಬಸ್ ಚಾಲಕರ ಅತಿವೇಗ ಹಾಗೂ ನಿರ್ಲಕ್ಷ್ಯದ ಚಾಲನೆಯಿಂದ ಈ ವರ್ಷ ಹೆಚ್ಚಿನ ಅಪಘಾತಗಳು ಸಂಭವಿಸಿವೆ. ಯಾವ ಸ್ಥಳದಲ್ಲಿ ಬಸ್ ನಿಲುಗಡೆ ಮಾಡಬೇಕು, ದಟ್ಟಣೆ ರಸ್ತೆಯಲ್ಲಿ ವೇಗ ಎಷ್ಟಿರಬೇಕು ಎಂಬುದರ ಕುರಿತು ಚಾಲಕರಿಗೆ ಸಂಚಾರ ನಿರ್ವಹಣಾ ಕೇಂದ್ರದಲ್ಲಿ ತರಬೇತಿ ನೀಡಲಾಗುತ್ತಿದೆ ಎಂದು ಸಂಚಾರ ಪೊಲೀಸರು ತಿಳಿಸಿದ್ದಾರೆ.

ವಿನ್‌ಝೋ ಗೇಮಿಂಗ್ ಕಂಪನಿಯ ಪ್ರವರ್ತಕರು ಇ.ಡಿ ಕಸ್ಟಡಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನುಷ್ಯರ ಸ್ವರೂಪದಲ್ಲಿ ಆಟವಾಡುವಂತೆ ರೂಪಿಸಿದ್ದ ಕೃತಕ ಬುದ್ಧಿಮತ್ತೆ ತಂತ್ರಾಂಶಗಳ ಮೂಲಕ ಆನ್‌ಲೈನ್ ಜೂಜು ನಡೆಸಿ, ಚಂದಾದಾರರಿಗೆ ಸಾವಿರಾರು ಕೋಟಿ ವಂಚಿಸಿದ್ದ ಪ್ರಕರಣದಲ್ಲಿ ವಿನ್‌ಝೋ ಗೇಮಿಂಗ್ ಕಂಪನಿಯ ಇಬ್ಬರು ಪ್ರವರ್ತಕರನ್ನು ಜಾರಿ ನಿರ್ದೇಶನಾಲಯವು (ಇ.ಡಿ) ಹತ್ತು ದಿನಗಳ ಕಸ್ಟಡಿಗೆ ಪಡೆದಿದೆ.

ಇ.ಡಿ ದೆಹಲಿ ಕೇಂದ್ರ ಕಚೇರಿ ಈ ಪ್ರಕರಣದ ತನಿಖೆ ನಡೆಸುತ್ತಿದ್ದು, ಕಂಪನಿಯ ಪ್ರವರ್ತಕರಾದ ಸೌಮ್ಯಸಿಂಗ್ ರಾಥೋಡ್, ಪವನ್ ನಂದಾ ಅವರನ್ನು ಬುಧವಾರ ವಿಚಾರಣೆಗೆ ಕರೆದಿತ್ತು. ಬೆಂಗಳೂರಿನ ಶಾಂತಿನಗರದ ಇ.ಡಿ ವಲಯ ಕಚೇರಿಯಲ್ಲಿ ರಾತ್ರಿಯವರೆಗೆ ಅವರನ್ನು ವಿಚಾರಣೆಗೆ ಒಳಪಡಿಸಲಾಗಿತ್ತು.

ಆನಂತರ ಆರ್ಥಿಕ ಅಪರಾಧಗಳ ವಿಶೇಷ ನ್ಯಾಯಾಲಯದ ನ್ಯಾಯಾಧೀಶರ ಎದುರು ಹಾಜರುಪಡಿಸಿ, ಒಂದು ದಿನದ ಅವಧಿಗೆ ಕಸ್ಟಡಿಗೆ ಪಡೆಯಲಾಗಿತ್ತು. ಗುರುವಾರ ಮತ್ತೆ ಕೋರ್ಟ್‌ಗೆ ಹಾಜರುಪಡಿಸಿ, ಹತ್ತು ದಿನಗಳವರೆಗೆ ಕಸ್ಟಡಿಗೆ ಪಡೆಯಲಾಗಿದೆ.

ಇದೇ 18ರಿಂದ 22ರವರೆಗೆ ಈ ಕಂಪನಿಯ ವಿವಿಧ ಕಚೇರಿಗಳಲ್ಲಿ ಶೋಧ ನಡೆಸಿದ್ದ ಇ.ಡಿಯು ಒಟ್ಟು ₹505 ಕೋಟಿ ಮೊತ್ತದ ಠೇವಣಿ, ಹೂಡಿಕೆಗಳನ್ನು ಮುಟ್ಟುಗೋಲು ಹಾಕಿಕೊಂಡಿತ್ತು.

ಕಬ್ಬನ್ ಉದ್ಯಾನದಲ್ಲಿ ಅರಳಿದ ಪುಷ್ಪ ಲೋಕ

ಕರ್ನಾಟಕ ರಾಜ್ಯೋತ್ಸವ, ಮಕ್ಕಳ ದಿನಾಚರಣೆ ಅಂಗವಾಗಿ ಆಯೋಜಿಸಿರುವ ಹೂವುಗಳ ಹಬ್ಬಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಬ್ಬನ್ ಉದ್ಯಾನದಲ್ಲಿ ಬಣ್ಣ ಬಣ್ಣದ ಹೂವುಗಳಲ್ಲಿ ಅರಳಿದ ಹಂಪಿಯ ಕಲ್ಲಿನ ರಥ, ಹೂವು, ಹಾಗಲಕಾಯಿ ಹಾಗೂ ಕ್ಯಾಪ್ಸಿಕಂನಲ್ಲಿ ರಚಿಸಿದ ಆನೆಯ ಕಲಾಕೃತಿಗಳು, ಹಳದಿ ಮತ್ತು ಕೆಂಪು ಬಣ್ಣದ ಹೂವುಗಳಲ್ಲಿ ಮೂಡಿಬಂದಿರುವ ಕರ್ನಾಟಕದ ನಕ್ಷೆಯ ಮಾದರಿ, ಅಲ್ಲಲ್ಲಿ ಜೋಡಿಸಿ ಇಟ್ಟಿರುವ ಹೂವಿನ ಕುಂಡಗಳು ನೋಡುಗರ ಕಣ್ಮನ ಸೆಳೆಯುತ್ತಿವೆ.

ಕರ್ನಾಟಕ ರಾಜ್ಯೋತ್ಸವ ಹಾಗೂ ಮಕ್ಕಳ ದಿನಾಚರಣೆಯ ಅಂಗವಾಗಿ ತೋಟಗಾರಿಕೆ ಇಲಾಖೆಯ ವತಿಯಿಂದ ಇದೇ ಮೊದಲ ಬಾರಿಗೆ ಕಬ್ಬನ್ ಉದ್ಯಾನದಲ್ಲಿ ಆಯೋಜಿಸಿರುವ 'ಹೂವುಗಳ ಹಬ್ಬ'ಕ್ಕೆ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ಗುರುವಾರ ಚಾಲನೆ ನೀಡಿದರು. ಪ್ರದರ್ಶನವು ಡಿಸೆಂಬರ್ 7ರವರೆಗೆ ನಡೆಯಲಿದೆ.

ಕೆಂಪು ಮತ್ತು ಶ್ವೇತ ವರ್ಣದ ಹೂವುಗಳಲ್ಲಿ ರಚಿಸಿರುವ ಜಿಂಕೆ, ಹಳದಿ, ಕೆಂಪು ಮತ್ತು ಕೇಸರಿ ಬಣ್ಣದ ಪುಷ್ಪಗಳಲ್ಲಿ ಮಾಡಿರುವ ಅನಾನಸ್, ಕೆಂಪು ವರ್ಣದ ಹೂವುಗಳಲ್ಲಿ ಅರಳಿದ ಸೇಬು ಹಣ್ಣು, ಹಳದಿ ವರ್ಣದ ಹೂವುಗಳನ್ನು ಬಳಸಿಕೊಂಡು ರಚಿಸಿದ ಸೂರ್ಯಕಾಂತಿ ಹೂವಿನ ಮಾದರಿಗಳ ಮುಂಭಾಗದಲ್ಲಿ ಮಕ್ಕಳು, ಮಹಿಳೆಯರು ಸೇರಿದಂತೆ ಸಾರ್ವಜನಿಕರು ನಿಂತುಕೊಂಡು ಫೋಟೊ ತೆಗೆಸಿಕೊಂಡು ಖುಷಿಪಟ್ಟರು.

ಬ್ಯಾಂಡ್ ಸ್ಟ್ಯಾಂಡ್ ಆವರಣದಲ್ಲಿರುವ ಕಾರಂಜಿಯಲ್ಲಿ ಕೆಂಪು ಮತ್ತು ಶ್ವೇತ ವರ್ಣದ ಪುಷ್ಪಗಳನ್ನು ಬಳಸಿಕೊಂಡು ಡಾಲ್ಫಿನ್‌ಗಳ ಮಾದರಿಯನ್ನು ಆಕರ್ಷಕವಾಗಿ ನಿರ್ಮಿಸಲಾಗಿದೆ. ಪುಷ್ಪದಲ್ಲಿ ಅರಳಿರುವ ಟ್ರ್ಯಾಕ್ಟರ್, ಕೋಳಿಯ ಮಾದರಿಗಳನ್ನು ಸಾರ್ವಜನಿಕರು ಕಣ್ತುಂಬಿಕೊಳ್ಳಬಹುದು.

20 ಸಾವಿರದಿಂದ 25 ಸಾವಿರ ಹೂ ಕುಂಡಗಳನ್ನು ಕಬ್ಬನ್ ಉದ್ಯಾನದ ಬ್ಯಾಂಡ್ ಸ್ಟ್ಯಾಂಡ್ ಹತ್ತಿರ, ಜಯಚಾಮರಾಜೇಂದ್ರ ಒಡೆಯರ್ ಪ್ರತಿಮೆ ಮುಂಭಾಗದಲ್ಲಿ ಹಾಗೂ ಬಾಲಭವನದ ಆವರಣದಲ್ಲಿ ಜೋಡಿಸಿ ಇಡಲಾಗಿದೆ. ಬೆಳಿಗ್ಗೆ 6 ಗಂಟೆಯಿಂದ ಸಂಜೆ 7 ಗಂಟೆಯವರೆಗೆ ಪ್ರದರ್ಶನ ಇರಲಿದೆ. ವಯಸ್ಕರಿಗೆ ₹30 ಹಾಗೂ ಮಕ್ಕಳಿಗೆ ₹10 ಪ್ರವೇಶ ಶುಲ್ಕ ನಿಗದಿಪಡಿಸಲಾಗಿದೆ. ಶಾಲಾ ಸಮವಸ್ತ್ರ ಧರಿಸಿಕೊಂಡು ಬರುವ ಮಕ್ಕಳಿಗೆ ಉಚಿತ ಪ್ರವೇಶ ಇದೆ.

'ಮಕ್ಕಳನ್ನು ಆಕರ್ಷಿಸುವ ಮುಖ್ಯ ಉದ್ದೇಶದಿಂದ ಈ ಹೂಗಳ ಹಬ್ಬ ಆಯೋಜಿಸಲಾಗಿದೆ. ಇದರ ಜೊತೆಗೆ ಪ್ರತಿದಿನ ನೃತ್ಯ ಪ್ರದರ್ಶನ, ಸಂಗೀತ ಕಛೇರಿಗಳು, ಜಾನಪದ ಹಾಡು, ನೃತ್ಯ, ಡೊಳ್ಳು ಕುಣಿತ ಸೇರಿದಂತೆ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತದೆ' ಎಂದು ತೋಟಗಾರಿಕೆ ಇಲಾಖೆ ಅಧಿಕಾರಿಗಳು ತಿಳಿಸಿದರು.

'ಮೊದಲ ದಿನ ವಯಸ್ಕರು, ಮಕ್ಕಳೂ ಸೇರಿ 33,500 ಮಂದಿ ಹೂಗಳ ಹಬ್ಬ ವೀಕ್ಷಿಸಿದ್ದು, ₹18,500 ಪ್ರವೇಶ ಶುಲ್ಕ ಸಂಗ್ರಹವಾಗಿದೆ' ಎಂದಿದ್ದಾರೆ.



ಹೂವುಗಳಲ್ಲಿ ಅರಳಿದ ಜಿಂಕೆಯ ಮುಂಭಾಗದಲ್ಲಿ ಸಾರ್ವಜನಿಕರು ಫೋಟೊ ತೆಗೆಸಿಕೊಂಡರು

ಮುಖ್ಯಾಂಶಗಳು

- ಡಿಸೆಂಬರ್ 7ರವರೆಗೆ ನಡೆಯುವ ಹೂಗಳ ಹಬ್ಬ
- 25 ಸಾವಿರ ಹೂವಿನ ಕುಂಡಗಳ ಬಳಕೆ
- ಶಾಲಾ ಸಮವಸ್ತ್ರ ಧರಿಸಿಕೊಂಡು ಬರುವ ಮಕ್ಕಳಿಗೆ ಉಚಿತ ಪ್ರವೇಶ

ಹೂವುಗಳ ಹಬ್ಬದಲ್ಲಿ ಬಳಕೆಯಾಗಿರುವ ಪುಷ್ಪಗಳನ್ನು ತ್ಯಾಜ್ಯವಾಗಿಸದೇ ಅವುಗಳನ್ನು ಒಣಗಿಸಿ ಅಥವಾ ಸಂಸ್ಕರಿಸಿ ಮರುಬಳಕೆಗೆ ಯೋಗ್ಯವಾದ ವಸ್ತುಗಳನ್ನು ತಯಾರಿಸಬೇಕು

ಶಾಲಿನಿ ರಜನೀಶ್
ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ

100ಕ್ಕೂ ಹೆಚ್ಚು ಮಳಿಗೆ ಸ್ಥಾಪನೆ

ಒಟ್ಟು 100ಕ್ಕೂ ಹೆಚ್ಚು ಮಳಿಗೆಗಳನ್ನು ಸ್ಥಾಪಿಸಲಾಗಿದ್ದು, ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮ (ಕೆಪೆಕ್) 25 ಮಳಿಗೆಗಳಲ್ಲಿ ಸಿದ್ಧ ಸಿರಿಧಾನ್ಯ ಉತ್ಪನ್ನಗಳು, ಉಪ್ಪಿನಕಾಯಿ, ಚಟ್ನಿಪುಡಿ, ಪುಳಿಯೊಗರೆ ಮಿಶ್ರಣ, ಸಾಂಬಾರು ಪುಡಿ, ಚಿಕ್ಕಿ, ಒಣಹಣ್ಣು ಲಡ್ಡು, ಗಾಣದ ಎಣ್ಣೆ, ಖಾರದ ಪುಡಿ, ರಾಗಿ ಮಾಲ್ಟ್, ಹುರಿಹಿಟ್ಟು, ಜೋಳದ ರೊಟ್ಟಿ, ಸಾವಯವ ಬೆಲ್ಲ, ಗಿಣ್ಣು ಮೊದಲಾದ ಗುಣಮಟ್ಟದ ಆಹಾರ ಉತ್ಪನ್ನಗಳ ಪ್ರದರ್ಶನ ಹಾಗೂ ಮಾರಾಟಕ್ಕೆ ಅವಕಾಶ ಇದೆ.



ಕಬ್ಬನ್ ಉದ್ಯಾನದಲ್ಲಿ ನಡೆಯುತ್ತಿರುವ ಹೂವುಗಳ ಹಬ್ಬವನ್ನು ಸಾರ್ವಜನಿಕರು ಕಣ್ತುಂಬಿಕೊಂಡರು
ಪ್ರಜಾವಾಣಿ ಚಿತ್ರಗಳು: ಎಂ.ಎಸ್. ಮಂಜುನಾಥ್

ಶಸ್ತ್ರಾಸ್ತ್ರಗಳ ಪ್ರದರ್ಶನ

ಕಬ್ಬನ್ ಉದ್ಯಾನದ ಹೂವುಗಳ ಹಬ್ಬದಲ್ಲಿ ಬಿಎಸ್‌ಎಫ್‌ನ ವಿವಿಧ ಬಂದೂಕುಗಳು, ಮಾನವ ಆತ್ಮಾಹುತಿ ಮಾಡಿಕೊಳ್ಳುವ ಮಾದರಿ, ಸೈನ್ಯದಲ್ಲಿ ಬಳಸುವ ವಿವಿಧ ಪರಿಕರಗಳನ್ನು ವೀಕ್ಷಿಸಲು ಸಾರ್ವಜನಿಕರು ಸಾಲುಗಟ್ಟಿ ನಿಂತಿದ್ದರು. ಶಸ್ತ್ರಾಸ್ತ್ರಗಳ ಕುರಿತು ಮಕ್ಕಳು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಕೇಳಿದ ಪ್ರಶ್ನೆಗಳಿಗೆ ಬಿಎಸ್‌ಎಫ್ ಸಿಬ್ಬಂದಿ ಉತ್ತರ ನೀಡುತ್ತಿದ್ದರು.



ಹೂವುಗಳ ಹಬ್ಬದಲ್ಲಿ ತರಕಾರಿಗಳಲ್ಲಿ ರಚಿಸಿರುವ ಆನೆಯ ಮಾದರಿಯನ್ನು ಸಾರ್ವಜನಿಕರು ಕುತೂಹಲದಿಂದ ವೀಕ್ಷಿಸಿದರು

ಚಿಟಿಕೆ ಸುದ್ದಿ

ಕಾಡೆಮ್ಮೆ ಪುಂಡಾಟ



ಆನೇಕಲ್ ತಾಲ್ಲೂಕಿನ ಕಮ್ಮಸಂದ್ರದಲ್ಲಿ ಕಾಣಿಸಿಕೊಂಡ ಕಾಡೆಮ್ಮೆ

ಆನೇಕಲ್: ಕಳೆದ ಎರಡು ದಿನಗಳಿಂದ ಗ್ರಾಮಗಳಲ್ಲಿ ಸುತ್ತಾಡುತ್ತಾ ಭೀತಿ ಹುಟ್ಟಿಸಿರುವ ಕಾಡೆಮ್ಮೆ ಕಮ್ಮಸಂದ್ರ ಅಗ್ರಹಾರದಲ್ಲಿ ಗುರುವಾರ ಕಾಣಿಸಿಕೊಂಡಿದೆ. ದ್ವಿಚಕ್ರ ವಾಹನಗಳನ್ನು ಕೊಂಬಿನಿಂದ ಗುದ್ದಿ ಎಸೆದಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಕಾಡಿನಿಂದ ತಪ್ಪಿಸಿಕೊಂಡು ಬಂದಿರುವ ಕಾಡೆಮ್ಮೆ ಬ್ಯಾಗಡದೇನಹಳ್ಳಿ ಪಂಚಾಯಿತಿ ವ್ಯಾಪ್ತಿಯ ಸೊಪ್ಪಳ್ಳಿ, ದೊಡ್ಡಹಾಗಡೆ, ಕಮ್ಮಸಂದ್ರ ಅಗ್ರಹಾರದಲ್ಲಿ ಓಡಾಡುತ್ತಿದೆ. ರೈತರು ಮತ್ತು ಸಾರ್ವಜನಿಕರು ಆತಂಕಕ್ಕೆ ಒಳಗಾಗಿದ್ದಾರೆ. ಕಮ್ಮಸಂದ್ರದ ನಿರ್ಮಾಣ ಹಂತದಲ್ಲಿರುವ ಲೇಔಟ್‌ನಲ್ಲಿ ಬೀಡುಬಿಟ್ಟಿದೆ. ಕಾಡೆಮ್ಮೆ ಸೆರೆಗೆ ಅರಣ್ಯ ಇಲಾಖೆ ಸಿಬ್ಬಂದಿ ಡ್ರೋನ್ ಮೂಲಕ ಕಾರ್ಯಾಚರಣೆಗೆ ಮುಂದಾಗಿದ್ದಾರೆ.

ರೋಟರಿಯಿಂದ ಕರುನಾಡ ಸೊಬಗು

ನೆಲಮಂಗಲ: ಜಿಲ್ಲಾ ಮತ್ತು ಸ್ಥಳೀಯ ರೋಟರಿ ಸಂಸ್ಥೆ ವತಿಯಿಂದ ಶುಕ್ರವಾರ ಸಂಜೆ 5 ಗಂಟೆಗೆ ಅರಿಶಿನಕುಂಟೆಯ ಸಿ.ಕೆ.ಪ್ಯಾಲೇಸ್ ಕಲ್ಯಾಣಮಂಟಪದಲ್ಲಿ 'ಕರುನಾಡ ಸೊಬಗು' ಕನ್ನಡ ರಾಜ್ಯೋತ್ಸವವನ್ನು ಹಮ್ಮಿಕೊಳ್ಳಲಾಗಿದೆ ಎಂದು ಅಧ್ಯಕ್ಷ ಜಿ.ಆರ್.ನಾಗರಾಜು ತಿಳಿಸಿದ್ದಾರೆ.

'ಪ್ರಜಾವಾಣಿ' ಅಭಿಮತ ಸಂಪಾದಕ ರಘುನಾಥ.ಚ.ಹ ಅವರ ಮುಖ್ಯ ಭಾಷಣ ಇರಲಿದೆ. 90ಕ್ಕೂ ಹೆಚ್ಚು ರೋಟರಿ ಸಂಸ್ಥೆಗಳು ಭಾಗವಹಿಸಲಿವೆ. ನಾಡಿನ ಸಾಹಿತ್ಯ ಸಂಸ್ಕೃತಿ ಬಿಂಬಿಸುವ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಜಿಲ್ಲಾ ಪಾಲಕರಾದ ಎಲಿಜಬತ್ ಚೆರಿಯನ್, ಅಂತರ ರಾಷ್ಟ್ರೀಯ ರೋಟರಿ ನಿರ್ದೇಶಕರಾದ ಕೆ.ಪಿ.ನಾಗೇಶ್, ಸಮಿತಿ ಅಧ್ಯಕ್ಷರಾದ ಸಿ.ಜಿ.ಮಂಜುನಾಥ್ ಗೌಡ, ಕಾರ್ಯದರ್ಶಿ ಆರ್.ರವಿಕುಮಾರ್ ಉಪಸ್ಥಿತರಿರುವರು ಎಂದು ಪ್ರಕಟಣೆ ತಿಳಿಸಿದೆ.

ನಿಧನ ವಾರ್ತೆ

ರಾಮಪ್ರಸಾದ್



ಬೆಂಗಳೂರು: ಬಿಎಂಶ್ರೀ ಪ್ರತಿಷ್ಠಾನದ ಸಂಸ್ಥಾಪಕರೂ ಆದ ಸಾಹಿತಿ ಪ್ರೊ.ಎಂ.ವಿ. ಸೀತಾರಾಮಯ್ಯ ಅವರ ಪುತ್ರ ಎಂ.ಎಸ್.ರಾಮಪ್ರಸಾದ್ (82) ನಿಧನರಾಗಿದ್ದಾರೆ.

ವಯೋಸಹಜ ಅನಾರೋಗ್ಯ ಸಮಸ್ಯೆ ಎದುರಿಸುತ್ತಿದ್ದ ಅವರು, ಜಯನಗರದ ಅಪೋಲೊ ಆಸ್ಪತ್ರೆಗೆ ದಾಖಲಾಗಿದ್ದರು. ಬುಧವಾರ ತಡರಾತ್ರಿ ನಿಧನರಾಗಿದ್ದಾರೆ. ಅವರಿಗೆ ಪತ್ನಿ ಪ್ರಭಾ, ಪುತ್ರರಾದ ಶ್ರೀಕಾಂತ, ಶ್ರೀಧರ್ ಇದ್ದಾರೆ. ಮೃತರ ಇಚ್ಛೆಯಂತೆ ಪಾರ್ಥಿವ ಶರೀರವನ್ನು ಬೆಂಗಳೂರು ವೈದ್ಯಕೀಯ ಕಾಲೇಜಿಗೆ ದಾನವಾಗಿ ನೀಡಲಾಗಿದೆ.

ಬಿಎಂಎಸ್ ಕಾಲೇಜಿನಲ್ಲಿ ಪದವಿ ಪಡೆದಿದ್ದ ಅವರು, ವೃತ್ತಿಯಲ್ಲಿ ಎಂಜಿನಿಯರ್ ಆಗಿ ನಿವೃತ್ತರಾಗಿದ್ದರು. ಬಿಎಂಶ್ರೀ ಪ್ರತಿಷ್ಠಾನದಲ್ಲಿ ಎರಡು ಬಾರಿ ಕೋಶಾಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದರು.

ಬೆಂಗಳೂರು ನಗರ ವಿಶ್ವವಿದ್ಯಾಲಯದಲ್ಲಿ ಅಂತರರಾಷ್ಟ್ರೀಯ ಸಮ್ಮೇಳನ

'ಉಗ್ರ ರಾಷ್ಟ್ರೀಯತೆ: ಸಾಂಸ್ಕೃತಿಕ ಬಿಕ್ಕಟ್ಟು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಉಗ್ರ ರಾಷ್ಟ್ರೀಯತೆಯ ಪ್ರತಿಪಾದನೆಯಿಂದ ಭಾರತದಲ್ಲಿ ಗಂಭೀರ ಸಾಂಸ್ಕೃತಿಕ ಬಿಕ್ಕಟ್ಟಿನ ವಾತಾವರಣ ಸೃಷ್ಟಿಯಾಗಿದ್ದು, ವಚನಕಾರರು ಹಾಗೂ ಸೂಫಿ ಸಂತರ ಸಂವಾದ ಪರಂಪರೆಯಿಂದಲೇ ಇದನ್ನು ನಿಭಾಯಿಸಬಹುದು' ಎಂದು ಚಿಂತಕ ರಾಜೇಂದ್ರ ಚೆನ್ನಿ ಹೇಳಿದರು.


ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ಜಾಗತಿಕ ಭಾಷೆಗಳ ಕೇಂದ್ರವು ಸೆಂಟ್ರಲ್ ಕಾಲೇಜಿನ ಆವರಣದಲ್ಲಿ ಆಯೋಜಿಸಿರುವ 'ಭಾಷೆ, ಸಂಸ್ಕೃತಿ, ವಿಶ್ವಶಾಂತಿ–ಶಾಂತಿಯುತ ಜಗತ್ತಿಗಾಗಿ ಸಂವಾದ' ಕುರಿತ ಎರಡು ದಿನಗಳ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಅವರು ಪ್ರಧಾನ ಭಾಷಣ ಮಾಡಿದರು

'ಪ್ರಬಲ ಸಂಸ್ಕೃತಿಯೊಂದಿಗೆ ವಿಲೀನಕ್ಕಾಗಿ ಅನ್ಯ ಸಂಸ್ಕೃತಿಗಳ ಮೇಲೆ ಒತ್ತಡ ಹೇರುವ ಪ್ರಯತ್ನ ನಡೆದಿದೆ. ಇದರಿಂದ ಬಹುತ್ವ ತತ್ವ ಆಧರಿತ ಭಾವೈಕ್ಯತೆ ಮೇಲೆ ಪ್ರತಿಕೂಲ ಪರಿಣಾಮ ಬೀರಲಿದೆ. ಆತಂಕದ ರೂಪ ಪಡೆದಿರುವ ಇದಕ್ಕೆ ನಮ್ಮಲ್ಲಿಯೇ ಇರುವ ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸಿದ ವಚನಕಾರರ ಮತ್ತು ಉದಾರ ಚಿಂತನೆಯ ಸೂಫಿ ಸಂತರೊಂದಿಗೆ ಸಂವಾದ ಪರಿಹಾರವಾಗಲಿದೆ' ಎಂದು ಹೇಳಿದರು.

'ಉದಾರವಾದಿ ಪ್ರಜಾಪ್ರಭುತ್ವ ರಾಜಕೀಯ ವ್ಯವಸ್ಥೆ ಅಳವಡಿಸಿಕೊಂಡಿರುವ ಭಾರತದಲ್ಲಿ ವ್ಯಕ್ತಿ ಸ್ವಾತಂತ್ರ್ಯ ಮತ್ತು ಆಯ್ಕೆ ಸ್ವಾತಂತ್ರ್ಯ ಎತ್ತಿ ಹಿಡಿಯಬೇಕು. ಇದರಿಂದ ಸಾಮಾಜಿಕ ಸಾಮರಸ್ಯ ಕಾಪಾಡಬಹುದು' ಎಂದು ತಿಳಿಸಿದರು.


ಫ್ರಾನ್ಸ್‌ನ ಶಿಕ್ಷಣ ತಜ್ಞ ಫ್ಯಾಡಿ ಫಡೆಲ್ ಸಮ್ಮೇಳನ ಉದ್ಘಾಟಿಸಿ ಮಾತನಾಡಿ, 'ಜಾಗತಿಕ ಸಂಘರ್ಷದ ಸವಾಲುಗಳಿಗೆ ಸಂಯಮ ಮತ್ತು ಶಾಂತಿಯುತ ಸಂವಾದಗಳೇ ಸರಿಯಾದ ಮಾರ್ಗಗಳು' ಎಂದು ಸಲಹೆ ನೀಡಿದರು.

ಸೆಂಟ್ರಲ್ ಟಿಬೆಟಿಯನ್ ಆಡಳಿತದ ದಕ್ಷಿಣ ವಲಯ ಪ್ರಧಾನ ಅಧಿಕಾರಿ ಜಿಗ್ಮೆ ಟ್ಸುಲ್ಟ್ರಿಮ್, ಬೆಂಗಳೂರಿನ ಅಲಿಯನ್ಸ್ ಫ್ರಾಂಚೈಸ್ ನಿರ್ದೇಶಕ ಜೀನ್ ಮಾರ್ಕ್ ಡಿಪಿಯರ್ ಮತ್ತು ಮ್ಯಾಕ್ಸ್ ಮುಲ್ಲರ್ ಭವನದ ನಿರ್ದೇಶಕ ಮೈಕೆಲ್ ಹೈನ್ಸ್ಟ್, ಕುಲಪತಿ ಬಿ. ರಮೇಶ್, ಕುಲಸಚಿವರಾದ ಎ. ನವೀನ್ ಜೋಸೆಫ್, ರಮೇಶ್ ಬಿ.ಕುಡೇನಟ್ಟಿ, ಹಣಕಾಸು ಅಧಿಕಾರಿ ಎಂ.ವಿ.ವಿಜಯಲಕ್ಷ್ಮಿ, ಜಾಗತಿಕ ಭಾಷೆಗಳ ಕೇಂದ್ರದ ನಿರ್ದೇಶಕಿ ಜ್ಯೋತಿ ವೆಂಕಟೇಶ್ ಉಪಸ್ಥಿತರಿದ್ದರು.



ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಜಾಗತಿಕ ಭಾಷೆಗಳ ಕೇಂದ್ರವು ಆಯೋಜಿಸಿರುವ ಭಾಷೆ, ಸಂಸ್ಕೃತಿ, ವಿಶ್ವಶಾಂತಿ–ಶಾಂತಿಯುತ ಜಗತ್ತಿಗಾಗಿ ಸಂವಾದದಲ್ಲಿ ಫ್ರಾನ್ಸ್‌ನ ಶಿಕ್ಷಣ ತಜ್ಞ ಫ್ಯಾಡಿ ಫಡೆಲ್ ಅವರನ್ನು ಕುಲಪತಿ ಬಿ.ರಮೇಶ್ ಸ್ವಾಗತಿಸಿದರು. ಜ್ಯೋತಿ ವೆಂಕಟೇಶ್, ರಾಜೇಂದ್ರ ಚೆನ್ನಿ, ಮೈಕೆಲ್ ಹೈನ್ಸ್ಟ್ ಉಪಸ್ಥಿತರಿದ್ದರು

ಸಿಎನ್‌ಆರ್ ರಾವ್‌ಗೆ ಶಿವಶ್ರೀ ಪ್ರಶಸ್ತಿ



ಸಿಎನ್‌ಆರ್ ರಾವ್

ಬೆಂಗಳೂರು: ನ್ಯಾ.ಶಿವರಾಜ್ ವಿ. ಪಾಟೀಲ ಪ್ರತಿಷ್ಠಾನದಿಂದ ನೀಡುವ 2025ನೇ ಸಾಲಿನ ಶಿವಶ್ರೀ ಪ್ರಶಸ್ತಿಗೆ ವಿಜ್ಞಾನಿ ಸಿಎನ್‌ಆರ್ ರಾವ್ ಅವರು ಭಾಜನರಾಗಿದ್ದಾರೆ.

ನಗರದ ಪ್ಯಾಲೇಸ್ ರಸ್ತೆಯಲ್ಲಿರುವ ಕಿಂಗ್ಸ್‌ಕೋರ್ಟ್ ಮಿನಿಹಾಲ್‌ನಲ್ಲಿ ನ.29ರಂದು ಬೆಳಿಗ್ಗೆ 10.30ಕ್ಕೆ ಪ್ರಶಸ್ತಿ ಪ್ರದಾನ ಸಮಾರಂಭ ಆಯೋಜಿಸಲಾಗಿದೆ.

ಸುಪ್ರೀಂಕೋರ್ಟ್‌ನ ವಿಶ್ರಾಂತ ಮುಖ್ಯ ನ್ಯಾಯಮೂರ್ತಿ ಉದಯ್ ಉಮೇಶ್ ಲಲಿತ್ ಪ್ರಶಸ್ತಿ ಪ್ರದಾನ ಮಾಡುವರು. ವಿಶ್ರಾಂತ ನ್ಯಾಯಮೂರ್ತಿ ಶಿವರಾಜ್ ವಿ. ಪಾಟೀಲ ಅಧ್ಯಕ್ಷತೆ ವಹಿಸುವರು. ಹಿರಿಯ ನ್ಯಾಯವಾದಿ ಉದಯಹೊಳ್ಳ ಅತಿಥಿಯಾಗಿ ಭಾಗವಹಿಸುವರು ಎಂದು ಪ್ರತಿಷ್ಠಾನದ ದಾವಣಗೆರೆ ಜಿಲ್ಲಾ ಸಂಚಾಲಕ ಎಲ್. ಎಚ್. ಅರುಣ್‌ಕುಮಾರ್ ತಿಳಿಸಿದ್ದಾರೆ.

ನೀರಿನ ಬಿಲ್: ಅಸಲು ಕಟ್ಟಿದರೆ, ಬಡ್ಡಿ, ದಂಡ ಮನ್ನಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಲಮಂಡಳಿಯ ಗ್ರಾಹಕರು ಬಾಕಿ ಉಳಿಸಿಕೊಂಡಿರುವ ನೀರಿನ ಬಿಲ್‌ನಲ್ಲಿ, ಅಸಲು ಮೊತ್ತವನ್ನು ಏಕಕಾಲದಲ್ಲಿ ಪಾವತಿಸಿದರೆ ಬಡ್ಡಿ, ದಂಡ ಮತ್ತು ಇತರೆ ಶುಲ್ಕಗಳನ್ನು ಮನ್ನಾ ಮಾಡುವ 'ಒಂದು ಬಾರಿ ಪರಿಹಾರ ಯೋಜನೆ'ಗೆ (ಒಟಿಎಸ್) ಸಚಿವ ಸಂಪುಟ ಸಭೆ ಅನುಮೋದನೆ ನೀಡಿದೆ.

'ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ವ್ಯಾಪ್ತಿಯಲ್ಲಿ ಮೂರು ತಿಂಗಳು ಒಟಿಎಸ್ ಜಾರಿಗೆ ನಿರ್ಧರಿಸಲಾಗಿದೆ' ಎಂದು ಕಾನೂನು ಸಚಿವ ಎಚ್.ಕೆ. ಪಾಟೀಲ ತಿಳಿಸಿದರು.

'ಗ್ರಾಹಕರು ಫೆಬ್ರುವರಿ 2025ರವರೆಗೆ ₹701.71 ಕೋಟಿ ನೀರಿನ ಬಿಲ್‌ನ ಬಾಕಿ ಉಳಿಸಿಕೊಂಡಿದ್ದಾರೆ. ಈ ಮೊತ್ತದಲ್ಲಿ ಅಸಲು ₹439.03 ಕೋಟಿ, ಬಡ್ಡಿ ₹262.68 ಕೋಟಿ ಇದೆ. ಒಟಿಎಸ್ ಮೂಲಕ ಗ್ರಾಹಕರಿಂದ ಬಾಕಿಯಿರುವ ನೀರಿನ ಅಸಲು ಬಿಲ್ಲಿನ ಮೊತ್ತವನ್ನು ಪಾವತಿಸಿಕೊಳ್ಳುವುದರಿಂದ ಬೆಂಗಳೂರು ಜಲಮಂಡಳಿ ಆರ್ಥಿಕ ಸಂಪನ್ಮೂಲ ಕ್ರೋಡೀಕರಿಸಬಹುದಾಗಿದೆ. ಜನರಿಗೂ ಬಡ್ಡಿ ಕಟ್ಟುವುದರಿಂದ ವಿನಾಯಿತಿ ಸಿಗಲಿದೆ' ಎಂದು ಅವರು ತಿಳಿಸಿದರು.

ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯಲ್ಲಿ ಘನತ್ಯಾಜ್ಯದ ಸಮರ್ಪಕ ನಿರ್ವಹಣೆಗಾಗಿ ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತದ (ಬಿಎಸ್‌ಡಬ್ಲ್ಯುಎಂಎಲ್) ಮೂಲಕ 'ಭೂಭರ್ತಿ ತಾಣಗಳ ಕಾರ್ಯಾಚರಣೆ ಮತ್ತು ನಿರ್ವಹಣೆ' ಪ್ಯಾಕೇಜ್ ಕಾಮಗಾರಿಗಳನ್ನು ₹100 ಕೋಟಿ ವೆಚ್ಚದಲ್ಲಿ ಅನುಷ್ಠಾನಗೊಳಿಸಲು ಕೂಡ ಸಭೆ ಅನುಮೋದನೆ ನೀಡಿದೆ.



ಕರ್ನಾಟಕ ಪ್ರಕಾಶಕರ ಸಂಘ ನಗರದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಕರ್ನಾಟಕ ರಾಜ್ಯೋತ್ಸವ ಸಂಭ್ರಮ ಕಾರ್ಯಕ್ರಮದಲ್ಲಿ ಲಕ್ಷ್ಮಿ ಮುದ್ರಣಾಲಯದ ಮಾಲೀಕ ಕೆ.ಎಸ್. ಮಂಜು ಅವರಿಗೆ 'ಮುದ್ರಣ ಬೆಡಗು ಗೌರವ' ಪುರಸ್ಕಾರ ಪ್ರದಾನ ಮಾಡಲಾಯಿತು. (ಎಡದಿಂದ) ಪ್ರಕಾಶಕರಾದ ಸಿರಿವರ ರವೀಂದ್ರನಾಥ್, ಬಿ.ಎಸ್. ವಿದ್ಯಾರಣ್ಯ, ಪ್ರೇಮಚಂದ್, ಸಂಘದ ಕಾರ್ಯದರ್ಶಿ ಅಭಿನವ ರವಿಕುಮಾರ್, ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್, ಸಂಘದ ಅಧ್ಯಕ್ಷೆ ಡಾ.ವಸುಂಧರಾ ಭೂಪತಿ ಹಾಗೂ ಪ್ರಕಾಶಕಿ ಆರ್. ಪೂರ್ಣಿಮಾ ಪಾಲ್ಗೊಂಡಿದ್ದರು

ಬೆಂಗಳೂರು ರೇಸ್

ಮೌಂಟೆನ್ ಜ್ಯೂಯಲ್ ಗೆಲ್ಲುವ ನಿರೀಕ್ಷೆ

ಜವಾರೆ ಎಸ್. ಪೂನಾವಾಲ ಬೆಂಗಳೂರು 1000 ಗಿನೀಸ್ ಶುಕ್ರವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಈ ರೇಸ್‌ನಲ್ಲಿ ಮೌಂಟೆನ್ ಜ್ಯೂಯಲ್ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 2 ಗಂಟೆಗೆ ಆರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಮೂನ್‌ವೀಲ್ 5, ಬ್ಲ್ಯೂರ್‌ವೆಸ್ಟ್‌ನಿಕ್ 2, ಸ್ಟಾರ್‌ಝುಲ್ಲಾ 6
2ನೇ ರೇಸ್: ಗ್ಲೋರಿಯಸ್ ಸ್ಪೆಕ್ಟರ್ 2, ಹಾನೆಸ್ಟ್ ಡಿಸೈರ್ 7, ರೋಡ್‌ರನ್ನರ್ 3
3ನೇ ರೇಸ್: ಮಿಸ್ಟರ್ ಬ್ರೌನ್ 10, ಪೋಲ್ ಸ್ಟಾರ್ 1, ಈಗಲ್ ಐಯ್ 7
4ನೇ ರೇಸ್: ಎಂಫಾಟಿಕ್ 4, ಗ್ಲೋಬಲ್ ಇನ್‌ಫ್ಲೂಯನ್ಸ್ 1, ಕಲಮಿಟ್ಸ 2
5ನೇ ರೇಸ್: ಮೌಂಟೆನ್ ಜ್ಯೂಯಲ್ 6, ಐಸ್ ಆಫ್ ಫೈರ್ 5, ಬಿಷಪ್ 1
6ನೇ ರೇಸ್: ರನ್ ಫಾರ್ ದಿ ಸನ್ 2, ನೋಬಲ್ ಕಾಸ್ 5, ಈಸ್ಟರ್ನ್ ಗೋಲ್ಡ್ 1
7ನೇ ರೇಸ್: ಮಿಸ್ಟಿಕಲ್ ಕ್ವೀನ್ 3, ಲಾರ್ವೆನ್ಸ್ ಗ್ಲೋರಿ 5, ಇನ್ಫಿನಿಟ್ ಸ್ಪಿರಿಟ್ 1

ಉತ್ತಮ ಬೆಟ್: ಎಂಫಾಟಿಕ್

ಜಾಕ್‌ಪಾಟ್‌ಗೆ	1ನೇ ಟ್ರಬಲ್	2ನೇ ಟ್ರಬಲ್
3,4,5,6,7	2,3,4	5,6,7



ಯಲಹಂಕ ಕ್ಷೇತ್ರದ ಸಿಂಗನಾಯಕನಹಳ್ಳಿ, ದಿಬ್ಬೂರು, ಮುತ್ತುಗದಹಳ್ಳಿ ಹಾಗೂ ಶ್ಯಾನುಭೋಗನಹಳ್ಳಿ ಗ್ರಾಮಗಳಲ್ಲಿ ₹1.5 ಕೋಟಿ ವೆಚ್ಚದಲ್ಲಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಗೆ ಶಾಸಕ ಎಸ್.ಆರ್.ವಿಶ್ವನಾಥ್ ಚಾಲನೆ ನೀಡಿದರು. ಬಿಜೆಪಿ ಮುಖಂಡರಾದ ಎಸ್.ಎನ್.ರಾಜಣ್ಣ, ದಿಬ್ಬೂರು ಜಯಣ್ಣ, ಆದ್ದೆ ವಿಶ್ವನಾಥಪುರ ಮಂಜುನಾಥ್, ಸಿಂಗನಾಯಕನ ಹಳ್ಳಿ ಗ್ರಾ.ಪಂ. ಅಧ್ಯಕ್ಷೆ ಅಮರಾವತಮ್ಮ, ಉಪಾಧ್ಯಕ್ಷೆ ಸುನಂದ ಪ್ರಕಾಶ್, ಸನಾತನ ನಗರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಪ್ರವೀಣ್ ಕುಮಾರ್. ಜೆ, ಉಪಾಧ್ಯಕ್ಷ ಉಮೇಶ್, ಕಾರ್ಯದರ್ಶಿ ಶೇಷಾದ್ರಿ, ಖಜಾಂಚಿ ಸಂತೋಷ್ ಕುಮಾರ್ ಉಪಸ್ಥಿತರಿದ್ದರು

ನಗರದಲ್ಲಿ ಇಂದು

'ಶ್ರೀ ಸಿದ್ದರಾಮಯ್ಯ ದತ್ತಿ' ಪ್ರಶಸ್ತಿ ಪ್ರದಾನ: ಉದ್ಘಾಟನೆ: ಸಿದ್ದರಾಮಯ್ಯ, ಪ್ರಾಸ್ತಾವಿಕ ನುಡಿ: ಪದ್ಮಾ ಶಿವಮೊಗ್ಗ, ಪ್ರಶಸ್ತಿ ಪ್ರದಾನ: ಎಚ್.ಎನ್.ನಾಗಮೋಹನದಾಸ್, ಅತಿಥಿ: ಕೆ.ವಿ. ಪ್ರಭಾಕರ್, ಅಧ್ಯಕ್ಷತೆ: ಆಯೇಷಾ ಖಾನುಂ, ಪ್ರಶಸ್ತಿ ಸ್ವೀಕರಿಸುವವರು: ಸುಶೀಲಾ ಸುಬ್ರಹ್ಮಣ್ಯ, ನೀಲಾ ಎಂ.ಎಚ್., ಆಯೋಜನೆ: ಕರ್ನಾಟಕ ಪತ್ರಕರ್ತೆಯರ ಸಂಘ, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10.30

ಕರ್ನಾಟಕ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯ ಸುವರ್ಣ ಮಹೋತ್ಸವದ ಉದ್ಘಾಟನೆ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಜಿ.ಪರಮೇಶ್ವರ, ಅಧ್ಯಕ್ಷತೆ: ಲಕ್ಷ್ಮಿ ಹೆಬ್ಬಾಳಕರ, ಆಯೋಜನೆ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸ್ಥಳ: ಕೃಷ್ಣ ವಿಹಾರ, ಗೇಟ್ ಸಂಖ್ಯೆ-01, ಅರಮನೆ ಮೈದಾನ, ಮೇಕ್ರಿ ವೃತ್ತದ ಹತ್ತಿರ, ಬಳ್ಳಾರಿ ರಸ್ತೆ, ಬೆಳಿಗ್ಗೆ 10.30

ಅಖಿಲ ಭಾರತ ಹಿಂದುಳಿದ ವರ್ಗಗಳ ರೈಲ್ವೆ ನೌಕರರ ಸಂಘದ (ಎಐಒಬಿಸಿ) ಪ್ರಾದೇಶಿಕ ಕಚೇರಿ ಉದ್ಘಾಟನೆ: ಆಶುತೋಶ್ ಕೆ. ಸಿಂಗ್, ಡಾ.ನಾಗಲಕ್ಷ್ಮೀ ಚೌಧರಿ, ಆಯೋಜನೆ ಮತ್ತು ಸ್ಥಳ: ಎಐಒಬಿಸಿ ಪ್ರಾದೇಶಿಕ ಕಚೇರಿ, ಬೆಳಿಗ್ಗೆ 11.30

ರಾಷ್ಟ್ರಕವಿ ಕುವೆಂಪು ಅವರ ಐದು ದಿನಗಳ ರಾಜ್ಯಮಟ್ಟದ ನಾಟಕೋತ್ಸವ: 'ಜಲಗಾರ' ನಾಟಕ ಪ್ರದರ್ಶನ: ಅಮರೇಶ್ವರ ವಿಜಯ ನಾಟಕ ಮಂಡಳಿ, ಸ್ಥಳ: ಎಚ್.ತಿಮ್ಮೇಗೌಡ ಸಭಾಂಗಣ, ವಿದ್ಯಾನಿಕೇತನ ಪಬ್ಲಿಕ್ ಶಾಲೆ, ಸುಂಕದಕಟ್ಟೆ, ಮಧ್ಯಾಹ್ನ 1.30

ಟಿಪ್ಪು ಸುಲ್ತಾನ್ ಜಯಂತಿ: ಆಯೋಜನೆ: ಹಜರತ್ ಟಿಪ್ಪು ಸುಲ್ತಾನ್ ಕಮಿಟಿ ಚಿಕ್ಕಬಾಣಾವರ, ಮೆರವಣಿಗೆ ಹೊರಡುವ ಸ್ಥಳ: ಮಾರುತಿನಗರದಿಂದ ಚಿಕ್ಕಬಾಣಾವಾರದ ಸಂತೆ ಮೈದಾನದವರೆಗೆ, ಮಧ್ಯಾಹ್ನ 2.30


'ಕನ್ನಡ ಸೇವಾ ರತ್ನ' ಪ್ರಶಸ್ತಿ ಪ್ರದಾನ: ಅತಿಥಿಗಳು: ರಾಮಲಿಂಗಾರೆಡ್ಡಿ, ಮಮತಾ ಆರ್.ವಿ. ದೇವರಾಜ್, ಸೌಮ್ಯಾ ರೆಡ್ಡಿ, ಶಶಿಧರ್ ಕೋಟೆ, ಕ್ಯಾಪ್ಟನ್ ರಾಜನ್, ಉಮಾ ಶ್ರೀನಿವಾಸ್ ರೆಡ್ಡಿ, ಸುಜಾತಾ ವೆಂಕಟಸ್ವಾಮಿ, ಆಯೋಜನೆ: ಶ್ರೀ ಆದ್ಯಾ ಫೌಂಡೇಷನ್ ಪ್ರೆಸೆಂಟ್ಸ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಮಧ್ಯಾಹ್ನ 3

ವಾರ್ಷಿಕೋತ್ಸವ ಆಚರಣೆ: ಅತಿಥಿಗಳು: ಎಂ.ಶ್ರೀನಿವಾಸ, ವಿನಯ ಪ್ರಸಾದ್, ಜ್ಯೋತಿ ಪ್ರಕಾಶ್, ಜಯಪ್ರಕಾಶ್, ರೇಣುಕಾ ಹೆಗ್ಗಡೆ, ಉಷಾ ಭಟ್, ಉಮಾ ಭಾರದ್ವಾಜ್, ಆಯೋಜನೆ: ವರಿಷ್ಠ ವೃಂದ, ಹಿರಿಯ ನಾಗರಿಕರ ವೇದಿಕೆ ಕಾಫಿ ಬೋರ್ಡ್, ಸ್ಥಳ: ಶ್ರೀ ಕನ್ವೆನ್ಷನ್ ಹಾಲ್, ದಾಸರಹಳ್ಳಿ ಮುಖ್ಯರಸ್ತೆ, ಭುವನೇಶ್ವರಿನಗರ, ಸಂಜೆ 5

ಭರತನಾಟ್ಯ ರಂಗಪ್ರವೇಶ: ಹರಿಕಾ ಎ.ಎಂ., ಅತಿಥಿಗಳು: ಪುಲಿಕೇಶಿ ಕಸ್ತೂರಿ, ಮಾನಸಾ ಕಾಂತಿ, ರಂಗನಾಥ್ ಮೈಸೂರು, ಆಯೋಜನೆ: ಅನುರಾಗ್ ಕಲಾ ಗುರುಕುಲ, ಸ್ಥಳ: ಜೆಎಸ್‌ಎಸ್ ಸಭಾಂಗಣ, ಎಂಟನೇ ಬ್ಲಾಕ್, ಜಯನಗರ, ಸಂಜೆ 5

'ಅಣ್ಣನ ನೆನಪು' ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಅವರ ಆತ್ಮಕಥನ ವಿಶೇಷ ಉಪನ್ಯಾಸ: ರವಿಕುಮಾರ ಬಾಗಿ, ಅಧ್ಯಕ್ಷತೆ: ಆರ್.ಎಸ್. ಶಾಂತಾರಾಮ್, ಆಯೋಜನೆ ಮತ್ತು ಸ್ಥಳ: ದೀಪಾ ಅಂಧ ಮಕ್ಕಳ ವಸತಿಯುತ ಪ್ರೌಢಶಾಲೆ, ಮಾಗಡಿ ಮುಖ್ಯರಸ್ತೆ, ಸಂಜೆ 5

ಕಲೋತ್ಸವ-2025: ಉದ್ಘಾಟನೆ: ಜಿ.ಪರಮೇಶ್ವರ, ಅತಿಥಿಗಳು: ಲಕ್ಷ್ಮಿ ಹೆಬ್ಬಾಳಕರ, ರಾಣಿ ಸತೀಶ್, ಶ್ರೀನಾಥ್, ಆಯೋಜನೆ: ಶಿವಲೀಲಾ ಕಲ್ಚರಲ್ ಮತ್ತು ಚಾರಿಟಬಲ್ ಟ್ರಸ್ಟ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5.30



ಶ್ರೀನಾಥ್

ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಪ್ರಣಯರಾಜ ಶ್ರೀನಾಥ್ ಅವರ ಚಲನಚಿತ್ರ ಗೀತೆಗಳ ಸಂಗೀತ ರಸಸಂಜೆ, ಸಂಸ್ಥಾಪಕರ ದಿನಾಚರಣೆ: ಅತಿಥಿ: ಶ್ರೀನಾಥ್, ಆಯೋಜನೆ ಮತ್ತು ಸ್ಥಳ: ದಿ ಬೆಂಗಳೂರು ಸಿಟಿ ಇನ್‌ಸ್ಟಿಟ್ಯೂಟ್, ಬಸವನಗುಡಿ, ಸಂಜೆ 6.30ರಿಂದ

'ಗೀತಾಸಾರ' ಧಾರ್ಮಿಕ ಪ್ರವಚನ: ಹರೀಶ್ ಆಚಾರ್, ಆಯೋಜನೆ ಮತ್ತು ಸ್ಥಳ: ವಿಜಯ ಮಧ್ವ ಸಂಘ, ವಿಜಯನಗರ ಎರಡನೇ ಹಂತ, ಸಂಜೆ 6.30

'ವರ್ಣ ಪಲ್ಲಟ' ನಾಟಕ ಪ್ರದರ್ಶನ: ನಿರ್ದೇಶನ: ಶಶಿಧರ್ ಭಾರಿಘಾಟ್, ರಚನೆ: ಕೆ.ವೈ. ನಾರಾಯಣಸ್ವಾಮಿ, ಆಯೋಜನೆ: ಅನಾವರಣ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ವೃಷಭಾವತಿ ಪೈಪ್‌ಲೈನ್ ಕಾಮಗಾರಿಗೆ ವಿರೋಧ

ದಾಬಸ್ ಪೇಟೆ: ವೃಷಭಾವತಿ ನೀರಿನ ಪೈಪ್‌ಲೈನ್ ಕಾಮಗಾರಿ ವಿರೋಧಿಸಿ ರಾಯರಪಾಳ್ಯ ಹಾಗೂ ಚನ್ನೋಹಳ್ಳಿ ಗ್ರಾಮಸ್ಥರು ಪ್ರತಿಭಟನೆ ನಡೆಸಿದ್ದು, ಪೊಲೀಸರು ಕೆಲವರನ್ನು ವಶಕ್ಕೆ ಪಡೆದು ನಂತರ ಬಿಡುಗಡೆ ಮಾಡಿದರು.

ಗುರುವಾರ ಬೆಳಿಗ್ಗೆ ಚನ್ನೋಹಳ್ಳಿ ಮಾರ್ಗವಾಗಿ ರಾಯರಪಾಳ್ಯ ಸಂಪರ್ಕಿಸುವ ರಸ್ತೆಬದಿಯಲ್ಲಿ ಕಾಮಗಾರಿ ನಡೆಸಲು ಬಂದವರನ್ನು ಸ್ಥಳೀಯರು ತಡೆದರು. ಪರಿಸ್ಥಿತಿ ವಿಕೋಪಕ್ಕೆ ಹೋದಾಗ ಕೆಲವರನ್ನು ವಶಕ್ಕೆ ಪಡೆದರು.

20 ದಿನಗಳ ಹಿಂದೆ ಕಾಮಗಾರಿ ನಡೆಸಲು ಹೋದ ವೇಳೆಯಲ್ಲಿ ಕೆಲವರು ವಿರೋಧಿಸಿದ್ದರಿಂದ ಕೆಲಸ ನಿಲ್ಲಿಸಲಾಗಿತ್ತು. ಮತ್ತೆ ಕಾಮಗಾರಿ ಆರಂಭಿಸಲು ಹೋದಾಗ ಗ್ರಾಮಸ್ಥರು ಮತ್ತೆ ಪ್ರತಿಭಟನೆ ಮಾಡಿದ್ದಾರೆ.

'ವೃಷಭಾವತಿ ನೀರು ಬಿಡಲು ರಾಯರಪಾಳ್ಯ, ಚನ್ನೋಹಳ್ಳಿ ಕೆರೆಗಳನ್ನು ಗುರುತಿಸಿದ್ದಾರೆ. ಈ ನೀರು ಕೆರೆಗೆ ಹರಿಸುವುದರಿಂದ ನೀರು ವಿಷಯುಕ್ತವಾಗಿ ದನಕರುಗಳಿಗೆ ಕುಡಿಯಲು, ಕೃಷಿ ಚಟುವಟಿಕೆಗೆ ಬಳಸಲು ಸಾಧ್ಯ ಆಗುವುದಿಲ್ಲ. ರಾಮದೇವರ ಬೆಟ್ಟ, ಸಿದ್ದರಬೆಟ್ಟದ ತಪ್ಪಲು ಇದ್ದು, ಇಲ್ಲಿನ ಪರಿಸರಕ್ಕೆ ಮಾರಕವಾಗುತ್ತದೆ' ಎಂದು ಪ್ರತಿಭಟನಕಾರರು ಆರೋಪಿಸಿದರು.

ಗ್ರಾಮ ಪಂಚಾಯಿತಿ ವತಿಯಿಂದ 'ನಮ್ಮ ಮೆಡಿಕಲ್ಸ್' ಔಷಧ ಮಳಿಗೆ ಆರಂಭ

ಚಿಕ್ಕಜಾಲ: ರಸ್ತೆ ಕಾಮಗಾರಿಗೆ ಚಾಲನೆ

ಪ್ರಜಾವಾಣಿ ವಾರ್ತೆ

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರ ವ್ಯಾಪ್ತಿಯ ಚಿಕ್ಕಜಾಲ ಗ್ರಾಮದಲ್ಲಿ ಕಾಂಕ್ರೀಟ್ ರಸ್ತೆ ಹಾಗೂ ಚರಂಡಿ ನಿರ್ಮಾಣ ಕಾಮಗಾರಿಗೆ ಕಂದಾಯ ಸಚಿವ ಕೃಷ್ಣಬೈರೇಗೌಡ ಚಾಲನೆ ನೀಡಿದರು.

ಇದೇ ವೇಳೆ ಗ್ರಾಮ ಪಂಚಾಯಿತಿ ವತಿಯಿಂದ ನೂತನವಾಗಿ ನಿರ್ಮಿಸಿರುವ 'ನಮ್ಮ ಮೆಡಿಕಲ್ಸ್' ಔಷಧ ಮಳಿಗೆಯನ್ನು ಜನಾರ್ಪಣೆಗೊಳಿಸಿದರು.

ನಂತರ ಮಾತನಾಡಿದ ಅವರು, 'ಅಂತರರಾಷ್ಟ್ರೀಯ ವಿಮಾನನಿಲ್ದಾಣ ಮುಖ್ಯರಸ್ತೆಯಿಂದ ಹಾಲಿನ ಡೇರಿಯ ಮೂಲಕ ಚಿಕ್ಕಜಾಲ ಗ್ರಾಮದೊಳಗೆ ಹಾಗೂ ಉತ್ತನಹಳ್ಳಿಯ ಅಕ್ಕಯ್ಯಮ್ಮನ ಬೆಟ್ಟಕ್ಕೆ ಸಂಪರ್ಕ ಕಲ್ಪಿಸುವ ಮುಖ್ಯರಸ್ತೆಯನ್ನು ಈ ಹಿಂದೆ ಅಭಿವೃದ್ಧಿಪಡಿಸಲಾಗಿತ್ತು. ಹಾಗಾಗಿ ಸಾರ್ವಜನಿಕರ ಸಂಚಾರಕ್ಕೆ ತೊಂದರೆಯಾಗುತ್ತಿತ್ತು. ಇದಕ್ಕಾಗಿ ₹2.50 ಕೋಟಿ ವೆಚ್ಚದಲ್ಲಿ ಕಾಂಕ್ರೀಟ್ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಲಾಗಿದೆ' ಎಂದರು.

ಚಿಕ್ಕಜಾಲ ಗ್ರಾಮಪಂಚಾಯಿತಿ ಅಧ್ಯಕ್ಷ ರವಿಕುಮಾರ್, ಉಪಾಧ್ಯಕ್ಷೆ ಗೌರಿ ಗೋಪಾಲ್, ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯ ಉದಯಶಂಕರ್, ಕಾಂಗ್ರೆಸ್ ಮುಖಂಡರಾದ ಕೆ.ಅಶೋಕನ್, ಎನ್.ಕೆ.ಮಹೇಶ್‌ಕುಮಾರ್, ಎಸ್.ಕೆ. ಕಿರಣ್‌ಕುಮಾರ್, ಜಯಕುಮಾರ್, ಕೆಡಿಪಿ ಸದಸ್ಯ ಬಿ.ಕೆ.ನಾರಾಯಣಸ್ವಾಮಿ, ಪಂಚಾಯಿತಿ ಸದಸ್ಯರಾದ ಚಂದು, ಪ್ರೇಮ್‌ಕುಮಾರ್, ಬಿ.ಆರ್.ಪ್ರವೀಣ್, ದೊಡ್ಡಜಾಲ ಗ್ರಾಮ ಪಂಚಾಯಿತಿ ಅಧ್ಯಕ್ಷ ಆರ್.ಬೈರೇಗೌಡ, ಮಾಜಿ ಅಧ್ಯಕ್ಷರಾದ ಚಂದುಕುಮಾರ್, ಬಿ.ಎಂ.ನಾಗೇಶ್, ಎಚ್.ಪಿ. ನಾರಾಯಣಸ್ವಾಮಿ ಅವರು ಉಪಸ್ಥಿತರಿದ್ದರು.



ಚಿಕ್ಕಜಾಲ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ 'ನಮ್ಮ ಮೆಡಿಕಲ್ಸ್' ಔಷಧ ಮಳಿಗೆಯನ್ನು ಸಚಿವ ಕೃಷ್ಣಬೈರೇಗೌಡ ಜನಾರ್ಪಣೆಗೊಳಿಸಿದರು

ಬೀದಿ ನಾಯಿ ವಿವರ: ನೋಟಿಸ್

ಗೂಗಲ್ ಫಾರಂ ಮೂಲಕ ಮಾಹಿತಿ ಒದಗಿಸಲು ಇಲಾಖೆ– ಸಂಸ್ಥೆಗಳಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಪ್ರೀಂ ಕೋರ್ಟ್ ಆದೇಶದಂತೆ ಬೀದಿ ನಾಯಿಗಳ ಮಾಹಿತಿಗಳನ್ನು ಸಂಗ್ರಹಿಸಲು ಐದೂ ನಗರ ಪಾಲಿಕೆಗಳು ವಿವಿಧ ಇಲಾಖೆಗಳು ಹಾಗೂ ಸಂಸ್ಥೆಗಳಿಗೆ ನೋಟಿಸ್ ಜಾರಿ ಮಾಡಿವೆ.

ಸುಪ್ರೀಂ ಕೋರ್ಟ್ ನ.7ರಂದು ಆದೇಶ ನೀಡಿ, ಎಂಟು ವಾರಗಳೊಳಗೆ ಮಾಹಿತಿಯ ಪ್ರಮಾಣಪತ್ರ ಸಲ್ಲಿಸಲು ಸೂಚಿಸಿದೆ. ಹೀಗಾಗಿ, ಜಿಬಿಎ ವ್ಯಾಪ್ತಿಯಲ್ಲಿರುವ ವಿವಿಧ ಇಲಾಖೆ, ಸಂಸ್ಥೆಗಳನ್ನು ಗುರುತಿಸಲಾಗಿದೆ. ಅವುಗಳ ಆವರಣದಲ್ಲಿರುವ ಬೀದಿ ನಾಯಿಗಳ ಮಾಹಿತಿಯನ್ನು ಪಡೆದು, ಅವುಗಳನ್ನು ಅಲ್ಲಿಂದ ಆಶ್ರಯ ತಾಣಕ್ಕೆ ಸ್ಥಳಾಂತರಿಸಿ ಪೋಷಣೆಗೆ ಕ್ರಮ ಕೈಗೊಳ್ಳಲು ನಿರ್ಧರಿಸಲಾಗಿದೆ.

ಸರ್ಕಾರಿ, ಖಾಸಗಿ ಶಿಕ್ಷಣ ಸಂಸ್ಥೆಗಳು– ಶಾಲೆಗಳು, ಕಾಲೇಜುಗಳು, ವಿಶ್ವವಿದ್ಯಾಲಯಗಳು, ಕೋಚಿಂಗ್ ಕೇಂದ್ರಗಳು (ಹಾಸ್ಟೆಲ್‌ಸಹಿತ/ರಹಿತ), ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳು, ಆರೋಗ್ಯ ಕೇಂದ್ರಗಳು– ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಜಿಲ್ಲಾ ಆಸ್ಪತ್ರೆಗಳು, ವೈದ್ಯಕೀಯ ಕಾಲೇಜುಗಳು, ಕ್ರೀಡಾ ಸಂಕೀರ್ಣಗಳು ಮತ್ತು ಕ್ರೀಡಾಂಗಣಗಳು (ಸಾರ್ವಜನಿಕ ಅಥವಾ ಖಾಸಗಿ), ಬಸ್ ನಿಲ್ದಾಣಗಳು, ಡಿಪೊಗಳು, ಅಂತರರಾಜ್ಯ ಬಸ್ ನಿಲ್ದಾಣಗಳು, ರೈಲು ನಿಲ್ದಾಣ ಸೇರಿದಂತೆ ಇತರೆ ಇಲಾಖೆ, ಸಂಸ್ಥೆಗಳಿಗೆ ನೋಟಿಸ್ ನೀಡಿ ಮಾಹಿತಿ ಒದಗಿಸಲು ಸೂಚಿಸಲಾಗಿದೆ.

ಬೀದಿ ನಾಯಿಗಳ ಸಂಖ್ಯೆ, ಸಂಸ್ಥೆಗಳ ಆವರಣದೊಳಗೆ ಬೀದಿ ನಾಯಿಗಳ ಮರು ಪ್ರವೇಶವನ್ನು ತಡೆಯಲು ತಡೆಗೋಡೆ ಹಾಕುವುದು, ತ್ಯಾಜ್ಯ ನಿರ್ವಹಣೆ, ಸ್ವಚ್ಛತೆ ಕಾಪಾಡುವುದು, ಪಾಲಿಕೆಯೊಂದಿಗೆ ಸಮನ್ವಯ ಸಾಧಿಸಲು ಒಬ್ಬ ಜವಾಬ್ದಾರಿಯುತ ಅಧಿಕಾರಿಯ ನಾಮ ನಿರ್ದೇಶನ, ಆ ನೋಡಲ್ ಅಧಿಕಾರಿಯ ಹೆಸರು ಮತ್ತು ದೂರವಾಣಿ ಸಂಖ್ಯೆಯನ್ನು ಆವರಣದಲ್ಲಿ ಪ್ರದರ್ಶಿಸುವುದರ ಜೊತೆಗೆ ಪಾಲಿಕೆಗೆ ನೋಡಲ್ ಅಧಿಕಾರಿಯ ಮಾಹಿತಿ ನೀಡಬೇಕು. ಕ್ರೀಡಾ ಸಂಕೀರ್ಣಗಳು ಮತ್ತು ಕ್ರೀಡಾಂಗಣಗಳ ಆವರಣದಲ್ಲಿ ಬೀದಿ ನಾಯಿಗಳ ಪ್ರವೇಶ ತಡೆಗಟ್ಟಲು 24x7 ನಿಗಾ ವಹಿಸಲು ಭದ್ರತಾ ಸಿಬ್ಬಂದಿ ನೇಮಿಸಬೇಕು. ಅವರಿಗೆ ಗೂಗಲ್ ಫಾರಂ ಲಿಂಕ್ ಕಳುಹಿಸಲಾಗಿದ್ದು, ಅದರಲ್ಲಿ ಸಂಪೂರ್ಣ ಮಾಹಿತಿ ನೀಡಬೇಕು ಎಂದು ಜಿಬಿಎ ಪ್ರಕಟಣೆ ತಿಳಿಸಿದೆ.

ಸಹಾಯವಾಣಿ

ಬೀದಿ ನಾಯಿ ಕಡಿತ, ಉಪಟಳ, ನಿರ್ಬಂಧಿತ ಸ್ಥಳದಲ್ಲಿ ಆಹಾರ ವಿತರಣೆ ಸೇರಿದಂತೆ ಇತರೆ ದೂರುಗಳನ್ನು ಸಹಾಯವಾಣಿ 1533 ಮತ್ತು ರೇಬೀಸ್ ಸಹಾಯವಾಣಿ 63648 93322ಗೆ ಕರೆ ನೀಡಬಹುದು.

ನಾಗರಿಕರ ವಿರುದ್ಧ ಕ್ರಮ: ಎಚ್ಚರಿಕೆ

ಬೀದಿ ನಾಯಿಗಳಿಗೆ ಆಹಾರ ನೀಡುವ ಸ್ಥಳಗಳನ್ನು ನಗರ ಪಾಲಿಕೆಗಳ ಪಶುಪಾಲನಾ ವಿಭಾಗದ ಅಧಿಕಾರಿಗಳು ಗುರುತಿಸಲಿದ್ದಾರೆ. ಆ ಸ್ಥಳಗಳನ್ನು ಹೊರತುಪಡಿಸಿ ಬೇರೆ ಜಾಗಗಳಲ್ಲಿ ಆಹಾರ ನೀಡಿದರೆ ಸುಪ್ರೀಂ ಕೋರ್ಟ್ ಆದೇಶದಂತೆ ನಾಗರಿಕರ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತದೆ.

ಭಾರತೀಯ ಪ್ರಾಣಿ ಕಲ್ಯಾಣ ಮಂಡಳಿ ಮಾರ್ಗಸೂಚಿ ಮತ್ತು ಎಬಿಸಿ ನಿಯಮಗಳು 2023ರ ಮಾರ್ಗಸೂಚಿಗಳಂತೆ ಸಾರ್ವಜನಿಕರು ಬೀದಿ ನಾಯಿಗಳನ್ನು ದತ್ತು ಪಡೆದು ಅವುಗಳಿಗೆ ಆಹಾರ, ಆರೋಗ್ಯ, ಭದ್ರತೆ ಮತ್ತು ಸುರಕ್ಷಿತ ಆಶ್ರಯ ನೀಡಿ ಬೀದಿ ನಾಯಿಗಳ ಸಮಸ್ಯೆ ಪರಿಹರಿಸಲು ಸಹಕರಿಸಬಹುದು.

ಬೀದಿ ನಾಯಿಗಳನ್ನು ಆಶ್ರಯ ತಾಣದಲ್ಲಿ ಪೋಷಿಸಲು ಆಸಕ್ತ ಪ್ರಾಣಿ ಕಲ್ಯಾಣ ಸಂಸ್ಥೆಗಳು ಭಾಗವಹಿಸಬಹುದು. ಸವಲತ್ತುಗಳನ್ನು ಪಾಲಿಕೆ ಒದಗಿಸಲಿದೆ.

ವಾರ್ಷಿಕೋತ್ಸವ: ನೀಟ್ ಸಾಧಕರಿಗೆ ಗೌರವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾರಾಯಣ ಗ್ರೂಪ್ ವತಿಯಿಂದ ‘ರಂಗಮಂಚ್‌–2025’ ವಾರ್ಷಿಕೋತ್ಸವ, ನೀಟ್‌ನಲ್ಲಿ ಉತ್ತಮ ಸಾಧನೆ ಮಾಡಿದವರಿಗೆ ಸನ್ಮಾನ ಕಾರ್ಯಕ್ರಮ ಆಯೋಜಿಸಲಾಗಿತ್ತು.

ವಸಂತನಗರದಲ್ಲಿರುವ ಬಿ.ಆರ್. ಅಂಬೇಡ್ಕರ್ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳ ಪ್ರದರ್ಶನ, ಹೃದಯಸ್ಪರ್ಶಿ ಭಾಷಣಗಳು ಹಾಗೂ ಸಾಧಕರ ಮಾತುಗಳು ಸಮಾರಂಭದ ಮೆರುಗು ಹೆಚ್ಚಿಸಿದವು.

ನಾರಾಯಣ ನೀಟ್ ಅಕಾಡೆಮಿಯ 164 ವಿದ್ಯಾರ್ಥಿಗಳು ದೇಶದ ವಿವಿಧ ವೈದ್ಯಕೀಯ ಕಾಲೇಜುಗಳಲ್ಲಿ ಪ್ರವೇಶ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ. ನೋಂದಣಿಯಾದವರಲ್ಲಿ ಶೇ 50ಕ್ಕೂ ಅಧಿಕ ವಿದ್ಯಾರ್ಥಿಗಳು ಅಗ್ರ ವೈದ್ಯಕೀಯ ಸಂಸ್ಥೆಗಳಲ್ಲಿ ಪ್ರವೇಶ ಪಡೆದಿದ್ದಾರೆ. ಇದೇ ವೇಳೆ ಸಾಧಕರನ್ನು ಸನ್ಮಾನಿಸಲಾಯಿತು.

ನಾರಾಯಣ ಶೈಕ್ಷಣಿಕ ಸಂಸ್ಥೆಗಳ ನಿರ್ದೇಶಕರಾದ ಡಾ.ಪಿ. ಸಿಂಧೂರ ಮಾತನಾಡಿ, ‘ರಂಗಮಂಚ್ ಎಂಬುದು ರ‍್ಯಾಂಕ್ ವಿಜೇತರ ಸಂಭ್ರಮವಲ್ಲ. ಇದು ಕನಸುಗಳ, ಸಾಧನೆಗಾಗಿ ಹೋರಾಟ, ಪ್ರತಿಯೊಬ್ಬರಲ್ಲೂ ಸಾಮರ್ಥ್ಯ ಅಡಗಿದೆ ಎಂಬ ನಂಬಿಕೆಯ ಸಂಭ್ರಮ. ಕುವೆಂಪು ಭವನ ಕ್ಯಾಂಪಸ್‌ನ 164 ವಿದ್ಯಾರ್ಥಿಗಳ ಸಾಧನೆ, ವಿದ್ಯಾರ್ಥಿಗಳು, ಪೋಷಕರು, ಶಿಕ್ಷಕರು ಹಾಗೂ ಸಂಸ್ಥೆಯ ಬದ್ಧತೆಯ ಪ್ರತಿಫಲವಾಗಿದೆ’ ಎಂದರು.



ನಗರದ ಅಂಬೇಡ್ಕರ್ ಭವನದಲ್ಲಿ ನಾರಾಯಣ ಗ್ರೂಪ್ ಆಯೋಜಿಸಿದ್ದ ವಾರ್ಷಿಕೋತ್ಸವವನ್ನು ವಿದ್ಯಾರ್ಥಿನಿಯೊಬ್ಬರು ಉದ್ಘಾಟಿಸಿದರು

ವಿಜ್ಞಾನ ಸಂಶೋಧನೆ: ‘ಅನ್ವೇಷಣಾ 2026’ಕ್ಕೆ ಅರ್ಜಿ

ಬೆಂಗಳೂರು: ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಇಲಾಖೆಯಿಂದ (ಡಿಎಸ್‌ಐಆರ್) ಮಾನ್ಯತೆ ಪಡೆದ ಸಂಶೋಧನಾ ಸಂಸ್ಥೆ ‘ಪ್ರಯೋಗ’ ವತಿಯಿಂದ ವಿಜ್ಞಾನ ಸಂಶೋಧನಾ ಕಾರ್ಯಕ್ರಮ ಅನ್ವೇಷಣಾ 2026ಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಈ ಕಾರ್ಯಕ್ರಮವು ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಹಿರಿಯ ವಿಜ್ಞಾನಿಗಳೊಂದಿಗೆ ಕೆಲಸ ಮಾಡಲು ಅನುವು ಮಾಡಿಕೊಡುತ್ತದೆ. 2026ರ ಆವೃತ್ತಿಯಲ್ಲಿ ವಿದ್ಯಾರ್ಥಿಗಳಿಗೆ ಗ್ರೀನ್ ಕೆಮಿಸ್ಟ್ರಿ, ಅಡ್ವಾನ್ಸ್ಡ್ ಆ್ಯಂಡ್ ಫಂಕ್ಷನಲ್ ಮೆಟೀರಿಯಲ್ಸ್, ಫುಡ್ ಆ್ಯಂಡ್ ಅಗ್ರಿಕಲ್ಚರ್, ಅರ್ಥ್ ಸೈನ್ಸ್, ವೆಲ್‌ನೆಸ್ ಮತ್ತು ಎ ಡೆಡಿಕೇಟೆಡ್ ಥಿಯೆರಟಿಕಲ್ ರಿಸರ್ಚ್ ಟ್ರ್ಯಾಕ್ ಎಂಬ ಆರು ವಿಭಾಗಗಳಲ್ಲಿ 19 ಯೋಜನೆಗಳನ್ನು ಒಳಗೊಂಡಿದೆ.

ಈ ವರ್ಷ ಸಂಸ್ಥೆಯು ವಿದ್ಯಾರ್ಥಿಗಳಿಗೆ ಎರಡು ಹೊಸ ಸಂಶೋಧನಾ ಮಾರ್ಗಗಳನ್ನು ಪ್ರಾರಂಭಿಸುತ್ತಿದೆ. ವರ್ಷವಿಡೀ ನಡೆಯುವ ಪ್ರಾಜೆಕ್ಟ್ ಟ್ರ್ಯಾಕ್ (ಏಪ್ರಿಲ್ 2026– ಮಾರ್ಚ್ 2027) ಉತ್ಸಾಹಿ ವಿದ್ಯಾರ್ಥಿಗಳಿಗೆ ನಿಯಮಿತ ಕ್ಯಾಂಪಸ್ ಭೇಟಿ, ಸಂವಾದ ಮತ್ತು ಮಾರ್ಗದರ್ಶನದೊಂದಿಗೆ ವಿಸ್ತೃತ, ಪೂರ್ಣ ಪ್ರಮಾಣದ ಸಂಶೋಧನಾ ಅನುಭವ ನೀಡುತ್ತದೆ.

ಅರ್ಜಿ ಸಲ್ಲಿಕೆಗೆ ಜನವರಿ 15 ಕೊನೆಯ ದಿನ. ದೇಶದಾದ್ಯಂತ 9ರಿಂದ 12ನೇ ತರಗತಿಯ ವಿದ್ಯಾರ್ಥಿಗಳಿಗೆ ಉಚಿತವಾಗಿ, ಜನವರಿ 18ರಿಂದ 24ರ ನಡುವೆ ಆನ್‌ಲೈನ್‌ನಲ್ಲಿ ಸ್ಕ್ರೀನಿಂಗ್ ಪರೀಕ್ಷೆಗಳನ್ನು ನಿಗದಿಪಡಿಸಲಾಗಿದೆ. ಬಳಿಕ ಜನವರಿ 28ರಿಂದ ಫೆಬ್ರುವರಿ 5ರವರೆಗೆ ವೈಯಕ್ತಿಕ ಸಂದರ್ಶನಗಳು ಇರಲಿವೆ. ಆಯ್ಕೆಯಾದ ಅಭ್ಯರ್ಥಿಗಳಿಗೆ ಏಪ್ರಿಲ್‌ನಲ್ಲಿ ಪ್ರಾಜೆಕ್ಟ್‌ಗಳನ್ನು ಪ್ರಾರಂಭಿಸಲಿದ್ದು, ಆಗಸ್ಟ್‌ನಲ್ಲಿ ಪ್ರಕ್ರಿಯೆ ಮುಕ್ತಾಯಗೊಳ್ಳಲಿದೆ ಎಂದು ಪ್ರಕಟಣೆ ತಿಳಿಸಿದೆ.


ಶಿವಾನಿ ಸುರ್ವೆ

‘ಜನರ ನಗುವೇ ನನಗೆ ಆಶೀರ್ವಾದ’

ಕಿರುತೆರೆಯಲ್ಲಿ ಮಿಂಚಿದ ನಟ ಸೃಜನ್ ಲೋಕೇಶ್ ನಿರ್ದೇಶನದ ಚೊಚ್ಚಲ ಸಿನಿಮಾ ‘ಜಿಎಸ್‌ಟಿ’ ಇಂದು (ನ.28) ತೆರೆ ಕಾಣುತ್ತಿದೆ. ಈ ಸಿನಿಮಾ ಮೂಲಕ ಸೃಜನ್ ಪುತ್ರ ಸುಕೃತ್ ಚಿತ್ರರಂಗಕ್ಕೆ ಹೆಜ್ಜೆ ಇಡುತ್ತಿದ್ದಾರೆ. ನಿರ್ದೇಶಕನಾಗುವ ಮೂಲಕ ಚಿತ್ರರಂಗದಲ್ಲಿ ನನ್ನ ಹೊಸ ಪಯಣ ಆರಂಭವಾಗಿದೆ ಎಂದಿದ್ದಾರೆ ಸೃಜನ್...

● ಅಭಿಲಾಷ್ ಪಿ.ಎಸ್.

● ನಿಮ್ಮ ಸಿನಿಮಾಗಳ ಸಂಖ್ಯೆ ಕಡಿಮೆಯಿರಲು ಕಾರಣ...

ನನಗೆ ಹಾಗೇನು ಅನಿಸಿಲ್ಲ. ನನಗಿನ್ನೂ ವಯಸ್ಸಿದೆ. ಗುರಿ ಇಟ್ಟುಕೊಂಡು ಕೆಲಸ ಮಾಡುವವನು ನಾನಲ್ಲ. ಕೆಲಸ ಮಾಡುತ್ತಿರುವುದೇ ಗುರಿಯಾಗಬೇಕು. ಸಿನಿಮಾದಲ್ಲಿ ಕಾಣಿಸಿಕೊಳ್ಳುತ್ತಿರಲಿಲ್ಲವಷ್ಟೇ. ಆದರೆ ನಾನು ದೃಶ್ಯ ಮಾಧ್ಯಮದಲ್ಲೇ ಇದ್ದೆ. ನನ್ನ ಒಂದು ಶೋ ನನ್ನನ್ನು ಸಾಕಿ ಸಲಹಿದೆ. ಕಲಾ ಮಾಧ್ಯಮ ಎಲ್ಲಾ ಒಂದೇ ಅಲ್ಲವೇ. ನಮ್ಮ ವಂಶವನ್ನು ನೂರು ವರ್ಷ ಈ ಚಿತ್ರರಂಗ ಸಾಕಿದೆ. ಇನ್ನೇನು ಬೇಕು? ನಾನು ಸಿನಿಮಾ ಬಗ್ಗೆ ಹೆಚ್ಚು ಗಮನ ಕೊಡಲಿಲ್ಲ ಎನ್ನಬಹುದು. ಆದರೆ ನನ್ನ ಕೆಲಸದ ಬಗ್ಗೆ ನನಗೆ ತೃಪ್ತಿ ಇದೆ. ಇದೀಗ ನಿರ್ದೇಶನ ಆರಂಭಿಸಿದ್ದೇನೆ. ಇದು ಯಶಸ್ವಿಯಾದರೆ ಮುಂದೆ ಅವಕಾಶಗಳು ಮತ್ತಷ್ಟು ತೆರೆದುಕೊಳ್ಳಬಹುದು. ಇಲ್ಲಿ ಕನಸುಗಳನ್ನು ಈಡೇರಿಸಬಹುದು. ಸಿನಿಪಯಣದಲ್ಲೊಂದು ಹೊಸ ಹೆಜ್ಜೆ ಇದು.

● ನಿರ್ದೇಶನ ಎನ್ನುವುದು ಸವಾಲು. ಅದನ್ನು ಎದುರಿಸಿದ ಬಗೆ...

ಇದೊಂದು ಪ್ರಯೋಗವಾಗಿತ್ತು. ಮೊದಲ ಬಾರಿ ನಿರ್ದೇಶನದ ಜವಾಬ್ದಾರಿ ಹೊತ್ತಿದ್ದೆ. ಇದು ಎಷ್ಟು ಕಷ್ಟ ಎನ್ನುವುದನ್ನು ಅರಿತೆ. ನಟನೆಯ ಜೊತೆಗೆ ನಿರ್ದೇಶನ ಮಾಡುವುದು ಸವಾಲಿನ ವಿಷಯವೇ. ನನ್ನದೇ ಕಾನ್ಸೆಪ್ಟ್ ಆಗಿರುವ ಕಾರಣ ನಾನೇ ನಿರ್ದೇಶನ ಮಾಡುವುದಕ್ಕೆ ಮುಂದಾದೆ. 40 ನಿಮಿಷದ ಕ್ಲೈಮ್ಯಾಕ್ಸ್ ಶೂಟಿಂಗ್ ಅಂತೂ ಹೊಸ ಅನುಭವವನ್ನೇ ನೀಡಿತು. ಕ್ಲೈಮ್ಯಾಕ್ಸ್‌ನಲ್ಲಿ 30-40 ಜನ ಇರುತ್ತಾರೆ. ದೃಶ್ಯಗಳ ನಿರಂತರತೆ, ಕಲಾವಿದರ ಲುಕ್, ಸಂಭಾಷಣೆ, ಕ್ಯಾಮೆರಾ ಎಲ್ಲಿಡಬೇಕು?, ಜೊತೆಗೆ ನಟನೆ..ಹೀಗೆ ಎಲ್ಲಾ ವಿಷಯಗಳು ಒಮ್ಮೆಯೇ ತಲೆಯಲ್ಲಿ ಸುತ್ತುತ್ತಿರುವಾಗ ಕಣ್ಣಲ್ಲಿ ಮಂಜು ಮುಸುಕಿದಂಥ ಅನುಭವವಾಗಿತ್ತು.

● ಯಾಕೀ ಶೀರ್ಷಿಕೆ?

ಶೀರ್ಷಿಕೆಗೆ ಹಲವು ಆಯ್ಕೆಗಳಿದ್ದವು. ಆದರೆ ಈಗ ‘ಜಿಎಸ್‌ಟಿ’ ಎನ್ನುವುದು ಪ್ರತಿ ಭಾರತೀಯನಿಗೂ ಗೊತ್ತು. ಹೀಗಾಗಿ ಈ ಶೀರ್ಷಿಕೆ ಅಂತಿಮಗೊಳಿಸಿದೆವು. ‘ಜಿಎಸ್‌ಟಿ’ ಎಂದರೆ ‘ಘೋಸ್ಟ್ಸ್ ಇನ್ ಟ್ರಬಲ್’ ಎಂದರ್ಥ.

● ಕಥೆ ಹೊಳೆದಿದ್ದು ಹೇಗೆ?

ಕೋವಿಡ್ ಎರಡನೇ ಅಲೆ ಬಂದ ಸಂದರ್ಭದಲ್ಲಿ ಕನಸಿನಲ್ಲಿ ಬಂದ ಕಥೆ ಇದು. ಇದಕ್ಕೆ ಸಿನಿಮಾ ರೂಪ ನೀಡಿದ್ದೇನೆ. ಈ ಕಥೆಯೊಂದಿಗೆ ಎರಡು ವರ್ಷ ಕಳೆದಿದ್ದೇನೆ. ಆ ಅವಧಿಯಲ್ಲಿ ಕೋವಿಡ್ ಒತ್ತಡ, ಮುಂದೆ ಏನಾಗುತ್ತದೆ ಎನ್ನುವ ಗೊಂದಲದಲ್ಲೇ ಇದ್ದೆವು. ಜನರನ್ನು ನಗಿಸಬೇಕು ಎನ್ನುವ ಉದ್ದೇಶದಿಂದಲೇ ಈ ಚಿತ್ರ ಹೆಣೆದಿದ್ದೇನೆ. ಜನರನ್ನು ನಗಿಸುವುದಷ್ಟೇ ನನಗೆ ಗೊತ್ತಿದೆ. ಪ್ರೇಕ್ಷಕರಿಗೆ ಖಂಡಿತವಾಗಿಯೂ ಮನರಂಜನೆ ನೀಡುತ್ತೇನೆ.

ಸದ್ಯದ ಸ್ಥಿತಿಯಲ್ಲಿ ಟ್ರಾಫಿಕ್‌ನಿಂದ ಹಿಡಿದು ಆರೋಗ್ಯ ಸಮಸ್ಯೆಯವರೆಗೂ ಮನುಷ್ಯನೊಬ್ಬನ ಜೀವನ ಸಮಸ್ಯೆಯಲ್ಲೇ ಮುಳುಗಿ ಹೋಗಿದೆ. ಇಂಥವರು ಸಿನಿಮಾಗೆ ಬಂದಾಗ ಅವರನ್ನು ನಗಿಸುವುದೇ ನನ್ನ ಧರ್ಮ. ಅವರು ನಕ್ಕರೆ ನನಗೆ ತೃಪ್ತಿ, ಅದುವೇ ಆಶೀರ್ವಾದ.

● ಚಿತ್ರದಲ್ಲಿನ ನಿಮ್ಮ ಪಾತ್ರದ ಬಗ್ಗೆ...

‘ಲಕ್ಕಿ’ ಎನ್ನುವುದು ನನ್ನ ಪಾತ್ರದ ಹೆಸರು. ಹೆಸರಿಗಷ್ಟೇ ಇವನು ‘ಲಕ್ಕಿ’. ಜೀವನದುದ್ದಕ್ಕೂ ಈತ ಅನ್‌ಲಕ್ಕಿ. ಇಂತಹವನು ಬೇರೆಯವರ ಜೀವನದಲ್ಲಿ ಹೇಗೆ ಬದಲಾವಣೆ ತರುತ್ತಾನೆ ಎನ್ನುವುದೇ ಕಥೆ. ಕುಟುಂಬ ಸಮೇತವಾಗಿ ನೋಡುವ ಸಿನಿಮಾವಿದು. ದೆವ್ವಗಳು ಇರುವ ಸಿನಿಮಾವಾದರೂ ಎಲ್ಲೂ ಭಯಪಡಿಸುವುದಿಲ್ಲ. ಇದು ಖಂಡಿತವಾಗಿಯೂ ಹಾರರ್ ಸಿನಿಮಾವಲ್ಲ. ಒಂದೆರಡು ಕಡೆ ಹಾರರ್ ಎಲಿಮೆಂಟ್ ಇದೆ ಅಷ್ಟೇ.

● ವಾರಕ್ಕೆ ಏಳೆಂಟು ಸಿನಿಮಾಗಳು ತೆರೆಗೆ ಬರುತ್ತಿವೆ? ಜನ ಯಾವುದನ್ನು ನೋಡಬೇಕು?

ನಮ್ಮ ಸಿನಿಮಾ ನ.21ಕ್ಕೆ ಬರಬೇಕಿತ್ತು. ಆ ದಿನ ಐದಾರು ಸಿನಿಮಾಗಳಿವೆ ಎಂದು ಒಂದು ವಾರ ಮುಂದೂಡಿದೆವು. ನ.28ಕ್ಕೆ ಸಿನಿಮಾ ಬಿಡುಗಡೆ ಎಂದು ಘೋಷಿಸಿದೆವು. ಆದರೆ ಆ ದಿನವೂ ಅದೇ ಪರಿಸ್ಥಿತಿ ಇದೆ. ಹೀಗೆ ಎಷ್ಟು ಎಂದು ಮುಂದೂಡೋಣ. ಪ್ರತಿಯೊಬ್ಬ ನಿರ್ದೇಶಕ, ನಿರ್ಮಾಪಕರು ಅವರದ್ದೇ ಆದ ಯೋಜನೆ ಹಾಕಿಕೊಂಡಿರುತ್ತಾರೆ. ನಾನು ಕಳೆದ ಆರೇಳು ತಿಂಗಳಿಂದ ಸಿನಿಮಾದ ವಹಿವಾಟಿಗಾಗಿ ಓಡಾಡುತ್ತಿದ್ದೇನೆ. ಬೇರೆಯವರಿಗೆ ಸಿನಿಮಾ ಮುಂದೂಡಿ ಎಂದು ಹೇಳಲೂ ಆಗದ ಸ್ಥಿತಿ ಇದೆ. ಡಿಸೆಂಬರ್‌ನಲ್ಲಿ ಮೂರು ದೊಡ್ಡ ಸಿನಿಮಾಗಳು ಇವೆ. ಜನವರಿ ಮಧ್ಯದವರೆಗೂ ಇವುಗಳ ಅಬ್ಬರ ಇರುತ್ತದೆ. ಜನವರಿಯಲ್ಲಿ ಪರಭಾಷಾ ಸಿನಿಮಾಗಳು ಲಗ್ಗೆ ಇಡುತ್ತವೆ. ‘ವಿಶಾಲ ಹೃದಯ’ದವರಾದ ನಾವು ನಮ್ಮ ಸಿನಿಮಾಗಳಿಗಿಂತ ಅವುಗಳಿಗೆ ಜಾಗ ಮಾಡುತ್ತೇವೆ. ಇವುಗಳ ಅಬ್ಬರದಲ್ಲಿ ಉಳಿದ ಸಿನಿಮಾಗಳು ತೇಲಿಹೋಗುತ್ತವೆ. ಈ ರೀತಿ ಏಳೆಂಟು ಸಿನಿಮಾಗಳನ್ನು ಒಮ್ಮೆಯೇ ರಿಲೀಸ್ ಮಾಡುವುದು ಖಂಡಿತಾ ಸರಿ ಅಲ್ಲ. ಆದರೆ ವೈಯಕ್ತಿಕವಾಗಿ ಎಲ್ಲರೂ ಯೋಚಿಸಿದಾಗ ತಪ್ಪೂ ಅಲ್ಲ. ಅನಿವಾರ್ಯ ಅಷ್ಟೇ.



ಅಮ್ಮನಿಗೂ–ಮಗನಿಗೂ ಆ್ಯಕ್ಷನ್ ಕಟ್ ಹೇಳಿದ್ದೀರಿ...

‘ಇದು ಅನಿರೀಕ್ಷಿತ. ತಾತನಿಂದ ಆರಂಭವಾದ ಈ ಪಯಣ ಈಗ ನನ್ನ ಮಗ ಸುಕೃತ್‌ವರೆಗೂ ಬಂದಿದೆ. ಕಥೆ ಬರೆಯುವ ಸಂದರ್ಭದಲ್ಲಿ ಹೆಣ್ಣು-ಮಗುವೊಂದನ್ನು ಕಲ್ಪಿಸಿಕೊಂಡು ಬರೆದಿದ್ದೆ. ಭಾವನಾತ್ಮಕವಾಗಿ ಇದು ಕೆಲಸ ಮಾಡಲಿದೆ ಎಂದುಕೊಂಡಿದ್ದೆ. ಆದರೆ ಸುಕೃತ್‌ನ ಹುಮ್ಮಸ್ಸು ನೋಡಿದ ಬಳಿಕ ಪಾತ್ರದ ಬದಲಾವಣೆ ಮಾಡಿಕೊಂಡೆ. ಒಂದೇ ಫ್ರೇಮ್‌ನಲ್ಲಿ ಮೂರು ತಲೆಮಾರು ಇರುವ ಮೊದಲ ಸಿನಿಮಾ ಇದಾಗಿದೆ. ಸುಕೃತ್ ನಟನಾಗಿ ನನ್ನ ಮರ್ಯಾದೆಯನ್ನು ಉಳಿಸಿದ್ದಾನೆ ಎನ್ನುವ ಭರವಸೆ ಇದೆ. ಸಿನಿಮಾದಲ್ಲಿ ಮುಂದುವರಿಯುವುದು ಬಿಡುವುದು ಅವನಿಗೆ ಬಿಟ್ಟಿದ್ದು. ನಾನು ಆತನಿಗೆ ಯಾವುದೇ ಒತ್ತಡ ಹಾಕುವುದಿಲ್ಲ’ ಎನ್ನುತ್ತಾರೆ ಸೃಜನ್.

ಕನ್ನಡಕ್ಕೆ ಬಂದ ಶಿವಾನಿ

ಸಡಗರ ರಾಘವೇಂದ್ರ ನಿರ್ದೇಶನದ ‘ಆಪರೇಷನ್ ಲಂಡನ್ ಕೆಫೆ’ ಸಿನಿಮಾ ಮೂಲಕ ಮರಾಠಿ ನಟಿ ಶಿವಾನಿ ಸುರ್ವೆ ಕನ್ನಡ ಚಿತ್ರರಂಗಕ್ಕೆ ಕಾಲಿಟ್ಟಿದ್ದಾರೆ.

ಹಿಂದಿ, ಮರಾಠಿ ಕಿರುತೆರೆಯಲ್ಲಿ ಹೆಚ್ಚಾಗಿ ನಟಿಸಿರುವ ಶಿವಾನಿ ‘ಟ್ರಿಪಲ್ ಸೀಟ್’ ಎಂಬ ಸಿನಿಮಾ ಮೂಲಕ ಚಿತ್ರರಂಗಕ್ಕೆ ಕಾಲಿಟ್ಟಿದ್ದರು. ಇತ್ತೀಚೆಗೆ ನಡೆದ ಸುದ್ದಿಗೋಷ್ಠಿಯಲ್ಲಿ ‘ಆಪರೇಷನ್ ಲಂಡನ್ ಕೆಫೆ’ ಸಿನಿಮಾದಲ್ಲಿ ನಟಿಸಿದ ಅನುಭವ ಹಂಚಿಕೊಂಡ ಶಿವಾನಿ, ‘ಈ ಸಿನಿಮಾದ ಶೂಟಿಂಗ್ ಏಕಕಾಲದಲ್ಲಿ ಮರಾಠಿ ಹಾಗೂ ಕನ್ನಡದಲ್ಲಿ ನಡೆದಿತ್ತು. ನಾನು ಕನ್ನಡವನ್ನು ಪೂರ್ಣವಾಗಿ ಅರ್ಥಮಾಡಿಕೊಳ್ಳಬಲ್ಲೆ. ಆದರೆ ಕೊಂಚ ಮಾತನಾಡಬಲ್ಲೆ. ಇದು ನನ್ನ ಮೊದಲ ಕನ್ನಡ ಸಿನಿಮಾ. ಕನ್ನಡ ಹಾಗೂ ಮರಾಠಿ ಚಿತ್ರರಂಗದ ಅತಿ ದೊಡ್ಡ ಸಹಯೋಗದಲ್ಲಿ ನಡೆದ ಸಿನಿಮಾವಿದು. ಇದರಲ್ಲಿ ಶೇ 50 ಕನ್ನಡದ ಕಲಾವಿದರು ಹಾಗೂ ಶೇ 40 ಮರಾಠಿ ಕಲಾವಿದರಿದ್ದಾರೆ. ಹೊಸ ಸಂಸ್ಕೃತಿಯ ಅನುಭವ ನನಗೆ ಕರ್ನಾಟಕದಲ್ಲಿ ಆಯಿತು. ಸುಮಾರು ಒಂದೂವರೆ ತಿಂಗಳು ಚಿತ್ರೀಕರಣಕ್ಕಾಗಿ ಕರ್ನಾಟಕದಲ್ಲಿದ್ದೆ. ಮುಂದೆ ಹೆಚ್ಚಿನ ಕನ್ನಡ ಸಿನಿಮಾಗಳಲ್ಲಿ ನಟಿಸುವ ಇಚ್ಛೆ ಇದೆ. ಕನ್ನಡದಲ್ಲೇ ಡಬ್ ಮಾಡುವ ಆಸೆಯೂ ಇತ್ತು. ಆದರೆ ಭಾಷೆಯ ವಿಷಯದಲ್ಲಿ ತುಂಬಾ ಸೂಕ್ಷ್ಮವಾಗಿರಬೇಕು. ಡಬ್ಬಿಂಗ್ ವೇಳೆ ತಪ್ಪುಗಳು ಆದರೆ ಅದು ಕನ್ನಡಿಗರಿಗೆ ನೋವು ಉಂಟುಮಾಡಬಹುದು. ಹೀಗಾಗಿ ನಿರ್ದೇಶಕರು ಬೇರೆಯವರ ಬಳಿ ಡಬ್ಬಿಂಗ್ ಮಾಡಿಸಿದರು. ಅವರ ದನಿ ನನ್ನಂತೇ ಇರುವುದು ಆಶ್ಚರ್ಯ ಹುಟ್ಟಿಸಿತು’ ಎಂದರು.

ಡೆವಿಲ್‌ನಲ್ಲಿ ಕಲಾವಿದರ ದಂಡು



ಪ್ರಕಾಶ್ ವೀರ್ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸುತ್ತಿರುವ, ದರ್ಶನ್ ನಟನೆಯ ‘ಡೆವಿಲ್–ದಿ ಹೀರೊ’ ಸಿನಿಮಾ ಡಿ.11ರಂದು ತೆರೆಕಾಣುತ್ತಿದೆ. ಸಿನಿಮಾ ಬಿಡುಗಡೆಗೆ ಸಿದ್ಧತೆ ಆರಂಭಿಸಿರುವ ಚಿತ್ರತಂಡ ಸಿನಿಮಾದೊಳಗೆ ಕಲಾವಿದರ ಲುಕ್ ಪರಿಚಯಿಸಿದೆ.

ದರ್ಶನ್‌ಗೆ ನಾಯಕಿಯಾಗಿ ರಚನಾ ರೈ ಜೋಡಿಯಾಗಿದ್ದಾರೆ. ಇತ್ತೀಚೆಗಷ್ಟೇ ‘ಬಿಗ್‌ಬಾಸ್’ನಲ್ಲಿ ಮಿಂಚುತ್ತಿರುವ ಗಿಲ್ಲ ನಟನ ಪಾತ್ರದ ಪೋಸ್ಟರ್ ರಿಲೀಸ್ ಮಾಡಿದ್ದ ತಂಡ ಇದೀಗ ಬಹುಭಾಷಾ ನಟರಾದ ಮಹೇಶ್ ಮಂಜ್ರೇಕರ್ ಹಾಗೂ ಅಚ್ಯುತ್ ಕುಮಾರ್ ಪಾತ್ರವನ್ನು ಅನಾವರಣಗೊಳಿಸಿದೆ. ಇವರ ಜೊತೆಗೆ ಕಿರುತೆರೆಯಲ್ಲಿ ಮಿಂಚಿದ ನಟ ಹುಲಿ ಕಾರ್ತಿಕ್ ಕೂಡಾ ಚಿತ್ರದ ತಾರಾಬಳಗದಲ್ಲಿದ್ದಾರೆ. ಶ್ರೀ ಜೈ ಮಾತ ಕಂಬೈನ್ಸ್ ಲಾಂಛನದಲ್ಲಿ ಜೆ.ಜಯಮ್ಮ ನಿರ್ಮಾಣ ಮಾಡಿರುವ ‘ಡೆವಿಲ್’ನ ಚಿತ್ರೀಕರಣ ಬೆಂಗಳೂರು, ರಾಜಸ್ಥಾನ, ಬ್ಯಾಂಕಾಕ್ ಮುಂತಾದ ಕಡೆ ನಡೆದಿದೆ. ಸುಧಾಕರ್ ಎಸ್. ರಾಜ್ ಛಾಯಾಚಿತ್ರಗ್ರಹಣ, ಬಿ.ಅಜನೀಶ್ ಲೋಕನಾಥ್ ಸಂಗೀತ ನಿರ್ದೇಶನ, ಹರೀಶ್ ಕೊಮ್ಮೆ ಸಂಕಲನ, ಮೋಹನ್ ಬಿ.ಕೆರೆ ಕಲಾ ನಿರ್ದೇಶನ ಹಾಗೂ ರಾಮ್ ಲಕ್ಷ್ಮಣ್ ಸಾಹಸ ನಿರ್ದೇಶನ ಚಿತ್ರಕ್ಕಿದೆ.



ಮಹಾಶಿವರಾತ್ರಿಗೆ ಸ್ವಯಂಭು ಬಿಡುಗಡೆ

ತೆಲುಗು ನಟ ನಿಖಿಲ್ ಸಿದ್ಧಾರ್ಥ್ ನಟಿಸುತ್ತಿರುವ ಸಿನಿಮಾ ‘ಸ್ವಯಂಭು’ 2026ರ ಫೆಬ್ರುವರಿ 13ಕ್ಕೆ ರಿಲೀಸ್ ಆಗಲಿದೆ.

ವಿಶೇಷ ವಿಡಿಯೊವೊಂದರ ಮೂಲಕ ಚಿತ್ರತಂಡ ಶೂಟಿಂಗ್ ಪೂರ್ಣಗೊಳಿಸಿರುವ ಮಾಹಿತಿ ಹಂಚಿಕೊಂಡಿದೆ. ಎರಡು ವರ್ಷದ ಹಿಂದೆ ಈ ಸಿನಿಮಾ ಸೆಟ್ಟೇರಿತ್ತು. 170 ದಿನಗಳ ಕಾಲ ಚಿತ್ರದ ಶೂಟಿಂಗ್ ನಡೆದಿದ್ದು, ಇದು ನಿಖಿಲ್ ಸಿದ್ಧಾರ್ಥ್ ಅವರ 20ನೇ ಚಿತ್ರ. ಪಿಕ್ಸೆಲ್ ಸ್ಟುಡಿಯೊ ಮೂಲಕ ಭುವನ್ ಹಾಗೂ ಶ್ರೀಕರ್ ಈ ಚಿತ್ರ ನಿರ್ಮಾಣ ಮಾಡಿದ್ದಾರೆ. ಸಹಸ್ರಮಾನಗಳ ಹಿಂದಿನ ಕಥೆ ಹೊಂದಿರುವ ಈ ಸಿನಿಮಾ ನಿಖಿಲ್ ವೃತ್ತಿಜೀವನದ ಬಿಗ್‌ಬಜೆಟ್ ಚಿತ್ರ. ಕೆ.ಕೆ. ಸೆಂಥಿಲ್ ಕುಮಾರ್ ಛಾಯಾಚಿತ್ರಗ್ರಹಣ, ರವಿ ಬಸ್ರೂರ್ ಸಂಗೀತ, ವಿಜಯ್ ಕಾಮಿಸೆಟ್ಟಿ ಸಂಭಾಷಣೆ ಚಿತ್ರಕ್ಕಿದೆ. ಭರತ್ ಕೃಷ್ಣಮಾಚಾರಿ ಆ್ಯಕ್ಷನ್ ಕಟ್ ಹೇಳಿರುವ ಈ ಸಿನಿಮಾದಲ್ಲಿ ಸಂಯುಕ್ತ ನಾಯಕಿಯಾಗಿ ನಟಿಸಿದ್ದು, ನಭಾ ನಟೇಶ್ ವಿಶೇಷ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ.

ಎಂಟು ಸಿನಿಮಾಗಳು ತೆರೆಗೆ

ಡಿಸೆಂಬರ್‌ನಲ್ಲಿ ದರ್ಶನ್ ನಟನೆಯ ‘ಡೆವಿಲ್’, ಸುದೀಪ್ ನಟನೆಯ ‘ಮಾರ್ಕ್’ ಹಾಗೂ ಉಪೇಂದ್ರ, ಶಿವರಾಜ್‌ಕುಮಾರ್ ಹಾಗೂ ರಾಜ್ ಬಿ.ಶೆಟ್ಟಿ ನಟಿಸಿರುವ ‘45’ ತೆರೆಕಾಣುತ್ತಿರುವ ಹಿನ್ನೆಲೆಯಲ್ಲಿ ಸಣ್ಣ ಬಜೆಟ್ ಸಿನಿಮಾಗಳು ಈ ಅವಧಿಯಲ್ಲಿ ತೆರೆಗೆ ಬರಲು ಹಿಂದೇಟು ಹಾಕಿವೆ. ಹೀಗಾಗಿಯೇ ನವೆಂಬರ್‌ನಲ್ಲಿ ಕಳೆದ ಮೂರು ಶುಕ್ರವಾರಗಳಲ್ಲಿ 20ಕ್ಕೂ ಅಧಿಕ ಕನ್ನಡ ಸಿನಿಮಾಗಳು ತೆರೆಕಂಡಿವೆ. ಗುರುವಾರ(ನ.27) ‘ಬ್ಯಾಂಕ್ ಆಫ್ ಭಾಗ್ಯಲಕ್ಷ್ಮಿ’ ತೆರೆಕಂಡಿದ್ದು, ಇಂದು(ನ.28) ಮತ್ತೆ ಎಂಟು ಕನ್ನಡ ಸಿನಿಮಾಗಳು ಈ ಪಟ್ಟಿಗೆ ಸೇರ್ಪಡೆಯಾಗುತ್ತಿವೆ.

ನಾಯಿ ಇದೆ ಎಚ್ಚರಿಕೆ

ಕಲಿ ಗೌಡ ನಿರ್ದೇಶನದ ಈ ಚಿತ್ರದ ಪ್ರಮುಖಪಾತ್ರದಲ್ಲಿ ಲೀಲಾ ಮೋಹನ್ ಪಿವಿಆರ್ ನಟಿಸಿದ್ದಾರೆ. ಲಾವಣ್ಯ ಗದೆ ಈ ಸಿನಿಮಾ ನಿರ್ಮಾಣ ಮಾಡಿದ್ದಾರೆ. ಕಲಿ ಗೌಡ ಈ ಹಿಂದೆ ‘ತನಿಖೆ’ ಎಂಬ ಚಿತ್ರ ನಿರ್ದೇಶಿಸಿದ್ದರು. ಹಾರಾರ್ ಥ್ರಿಲ್ಲರ್ ಕಥಾಹಂದರ ಹೊಂದಿರುವ ಈ ಸಿನಿಮಾದಲ್ಲಿ ನಾಯಿ ಹಾಗೂ ಮನುಷ್ಯನ ಬಾಂಧವ್ಯದ ಕುರಿತು ಕಥೆಯಿದೆ. ಕನ್ನಡದಲ್ಲಿ ತೀರ ಅಪರೂಪ ಎನ್ನಬಹುದಾದ ಝೂಂಬಿ ಚಿತ್ರ ಇದಾಗಿದೆ. ಪ್ರಮೋದ್ ಶೆಟ್ಟಿ, ಬಲ ರಾಜವಾಡಿ, ದಿವ್ಯಶ್ರೀ, ಮಾನಸ ಗೌಡ, ದಿನೇಶ್ ಮಂಗಳೂರು, ನಾಗೇಂದ್ರ ಅರಸ್, ಜಗಪ್ಪ, ಅನಿರುದ್ಧ್ ಮಹೇಶ್, ಪ್ರಬಿಕ್ ಮೊಗವೀರ್, ಚಂದನ, ರಿಷಿ, ಸೀನು ಮುಂತಾದವರು ತಾರಾಬಳಗದಲ್ಲಿದ್ದಾರೆ. ಎ.ಜೆ.ಕುಮಾರ್ ಛಾಯಾಚಿತ್ರಗ್ರಹಣ ಹಾಗೂ ರವೀಶ್ ಆತ್ಮರಾಮ್ ಸಂಕಲನ ಚಿತ್ರಕ್ಕಿದೆ.

ಪಾಠಶಾಲಾ

ಇದು ‘ಗ್ಯಾಪಲ್ಲೊಂದು ಸಿನಿಮಾ’, ‘ಓಮಿನಿ’ ಚಿತ್ರ ನಿರ್ದೇಶಿಸಿದ್ದ ಹೆದ್ದೂರ್ ಮಂಜುನಾಥ್ ಶೆಟ್ಟಿ ನಿರ್ದೇಶಿಸಿರುವ ಸಿನಿಮಾ. ಎಂ.ಎಸ್.ಸ್ಕ್ವೇರ್ ಮೂವೀಸ್ ಲಾಂಛನದಲ್ಲಿ ಈ ಸಿನಿಮಾ ನಿರ್ಮಾಣವಾಗಿದೆ. ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಚಿತ್ರೀಕರಣಗೊಂಡಿರುವ ಈ ಸಿನಿಮಾದಲ್ಲಿ ನಲವತ್ತಕ್ಕೂ ಅಧಿಕ ಮಕ್ಕಳು ನಟಿಸಿದ್ದಾರೆ. ಬಾಲಾಜಿ ಮನೋಹರ್, ಸುಧಾಕರ್ ಬನ್ನಂಜೆ, ಕಿರಣ್ ನಾಯಕ್, ನಟನ ಪ್ರಶಾಂತ್ ಮುಂತಾದವರು ತಾರಾಬಳಗದಲ್ಲಿದ್ದಾರೆ. ಕೆಲ ದಶಕಗಳ ಹಿಂದೆ ಶಿಕ್ಷಕರು ಹಾಗೂ ಮಕ್ಕಳ ನಡುವೆ ಇದ್ದ ಸಂಬಂಧದ ಸುತ್ತ ಚಿತ್ರದ ಕಥಾಹಂದರವಿದೆ. ವಿಕಾಸ್ ವಸಿಷ್ಠ ಸಂಗೀತ ನಿರ್ದೇಶನ, ಜೀವನ್ ಗೌಡ ಛಾಯಾಚಿತ್ರಗ್ರಹಣ ಹಾಗೂ ಉಮೇಶ್ ಆರ್.ಬಿ. ಸಂಕಲನ ಚಿತ್ರಕ್ಕಿದೆ.

ಇವುಗಳ ಜೊತೆಗೆ ‘ತಂತ್ರ’ ಹಾಗೂ ‘ಆಚಾರ್ಯ ಶ್ರೀಶಂಕರ’ ಎಂಬ ಸಿನಿಮಾಗಳೂ ತೆರೆಕಾಣುತ್ತಿವೆ. ನ.28ರಂದು ತೆರೆಕಾಣಬೇಕಿದ್ದ ರಿಶಿತ್ ಶೆಟ್ಟಿ ನಿರ್ದೇಶನದ, ರಿತ್ವಿಕ್ ಮಠದ್ ಹಾಗೂ ಚೈತ್ರಾ ಜೆ.ಆಚಾರ್ ನಟಿಸಿರುವ ‘ಮಾರ್ನಮಿ’ ಸಿನಿಮಾವನ್ನು ಚಿತ್ರತಂಡ ಮುಂದೂಡಿದೆ.

ಫ್ಲರ್ಟ್

ನಟ ಚಂದನ್ ಕುಮಾರ್ ನಿರ್ದೇಶಿಸಿ, ನಟಿಸಿರುವ ಸಿನಿಮಾ ಇದಾಗಿದೆ. ಎವರೆಸ್ಟ್ ಪಿಕ್ಚರ್ಸ್ ಮೂಲಕ ನಿರ್ಮಾಣದಲ್ಲೂ ಚಂದನ್ ಕೈಜೋಡಿಸಿದ್ದಾರೆ. ‘ಎ ಪ್ಯೂರ್ ಡವ್ ಸ್ಟೋರಿ’ ಎಂಬ ಅಡಿಬರಹವಿರುವ ಈ ಸಿನಿಮಾದಲ್ಲಿ ನಿಮಿಕಾ ರತ್ನಾಕರ್, ಅಕ್ಷತಾ ಬೋಪಣ್ಣ ನಾಯಕಿಯರಾಗಿ ನಟಿಸಿದ್ದಾರೆ. ಚಿತ್ರದಲ್ಲಿ ನ್ಯಾಯಾಧೀಶರಾಗಿ ನಟ ಅವಿನಾಶ್ ನಟಿಸಿದ್ದು, ಶೃತಿ, ಸಾಧು ಕೋಕಿಲ, ಗಿರೀಶ್ ಶಿವಣ್ಣ, ವಿನಯ್ ಗೌಡ ತಾರಾಬಳಗದಲ್ಲಿದ್ದಾರೆ. ನಕುಲ್ ಅಭಯಂಕರ್ ಹಾಗೂ ಜಸ್ಸಿ ಗಿಫ್ಟ್ ಚಿತ್ರದ ಹಾಡುಗಳಿಗೆ ಸಂಗೀತ ನೀಡಿದ್ದಾರೆ. ಸಿನಿಮಾಗೆ ಎಚ್.ಸಿ.ವೇಣು ಛಾಯಾಚಿತ್ರಗ್ರಹಣವಿದೆ.


ಚಂದನ್, ನಿಮಿಕಾ

ಬಿಚ್ಚುಗತ್ತಿಯ ಬಂಟನ ಬಲ್ಲರೇನ

‘ದುಡಿಯ ಸದ್ದಿಗೆ ಕ್ರಾಂತಿಯು ಎದ್ದಿದೆ’ ಎಂಬ ಅಡಿಬರಹವಿರುವ ಈ ಸಿನಿಮಾವನ್ನು ದೋರಸಮುದ್ರ ಪಿಕ್ಚರ್ಸ್ ಬ್ಯಾನರ್ ಅಡಿಯಲ್ಲಿ ಅನಿಲ್ ದೋರಸಮುದ್ರ ನಿರ್ದೇಶನ ಮಾಡಿದ್ದಾರೆ. ಅವರೇ ಸಿನಿಮಾಗೆ ಬಂಡವಾಳ ಹೂಡಿದ್ದು, ನವೀನ್ ಸಿಂಬಾವಿ ನಿರ್ಮಾಣದಲ್ಲಿ ಕೈ ಜೋಡಿಸಿದ್ದಾರೆ. ‘ಈ ಸಿನಿಮಾ ‘ಚೋಮನದುಡಿ’ಯ ಮುಂದುವರಿದ ಭಾಗ ಎನ್ನಬಹುದು. ಚೋಮ ಹೋರಾಟ ಮಾಡಿದರೂ ಭೂಮಿ ಸಿಗುವುದಿಲ್ಲ. ಆತನ ಮಗ ಕಾಳ ನ್ಯಾಯಕ್ಕಾಗಿ ತೀವ್ರಗಾಮಿಯಾಗಿ ಬಿಚ್ಚುಗತ್ತಿಯನ್ನು ಉಪಯೋಗಿಸಿದಾಗ ಏನಾಗುತ್ತದೆ. ಅಂತಿಮವಾಗಿ ಅಪ್ಪನ ಆಸೆಯನ್ನು ಕಾಳ ಮತ್ತು ಬೆಳ್ಳಿ ಈಡೇರಿಸಿಕೊಳ್ಳುತ್ತಾರಾ ಎಂಬುದನ್ನು ಕಮರ್ಷಿಯಲ್ ರೂಪದಲ್ಲಿ ತೋರಿಸುವ ಪ್ರಯತ್ನ ಮಾಡಲಾಗಿದೆ. ಚೋಮನ ಪಾತ್ರ ಶೇಕಡ ಇಪ್ಪತ್ತರಷ್ಟು ಬರುತ್ತದೆಂದು’ ಹೇಳುತ್ತಾರೆ ಅನಿಲ್ ದೊರಸಮುದ್ರ. ಚೆಲುವರಾಜ್‌ಗೌಡ, ಬಾಸುಮ ಕೊಡಗು, ಸ್ವೀಡಲ್ ಡಿಸೋಜಾ, ಶೈಲೇಶ್ ಕಂಗೇರಿ, ತಾರಾನಾಥ ಬೋಳಾರ್, ಪುಣ್ಯ ಕೋಟ್ಯಾನ್, ಗೋಪಾಲ್ ಮೂಲ್ಯ ಮುಂತಾದವರು ತಾರಾಬಳಗದಲ್ಲಿ ಇದ್ದಾರೆ.


ಅನಿಲ್

ಆಪರೇಷನ್ ಲಂಡನ್ ಕೆಫೆ

ಕನ್ನಡ, ಮರಾಠಿ ಹಾಗೂ ಹಿಂದಿ ಭಾಷೆಗಳಲ್ಲಿ ಈ ಸಿನಿಮಾ ಬಿಡುಗಡೆಯಾಗುತ್ತಿದ್ದು, ‘ಜೊತೆ ಜೊತೆಯಲಿ’ ಧಾರಾವಾಹಿ ಮೂಲಕ ಗುರುತಿಸಿಕೊಂಡು, ಬಳಿಕ ‘ತ್ರಿಬಲ್ ರೈಡಿಂಗ್’, ‘ದಿಲ್‌ಪಸಂದ್’, ‘ಕೈವ’ ಸಿನಿಮಾಗಳಲ್ಲಿ ನಟಿಸಿರುವ ಮೇಘಾ ಶೆಟ್ಟಿ ಮುಖ್ಯಭೂಮಿಕೆಯಲ್ಲಿದ್ದಾರೆ. ‘ಜಿಲ್ಕಾ’ ಸಿನಿಮಾದಲ್ಲಿ ನಟಿಸಿದ್ದ ಕವೀಶ್ ಶೆಟ್ಟಿ ಈ ಸಿನಿಮಾದಲ್ಲಿ ನಕ್ಸಲೈಟ್ ಆಗಿ ಕಾಣಿಸಿಕೊಂಡಿದ್ದಾರೆ. ಈ ಚಿತ್ರವನ್ನು ಸಡಗರ ರಾಘವೇಂದ್ರ ನಿರ್ದೇಶಿಸಿದ್ದಾರೆ. ಇಂಡಿಯನ್ ಫಿಲಂ ಫ್ಯಾಕ್ಟರಿ ಮತ್ತು ದೀಪಕ್ ರಾಣೆ ಫಿಲಂಸ್ ಸಂಸ್ಥೆಯಿಂದ ನಿರ್ಮಾಣವಾಗಿರುವ ಈ ಚಿತ್ರವನ್ನು ವಿಜಯ್ ಕುಮಾರ್ ಶೆಟ್ಟಿ, ರಮೇಶ್ ಕೊಠಾರಿ, ದೀಪಕ್ ರಾಣೆ ಮತ್ತು ವಿಜಯ್ ಪ್ರಕಾಶ್ ನಿರ್ಮಾಣ ಮಾಡಿದ್ದಾರೆ.


ಮೇಘಾ ಶೆಟ್ಟಿ

GST

ನಟ ಸೃಜನ್ ಲೋಕೇಶ್ ನಿರ್ದೇಶನದ ಚೊಚ್ಚಲ ಸಿನಿಮಾ ಇದಾಗಿದೆ. ಚಿತ್ರವನ್ನು ಸಂದೇಶ್ ಪ್ರೊಡಕ್ಷನ್ಸ್‌ನಡಿ ಸಂದೇಶ್ ನಾಗರಾಜ್ ನಿರ್ಮಾಣ ಮಾಡಿದ್ದಾರೆ. ‘ಘೋಸ್ಟ್ಸ್ ಇನ್ ಟ್ರಬಲ್’ ಎನ್ನುವ ಅಡಿಬರಹ ಚಿತ್ರಕ್ಕಿದ್ದು, ಇದುವೇ ಚಿತ್ರದ ಕಥಾಹಂದರವನ್ನು ತಿಳಿಸಿದೆ. ನಿರ್ದೇಶನದ ಜೊತೆಗೆ ನಾಯಕನಾಗಿಯೂ ಸೃಜನ್ ಈ ಸಿನಿಮಾದಲ್ಲಿ ನಟಿಸಿದ್ದಾರೆ. ಚಿತ್ರದಲ್ಲಿ ಗಿರಿಜಾ ಲೋಕೇಶ್, ಸೃಜನ್ ಲೋಕೇಶ್ ಹಾಗೂ ಸೃಜನ್ ಅವರ ಪುತ್ರ ಸುಕೃತ್ ಅಭಿನಯಿಸಿದ್ದಾರೆ. ಸೃಜನ್ ಲೋಕೇಶ್‌ಗೆ ನಾಯಕಿಯಾಗಿ ರಜನಿ ಭಾರದ್ವಾಜ್ ನಟಿಸಿದ್ದಾರೆ. ಶೋಭರಾಜ್, ಶರತ್ ಲೋಹಿತಾಶ್ವ, ನಿವೇದಿತಾ, ಅರವಿಂದ್ ರಾವ್, ತಬಲ ನಾಣಿ, ರವಿಶಂಕರ್ ಗೌಡ, ವಿನಯ ಪ್ರಸಾದ್ ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ. ಚಂದನ್ ಶೆಟ್ಟಿ ಸಂಗೀತ ನಿರ್ದೇಶನ ಹಾಗೂ ಗುಂಡ್ಲುಪೇಟೆ ಸುರೇಶ್ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ.


ರಜನಿ


ದೀಕ್ಷಿತ್, ಬೃಂದಾ

ಅಪ್ರಬುದ್ಧ ಹುಡುಗರ ಬ್ಯಾಂಕ್ ದರೋಡೆ ಕಥೆ

ಬ್ಯಾಂಕ್ ದರೋಡೆಗೆ ಸಂಬಂಧಿಸಿದ ಹಲವು ಸಿನಿಮಾಗಳು ಈಗಾಗಲೇ ಬಂದಿವೆ. ‘ದರೋಡೆ’ ಈ ಕಥೆಗಳ ಮುಖ್ಯ ವಿಷಯವಾದರೂ ಅನುಸರಿಸುವ ತಂತ್ರಗಳು ಭಿನ್ನ. ಕನ್ನಡದ ‘ನಿಷ್ಕರ್ಷ’, ಹಿಂದಿಯ ‘ಆಂಕೆ’ ಹೀಗೆ ಬ್ಯಾಂಕ್ ದರೋಡೆಯ ಕಥೆಗಳನ್ನು ಪ್ರೇಕ್ಷಕರು ನೋಡಿದ್ದಾರೆ. ಇದಕ್ಕೆ ಸೇರ್ಪಡೆ ‘ಬ್ಯಾಂಕ್ ಆಫ್ ಭಾಗ್ಯಲಕ್ಷ್ಮಿ’. ಇದರ ಕಥೆ ಸರಳವಾಗಿದ್ದು, ಭಿನ್ನವಾಗಿಯೂ ಇದೆ. ಆದರೆ ಅದನ್ನು ಹೇಳುವ ವಿಧಾನವನ್ನು ನಿರ್ದೇಶಕರೇ ಸಂಕೀರ್ಣಗೊಳಿಸಿರುವ ಕಾರಣ ಕಿರುಚಿತ್ರವೊಂದನ್ನು ಬೇಕೆಂದೇ ಸಿನಿಮಾ ಮಾಡಿದಂತೆ ಅನಿಸುತ್ತದೆ.

ಅಪ್ರಬುದ್ಧ, ಹುಡುಗುಬುದ್ಧಿಯ ಯುವಕರ ತಂಡವೊಂದು ಬ್ಯಾಂಕ್ ದರೋಡೆ ಮಾಡುವ ಕಥೆ ಇದು. ‘ಕನಕ’ (ದೀಕ್ಷಿತ್ ಶೆಟ್ಟಿ) ಈ ಗುಂಪಿನ ನಾಯಕ. ಸಣ್ಣಪುಟ್ಟ ಕಳ್ಳತನ ಮಾಡಿಕೊಂಡಿದ್ದ ಈ ಗುಂಪು ಗ್ರಾಮೀಣ ಭಾಗದಲ್ಲಿರುವ ‘ಭಾಗ್ಯಲಕ್ಷ್ಮಿ ಸಹಕಾರಿ ಬ್ಯಾಂಕ್’ ದರೋಡೆಗೆ ಇಳಿಯುತ್ತದೆ. ಅದು ಚುನಾವಣೆ ಸಂದರ್ಭವೂ ಆಗಿರುತ್ತದೆ. ಲಕ್ಷಾಂತರ ರೂಪಾಯಿ ದೋಚುವ ಕನಸು ಹೊತ್ತು ಬಂದ ಗುಂಪು ಬ್ಯಾಂಕ್‌ನಲ್ಲಿ ಸಿಲುಕಿಕೊಂಡಾಗ ಕಥೆ ತೆರೆದುಕೊಂಡು ಮುಂದಡಿ ಇಡುತ್ತದೆ.

ಸರಳವಾಗಿ ಸಾಗಬೇಕಾದ ಕಥೆಯನ್ನು ನಿರ್ದೇಶಕರೇ ಕ್ಲಿಷ್ಟವಾಗಿಸಿ ಚಿತ್ರಕಥೆ ರೂಪಿಸಿದ್ದಾರೆ. ಇದು ಅನಗತ್ಯವಾದ ದೃಶ್ಯಗಳು ಹಾಗೂ ಪಾತ್ರಗಳನ್ನು ಸೃಷ್ಟಿಸಿರುವುದಲ್ಲದೆ, ಸಿನಿಮಾ ಅವಧಿಯನ್ನೂ ಹೆಚ್ಚಿಸಿದೆ. ಇದನ್ನು ಗಮನಕ್ಕೆ ತಂದುಕೊಂಡು ಬರವಣಿಗೆಯನ್ನು ಇನ್ನಷ್ಟು ಚುರುಕಾಗಿಸಬಹುದಿತ್ತು. ದ್ವಿತೀಯಾರ್ಧಕ್ಕೆ ಹೋಲಿಸಿದರೆ ಚಿತ್ರದ ಮೊದಲಾರ್ಧವೇ ಗಟ್ಟಿಯಾಗಿದೆ. ನಗಿಸುವ ಅಂಶಗಳು ಇಲ್ಲಿ ಬಹಳಷ್ಟಿವೆ. ಅಪ್ರಬುದ್ಧವಾಗಿದ್ದ ಹುಡುಗರನ್ನು ಪ್ರಬುದ್ಧಗೊಳಿಸಿದ್ದೇ ದ್ವಿತೀಯಾರ್ಧ ಎಡವಲು ಕಾರಣವಾದಂತಿದೆ. ಊರೊಂದರಲ್ಲಿ ಬ್ಯಾಂಕ್ ದರೋಡೆ ನಡೆಯುತ್ತಿದ್ದರೂ, ಆ ಊರಿನ ಕೆಲ ಜನ ಅದರೊಳಗೆ ಸಿಲುಕಿದ್ದರೂ ಊರ ಜಾತ್ರೆ ಸರಾಗವಾಗಿ ನಡೆಯಲು ಹೇಗೆ ಸಾಧ್ಯ? ಹೀಗೆ ಹಲವು ಪ್ರಶ್ನೆಗಳನ್ನು ಸಿನಿಮಾ ಉಳಿಸುತ್ತದೆ. ಕಥೆಯಲ್ಲಿ ತಿರುವುಗಳಿದ್ದರೂ, ಕ್ಲೈಮ್ಯಾಕ್ಸ್‌ನಲ್ಲಿ ‘ವಾವ್’ ಎನಿಸುವಂಥ ಅಂಶಗಳಿಲ್ಲ. ಈ ಬಗ್ಗೆ ಹೆಚ್ಚಿನ ಗಮನಹರಿಸಬಹುದಿತ್ತು.

‘ಆನಂದ’ ಪಾತ್ರದಲ್ಲಿ ಶ್ರೀವತ್ಸ ಮೊದಲಾರ್ಧದಲ್ಲಿ ನಗಿಸುವ ಜವಾಬ್ದಾರಿ ಹೊತ್ತಿದ್ದಾರೆ. ಹುಡುಗುಬುದ್ಧಿಯ ಹುಡುಗರ ಗುಂಪು ‘ಹಾಸ್ಟೆಲ್ ಹುಡುಗ’ರನ್ನು ನೆನಪಿಸುತ್ತದೆ. ದೀಕ್ಷಿತ್ ಹಾಗೂ ಬೃಂದಾ ತಮ್ಮ ಪಾತ್ರಗಳನ್ನು ಚೆನ್ನಾಗಿ ನಿಭಾಯಿಸಿದ್ದಾರೆ. ನಿರ್ದೇಶಕರು ವಿಎಫ್‌ಎಕ್ಸ್ ಕ್ಷೇತ್ರದಲ್ಲೇ ಇರುವ ಕಾರಣದಿಂದ ಹಾಡಿನ ದೃಶ್ಯಗಳು ತೆರೆಯಲ್ಲಿ ಅದ್ಭುತವಾಗಿ ಕಾಣಿಸುತ್ತವೆ. ‘ಅಕ್ಕರೆ ಆಗಿದೆ...’ ಹಾಗೂ ‘ಮಿರ್‍ಯಾಕಲ್...’ ಹಾಡುಗಳು ಇಂಪಾಗಿವೆ.

–ಅಭಿಲಾಷ್ ಪಿ.ಎಸ್.

ನಾವು ನೋಡಿದ ಸಿನಿಮಾ

ಬ್ಯಾಂಕ್ ಆಫ್ ಭಾಗ್ಯಲಕ್ಷ್ಮಿ (ಕನ್ನಡ)

- ನಿರ್ಮಾಣ: ಎಚ್.ಕೆ.ಪ್ರಕಾಶ್
- ನಿರ್ದೇಶನ: ಅಭಿಷೇಕ್ ಎಂ.
- ತಾರಾಗಣ: ದೀಕ್ಷಿತ್ ಶೆಟ್ಟಿ, ಬೃಂದಾ ಆಚಾರ್ಯ, ಶ್ರೀವತ್ಸ, ಗೋಪಾಲಕೃಷ್ಣ ದೇಶಪಾಂಡೆ, ಸಾಧು ಕೋಕಿಲ, ಉಷಾ ಭಂಡಾರಿ, ಭರತ್, ವಿಶ್ವನಾಥ್ ಮತ್ತಿತರರು.

ನೋಡಬಹುದಾದ ಚಿತ್ರ

ಚಿಟಿಕೆ ಸುದ್ದಿ

ಹೊತ್ತಿ ಉರಿದ ಟ್ಯಾಂಕರ್: ಚಾಲಕ ಸಜೀವ ದಹನ


ನಿರಂಜನ

ಚಿಂಚೋಳಿ: ಇಲ್ಲಿನ ಸಿದ್ಧಸಿರಿ ಎಥೆನಾಲ್ ಮತ್ತು ಪವರ್ ಘಟಕದಿಂದ ಎಥೆನಾಲ್ ಸಾಗಿಸುತ್ತಿದ್ದ ಟ್ಯಾಂಕರ್ ತೆಲಂಗಾಣದ ಮೆಹಬೂಬ್‌ನಗರ ಸಮೀಪದ ಪಿಲ್ಲಿಗುಂಡು ಗ್ರಾಮದ ಬಳಿ ಬುಧವಾರ ತಡರಾತ್ರಿ ಅಪಘಾತಕ್ಕೀಡಾಗಿ ಹೊತ್ತಿ ಉರಿದು ಚಾಲಕ ಸಜೀವ ದಹನವಾಗಿದ್ದಾರೆ.

ತಾಲ್ಲೂಕಿನ ಹೂಡದಳ್ಳಿ ಗ್ರಾಮದ ನಿರಂಜನ ಜಮಾದಾರ (30) ಸಜೀವ ದಹನವಾದವರು.

ಎಥೆನಾಲ್ ತುಂಬಿದ್ದ ಟ್ಯಾಂಕರ್ ಚಿಂಚೋಳಿ–ಮೆಹಬೂಬ್‌ನಗರ ಜೆಡಚರ್ಲಾ ಕ್ರಾಸ್ ಮಾರ್ಗವಾಗಿ ಬೆಂಗಳೂರಿನ ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್‌ಗೆ ಹೊರಟಿತ್ತು. ಈ ವೇಳೆ ಟ್ಯಾಂಕರ್ ಹಾಗೂ ಸರಕು ಸಾಗಿಸುತ್ತಿದ್ದ ವಾಹನದ ನಡುವೆ ಅಪಘಾತ ಸಂಭವಿಸಿತ್ತು.

ನಿರಂಜನ ಅವರಿಗೆ ತಾಯಿ, ಪತ್ನಿ ಹಾಗೂ ಇಬ್ಬರು ಪುತ್ರರು ಇದ್ದಾರೆ. ತೆಲಂಗಾಣದ ಹನ್ನವಾಡ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಹೆಣ್ಣು ಮಕ್ಕಳ ವಸತಿನಿಲಯ ಆರಂಭ’

ಬೆಂಗಳೂರು: ಜಿಲ್ಲಾ ಕೇಂದ್ರಗಳಲ್ಲಿ ಹೆಣ್ಣು ಮಕ್ಕಳ ವಸತಿ ನಿಲಯ ಸ್ಥಾಪನೆಗೆ ಕ್ರಮ ಕೈಗೊಳ್ಳಲಾಗುವುದು. ಕೃಷಿ ಕಾಲೇಜು, ಎಂಜಿನಿಯರಿಂಗ್ ಮತ್ತು ವೈದ್ಯಕೀಯ ಕಾಲೇಜು ಪ್ರಾರಂಭಿಸಲಾಗುವುದು ಎಂದು ಒಕ್ಕಲಿಗರ ಸಂಘದ ಅಧ್ಯಕ್ಷ ಎಲ್.ಶ್ರೀನಿವಾಸ್ ಹೇಳಿದರು.

‘ಸರ್ವ ಸದಸ್ಯರ ಸಭೆ ನಡೆಸಿ, ಬೈಲಾ ತಿದ್ದುಪಡಿಗೆ, ಸಂಘದ ಅಭಿವೃದ್ಧಿಗೆ ಎಲ್ಲಾ 25 ನಿರ್ದೇಶಕರು ಒಗ್ಗಟ್ಟಿನಿಂದ ಶ್ರಮಿಸಲಾಗುವುದು’ ಎಂದರು.

ಸಹಜೀವನಕ್ಕೂ ಕಲಂ 498 ಎ ಅನ್ವಯ

ಕೌಟುಂಬಿಕ ಕಲಹ ಪ್ರಕರಣ: ವೈದ್ಯ ಪತಿಯ ಅರ್ಜಿ ತಿರಸ್ಕೃತ

ಪ್ರಜಾವಾಣಿ ವಾರ್ತೆ

ಹೈಕೋರ್ಟ್ ಸುದ್ದಿ

ಬೆಂಗಳೂರು: ‘ವಿವಾಹಿತ ಮಹಿಳೆಯ ಮೇಲಿನ ಕ್ರೌರ್ಯ ಮತ್ತು ಕಿರುಕುಳ ತಡೆಯುವ ಉದ್ದೇಶದಿಂದ ಭಾರತೀಯ ದಂಡ ಸಂಹಿತೆ ಕಾಯ್ದೆಗೆ ಸೇರ್ಪಡೆ ಮಾಡಲಾಗಿರುವ ಕಲಂ 498 ‘ಎ’ ಕಾನೂನು ಬದ್ಧವಾಗಿ ವಿವಾಹವಾಗಿರುವ ಪತಿಗೆ ಮಾತ್ರವೇ ಸೀಮಿತವಾಗುವುದಿಲ್ಲ. ಬದಲಿಗೆ, ಮದುವೆಯ ಗುಣ ಲಕ್ಷಣಗಳನ್ನು ಹೊಂದಿ ಬಾಳುವೆ ನಡೆಸುವ ಲಿವ್–ಇನ್ (ಸಹಜೀವನ) ಸಂಬಂಧಗಳಿಗೂ ಅನ್ವಯವಾಗುತ್ತದೆ’ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

‘ನನ್ನ ಎರಡನೇ ಪತ್ನಿ (ಅರ್ಜಿದಾರರು ಪ್ರತಿಪಾದಿಸಿರುವ ಸ್ವ–ಇಚ್ಛಾ ಸಹವಾಸದಲ್ಲಿದ್ದ) ನನ್ನ ವಿರುದ್ಧ ದಾಖಲಿಸಿರುವ ಕ್ರಿಮಿನಲ್ ಪ್ರಕರಣ ಮತ್ತು ಇದಕ್ಕೆ ಸಂಬಂಧಿಸಿದ ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲಿನ ನ್ಯಾಯಿಕ ಪ್ರಕ್ರಿಯೆ ರದ್ದುಪಡಿಸಬೇಕು’ ಎಂದು ಕೋರಿ 54 ವರ್ಷದ ಹೃದ್ರೋಗ ತಜ್ಞರೊಬ್ಬರು ಸಲ್ಲಿಸಿದ್ದ ಕ್ರಿಮಿನಲ್ ಮೇಲ್ಮನವಿ ತಿರಸ್ಕರಿಸಿರುವ ನ್ಯಾಯಮೂರ್ತಿ ಸೂರಜ್ ಗೋವಿಂದ ರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತ ಮಹತ್ವದ ಆದೇಶ ಪ್ರಕಟಿಸಿದೆ.

‘ಈ ಪ್ರಕರಣದಲ್ಲಿ ದೂರುದಾರ 49 ವರ್ಷದ ಮಹಿಳೆ ಮೇಲ್ಮನವಿದಾರರನ್ನು 2010ರ ಅಕ್ಟೋಬರ್ 17ರಂದು ಹಿಂದೂ ಧಾರ್ಮಿಕ ವಿಧಿ ವಿಧಾನಗಳ ಅನ್ವಯ ಮದುವೆಯಾಗಿದ್ದಾಗಿ ಹೇಳಿಕೊಂಡಿದ್ದಾರೆ. ಆದರೆ, ಮೇಲ್ಮನವಿದಾರ ಪತಿ ಇದನ್ನು ಅಲ್ಲಗಳೆದು ಲಿವ್–ಇನ್ ಸಂಬಂಧ ಹೊಂದಿದ್ದಾಗಿ ಪ್ರತಿಪಾದಿಸಿದ್ದಾರೆ. ಅಷ್ಟಕ್ಕೂ ಇಬ್ಬರೂ ಒಟ್ಟಾಗಿ ನೆಲಸಿ, ಸಹಬಾಳ್ವೆಯಿಂದ ನಡೆದುಕೊಂಡಿದ್ದಾರೆ. ಸಾಮಾಜಿಕವಾಗಿ ಪತಿ-ಪತ್ನಿ ಎಂದೇ ಗುರುತಿಸಿಕೊಂಡು ಜವಾಬ್ದಾರಿಗಳನ್ನು ನಿರ್ವಹಿಸಿರುವುದು ಸ್ಪಷ್ಟವಾಗಿದೆ’ ಎಂದು ನ್ಯಾಯಪೀಠ ತಿಳಿಸಿದೆ.

‘ಇವರಿಬ್ಬರ ಸಂಬಂಧ ಆರು ವರ್ಷಗಳ ನಂತರ ಪರಸ್ಪರ ಕಲಹಗಳ ಪರಿಣಾಮ ಹದಗೆಟ್ಟಿದೆ. ಮೇಲ್ಮನವಿದಾರ ವೈದ್ಯರು ಎರಡನೇ ಪತ್ನಿಗೆ ವರದಕ್ಷಿಣೆ ಕಿರುಕುಳ ನೀಡಿ ಆಕೆಯನ್ನು ಕೊಲೆ ಮಾಡಲು ಯತ್ನಿಸಿರುವ ಆರೋಪ ಎದುರಿಸುತ್ತಿದ್ದಾರೆ. ಹೀಗಾಗಿ, ಪತಿ-ಪತ್ನಿ ಹೊಂದಾಣಿಕೆಯನ್ನು ತೆರೆದಿಡುವ ಇಂತಹ ಸಂಬಂಧಗಳಲ್ಲೂ ಕ್ರೌರ್ಯ ಎಸಗಿರುವುದು ಸಾಬೀತಾದಲ್ಲಿ ಭಾರತೀಯ ದಂಡ ಸಂಹಿತೆ–1860ರ ಕಲಂ 498(ಎ) ಅಡಿ ಶಿಕ್ಷೆ ದೊರೆಯಲಿದೆ. ಈ ರೀತಿಯ ಆರೋಪ ಹೊತ್ತ ಪ್ರಕರಣಗಳಲ್ಲಿ ಕಾನೂನುಬದ್ಧ ಪತಿ-ಪತ್ನಿಯ ಸಂಬಂಧ ಹೊಂದಿರಲೇಬೇಕೆಂಬ ಅವಶ್ಯಕತೆ ಇಲ್ಲ’ ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

‘ಸಬೂಬು ನೀಡಿದರೆ ಆಗದು’

‘ಅರ್ಜಿದಾರರ ವಿರುದ್ಧದ ಆರೋಪದ ಸ್ವರೂಪವು ಕಲಂ 498 ‘ಎ’ ವ್ಯಾಪ್ತಿಗೆ ಒಳಪಡಲಿದೆ ಮತ್ತು ಈ ಪ್ರಕರಣದಲ್ಲಿನ ಕ್ರೌರ್ಯದ ಆರೋಪವನ್ನು ಅನೂರ್ಜಿತ ಮದುವೆ ಎಂಬ ಸಬೂಬಿನಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ’ ಎಂದು ನ್ಯಾಯಪೀಠ ತಿಳಿಸಿದೆ.

‘ಮೇಲ್ಮನವಿದಾರರು ದೂರುದಾರ ಮಹಿಳೆಯ ಕುಟುಂಬದಿಂದ ಹೇರಳ ಚಿನ್ನಾಭರಣ ಮತ್ತು ಹಣ ಪಡೆದುಕೊಂಡಿರುವ ಆರೋಪವೂ ಇದೆ. ಇದಕ್ಕಾಗಿ ದೂರುದಾರ ಮಹಿಳೆಗೆ ಮತ್ತಷ್ಟು ಹಣದ ಬೇಡಿಕೆಯಿಟ್ಟು ಕಿರುಕುಳ ನೀಡಿ ಹಿಂಸೆಗೆ ಒಳಪಡಿಸಲಾಗಿದೆ. ಈ ಅಂಶಗಳು ನ್ಯಾಯಪೀಠದ ಮುಂದಿರುವಾಗ ಮೇಲ್ಮನವಿದಾರ ದೂರುದಾರರನ್ನು ಕಾನೂನುಬದ್ಧವಾಗಿ ವಿವಾಹವಾಗಿಲ್ಲ ಎಂಬ ವಾದ ಅಂಗೀಕರಿಸಿದರೆ ಅದು ಅನ್ಯಾಯ ಮಾಡಿದಂತಾಗುತ್ತದೆ’ ಎಂದು ನ್ಯಾಯಪೀಠ ವಿವರಿಸಿದೆ.

‘ದುರಾಡಳಿತ ಅಂತ್ಯಕ್ಕೆ ಹೊಸ ಪಕ್ಷ’

ಪ್ರಜಾವಾಣಿ ವಾರ್ತೆ


ಕೋಡಿಹಳ್ಳಿ ಚಂದ್ರಶೇಖರ

ಬೆಂಗಳೂರು: ‘ರಾಜ್ಯವನ್ನು ರಾಷ್ಟ್ರೀಯ ಪಕ್ಷಗಳ ಲೂಟಿಕೋರ ದುರಾಡಳಿತದಿಂದ ವಿಮೋಚನೆಗೊಳಿಸುವ ಉದ್ದೇಶದಿಂದ ಹೊಸ ಪ್ರಾದೇಶಿಕ ಪಕ್ಷ ಸ್ಥಾಪಿಸಲಾಗಿದೆ’ ಎಂದು ನವ ಕರ್ನಾಟಕ ನಿರ್ಮಾಣ ಆಂದೋಲನ ಪಕ್ಷದ ಕಾರ್ಯಾಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ ತಿಳಿಸಿದರು.

ಕೇಂದ್ರದ ಮಾಜಿ ಸಚಿವ ಸಿ.ಎಂ. ಇಬ್ರಾಹಿಂ ಅವರ ನೇತೃತ್ವದಲ್ಲಿ ಸ್ಥಾಪನೆಯಾದ ಈ ಪಕ್ಷದ ಪದಾಧಿಕಾರಿಗಳ ಪಟ್ಟಿಯನ್ನು ನಗರದಲ್ಲಿ ಗುರುವಾರ ಅವರು ಬಿಡುಗಡೆ ಮಾಡಿದರು.

‘ಬಹುಸಂಖ್ಯಾತ ಕನ್ನಡಿಗರ ಅಪೇಕ್ಷೆಯಂತೆ ಚಳವಳಿಗಾರರೆಲ್ಲ ಒಟ್ಟಾಗಿ ಪ್ರಾದೇಶಿಕ ಪಕ್ಷ ಸ್ಥಾಪಿಸಿದ್ದೇವೆ. ರಾಜ್ಯದಲ್ಲಿ ಅಧಿಕಾರ ನಡೆಸಿದ, ನಡೆಸುತ್ತಿರುವ ಕಾಂಗ್ರೆಸ್ ಅಥವಾ ಬಿಜೆಪಿ ನೇತೃತ್ವದ ಸರ್ಕಾರಗಳ ಕೆಟ್ಟ ನೀತಿಗಳ ಪರಿಣಾಮವಾಗಿ ರೈತರು, ದಲಿತರು, ಕಾರ್ಮಿಕರು, ಮಹಿಳೆಯರು, ವಿದ್ಯಾರ್ಥಿ-ಯುವಜನರು ಸೇರಿ ಎಲ್ಲ ವರ್ಗಗಳ ಜನರು ಬೇಸತ್ತಿದ್ದಾರೆ’ ಎಂದರು.

‘ಪಕ್ಷದ ರಾಜ್ಯ ಉಪಾಧ್ಯಕ್ಷರಾಗಿ ಎನ್. ಮೂರ್ತಿ, ಆರ್. ಮೋಹನ್ ರಾಜ್, ಯೂನಸ್ ಖಾನ್, ಭಕ್ತರಹಳ್ಳಿ ಬೈರೇಗೌಡ, ಪಿ. ಮೂರ್ತಿ, ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ ಎಂ. ಗೋಪಿನಾಥ್, ರಾಜ್ಯ ಕಾರ್ಯದರ್ಶಿಗಳಾಗಿ ಕೆ.ಎಂ. ರಿಸಲ್ದಾರ್, ಶೆ.ಬೋ. ರಾಧಾಕೃಷ್ಣ ಅವರನ್ನು ಆಯ್ಕೆ ಮಾಡಲಾಗಿದೆ’ ಎಂದರು.

114 'ಆಯುಷ್ಮಾನ್ ಆರೋಗ್ಯ ಮಂದಿರ'

ಕಲಬೆರಕೆಯ ಔಷಧ ಮಾರಿದರೆ ಜೀವಾವಧಿ ಶಿಕ್ಷೆ; ಕಾಯ್ದೆಗೆ ತಿದ್ದುಪಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 15ನೇ ಹಣಕಾಸು ಆಯೋಗದ ಅನುದಾನದಲ್ಲಿ 2025-26ನೇ ಸಾಲಿನಲ್ಲಿ ರಾಜ್ಯದಾದ್ಯಂತ 114 'ಆಯುಷ್ಮಾನ್ ಆರೋಗ್ಯ ಮಂದಿರ'ಗಳ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ₹74.10 ಕೋಟಿ ಅಂದಾಜು ಮೊತ್ತದಲ್ಲಿ ಕೈಗೊಳ್ಳಲು ಸರ್ಕಾರ ನಿರ್ಧರಿಸಿದೆ.

ಸಚಿವ ಸಂಪುಟ ಸಭೆಯ ಬಳಿಕ ಮಾತನಾಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ, 'ಜನರಿಗೆ ಸಮಗ್ರ ಪ್ರಾಥಮಿಕ ಆರೋಗ್ಯ ಸೇವೆಗಳನ್ನು ನೀಡಲು ಈ ಆರೋಗ್ಯ ಮಂದಿರಗಳನ್ನು ನಿರ್ಮಿಸಲಾಗುತ್ತಿದೆ' ಎಂದರು.

'ಕೆಟಿಪಿಪಿ ಕಾಯ್ದೆ ಹಾಗೂ ನಿಯಮಗಳ ಅನುಸಾರ ಟೆಂಡರ್ ಆಹ್ವಾನಿಸಿ ಕಟ್ಟಡಗಳನ್ನು ನಿರ್ಮಿಸಲಾಗುವುದು. ಇಂತಹ ಮಂದಿರಗಳ ನಿರ್ಮಾಣ ಆಯುಷ್ಮಾನ್ ಭಾರತ ಯೋಜನೆಯ ಪ್ರಮುಖ ಅಂಶವಾಗಿದ್ದು, ಜನ ಕೇಂದ್ರಿತ ಚಿಕಿತ್ಸಾ ಸೌಲಭ್ಯ ಕಲ್ಪಿಸುವುದು ಉದ್ದೇಶ' ಎಂದರು.

'ಕಲಬೆರಕೆ ಔಷಧ ಅಥವಾ ಸೌಂದರ್ಯವರ್ಧಕವನ್ನು ಮಾರಾಟ ಮಾಡುವವರಿಗೆ ಜೀವಾವಧಿ ಶಿಕ್ಷೆ ವಿಧಿಸಲು ಅವಕಾಶ ಕಲ್ಪಿಸುವ 'ಔಷಧಗಳು ಮತ್ತು ಸೌಂದರ್ಯವರ್ಧಕಗಳು (ಕರ್ನಾಟಕ ತಿದ್ದುಪಡಿ) ಮಸೂದೆ-2025'ಗೆ ಅನುಮೋದನೆ ನೀಡಲಾಗಿದೆ. ಬೆಳಗಾವಿ ಅಧಿವೇಶನದಲ್ಲಿ ಈ ಮಸೂದೆಯನ್ನು ಮಂಡಿಸಲಾಗುವುದು' ಎಂದರು.

'ಕೇಂದ್ರದ ಔಷಧ ಪ್ರಯೋಗಾಲಯಗಳ ಮತ್ತು ಔಷಧ ಮತ್ತು ಸೌಂದರ್ಯವರ್ಧಕಗಳ ಇಲಾಖೆಯ ನಿರ್ದೇಶಕರ ಕೆಲಸ ಕಾರ್ಯಗಳನ್ನು ರಾಜ್ಯ ಸರ್ಕಾರ ನಿಗದಿಪಡಿಸಿದ ಪ್ರಾಧಿಕಾರ ನಿರ್ವಹಿಸಲು ಕೂಡಾ ಮಸೂದೆ ಅವಕಾಶ ಮಾಡಿಕೊಡಲಿದೆ. ಕಲಬೆರಕೆ ಔಷಧ ಮತ್ತು ಸೌಂದರ್ಯವರ್ಧಕ ಹೊಂದಿರುವ ಅಪರಾಧಗಳನ್ನು ಜಾಮೀನುರಹಿತ ಅಪರಾಧವೆಂದು ಪರಿಗಣಿಸುವ ಪ್ರಸ್ತಾವವೂ ಮಸೂದೆಯಲ್ಲಿದೆ' ಎಂದರು.

ಸಂಪುಟ ಸಭೆಯ ಇತರ ನಿರ್ಣಯಗಳು

- ಕಲ್ಯಾಣ ಕರ್ನಾಟಕ ಪ್ರದೇಶದ ಜಿಲ್ಲೆಗಳಲ್ಲಿ ಚೆಕ್-ಡ್ಯಾಂಗಳ ನಿರ್ಮಾಣ, ಕೆರೆ ಅಭಿವೃದ್ಧಿ ಕಾಮಗಾರಿಗಳನ್ನು ₹200 ಕೋಟಿಗಳ ಅಂದಾಜು ಮೊತ್ತದಲ್ಲಿ ಕೈಗೊಳ್ಳಲು ಒಪ್ಪಿಗೆ
- ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಕೆಲವು ನಗರ ಸ್ಥಳೀಯ ಸಂಸ್ಥೆಗಳನ್ನು ಮತ್ತು ಕೆಲವು ಗ್ರಾಮಗಳನ್ನು ಸೇರ್ಪಡೆಗೊಳಿಸಿ 'ಬೃಹತ್ ಮೈಸೂರು ಮಹಾನಗರ-ಪಾಲಿಕೆ'ಯಾಗಿ ಪರಿವರ್ತನೆ
- ರಾಣಿ ಚನ್ನಮ್ಮ ವಿಶ್ವವಿದ್ಯಾಲಯವನ್ನು 'ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ' ಎಂದು ಮರು ನಾಮಕರಣ ಮಾಡಲು 'ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ (ಎರಡನೇ ತಿದ್ದುಪಡಿ) ಮಸೂದೆ-2025'ಕ್ಕೆ ಒಪ್ಪಿಗೆ
- ಕರ್ನಾಟಕ 'ರಾಜ್ಯ ಹಜ್ ಸಮಿತಿ ನಿಯಮಾವಳಿ- 2025'ಕ್ಕೆ ಅನುಮೋದನೆ
- ಬೆಂಗಳೂರು ದಕ್ಷಿಣ ಜಿಲ್ಲೆಯ ಮಾಗಡಿ ತಾಲ್ಲೂಕಿನ ಕುದೂರು ಗ್ರಾಮದ ಸ.ನಂ.47ರಲ್ಲಿ 3-12 ಎಕರೆ ಜಮೀನನ್ನು ಬಸ್ ನಿಲ್ದಾಣ ಮತ್ತು ಬಸ್ ಡಿಪೋ ನಿರ್ಮಾಣಕ್ಕೆ ಕೆಎಸ್‌ಆರ್‌ಟಿಸಿಗೆ ಉಚಿತವಾಗಿ ಮಂಜೂರು
- ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ-ಭಟ್ಕಳ ವಿಧಾನಸಭಾ ಕ್ಷೇತ್ರದ ಮುಳ್ಕೊಡು ಗ್ರಾಮದ ಸಮೀಪ ಶರಾವತಿ ನದಿಗೆ ಅಡ್ಡಲಾಗಿ ಬ್ರಿಡ್ಜ್ ಕಂ ಬ್ಯಾರೇಜ್ (ಉಪ್ಪು ನೀರು ತಡೆ ಅಣೆಕಟ್ಟು) ₹200 ಕೋಟಿ ಅಂದಾಜು ಮೊತ್ತದಲ್ಲಿ ನಿರ್ಮಾಣ
- ಚಂದ್ರಗುತ್ತಿ ಶ್ರೀ ರೇಣುಕಾಂಬ ಅಭಿವೃದ್ಧಿ ಪ್ರಾಧಿಕಾರ ಮಸೂದೆ-2025ಕ್ಕೆ ಅನುಮೋದನೆ
- ಕೊಪ್ಪಳ ಜಿಲ್ಲೆಯ ಗಂಗಾವತಿ ನಗರದ ಹೊರವಲಯದಲ್ಲಿ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದಿಂದ ನೂತನ ಸ್ಯಾಟ್‌ಲೈಟ್ ಬಸ್ ನಿಲ್ದಾಣ ₹ 17.50 ಕೋಟಿ ಮೊತ್ತದಲ್ಲಿ ನಿರ್ಮಾಣ
- ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯು 1,000 ಚಾಲಕರ ನೇಮಕಾತಿಗೆ 2019ರಲ್ಲಿ ಹೊರಡಿಸಿದ್ದ ಪ್ರಕಟಣೆಯಂತೆ ನೇಮಕಾತಿ ಪ್ರಕ್ರಿಯೆ ನಡೆಸಲು ಒಪ್ಪಿಗೆ
- ಕಬಿನಿ ಎಡದಂಡೆ ನಾಲೆಯ ಡೀಪ್ ಕಟ್ ಭಾಗಕ್ಕೆ ಕಟ್ ಅಂಡ್ ಕವರ್ ಹಾಗೂ ಅಕ್ವೊಡೆಕ್ಟ್ ನಿರ್ಮಾಣ ಕಾಮಗಾರಿ ಮತ್ತು ಕಬಿನಿ ಎಡದಂಡೆ ನಾಲೆಯ ವಿತರಣಾ ಕಾಲುವೆ-1 ರಿಂದ 19ರವರೆಗಿನ ಅಭಿವೃದ್ಧಿ ಕಾಮಗಾರಿಗಳನ್ನು ₹ 50 ಕೋಟಿಯಲ್ಲಿ ಕೈಗೊಳ್ಳಲು ಸಹಮತಿ

ಗ್ರಾ.ಪಂಗಳಿಗೆ ಪಟ್ಟಣ ಪಂಚಾಯಿತಿ ಭಾಗ್ಯ

ಬೀದರ್ ಜಿಲ್ಲೆಯ ಕಮಠಾಣ, ಹುಲಸೂರು, ಮೈಸೂರು ಜಿಲ್ಲೆಯ ಸಾಲಿಗ್ರಾಮ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ತ್ಯಾಮಗೊಂಡ್ಲು, ಯಾದಗಿರಿ ಜಿಲ್ಲೆಯ ಸಗರ (ಬಿ), ವಡಗೇರಾ, ಬೆಳಗಾವಿ ಜಿಲ್ಲೆಯ ಅಂಕಲಿ, ಸುರೇಬಾನ, ಮನಿಹಾಳ, ಕಟಕೋಳ, ಉತ್ತರಕನ್ನಡ ಜಿಲ್ಲೆಯ ಮಾವಳ್ಳಿ-2 ಮತ್ತು ಮಾವಳ್ಳಿ-2 ಗ್ರಾಮ ಪಂಚಾಯಿತಿಗಳನ್ನು ಪಟ್ಟಣ ಪಂಚಾಯಿತಿಗಳಾಗಿ ಮೇಲ್ದರ್ಜೆಗೇರಿಸಲು ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಬೆಂಗಳೂರು ದಕ್ಷಿಣ ಜಿಲ್ಲೆಯ ಹಾರೋಹಳ್ಳಿ ಪಟ್ಟಣ ಪಂಚಾಯಿತಿಯನ್ನು ಪುರಸಭೆಯಾಗಿ ಹಾಗೂ ಬೆಳಗಾವಿ ಜಿಲ್ಲೆಯ ರಾಮದುರ್ಗ ಪುರಸಭೆಯನ್ನು ನಗರಸಭೆಯಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆಗೂ ಸಭೆ ಅನುಮೋದನೆ ನೀಡಿದೆ.

ಅದಿರು ಅಕ್ರಮ ರಫ್ತು ತಡೆಗೆ ನೀತಿ

ಬೆಂಗಳೂರು: ರಾಜ್ಯದ 13 ಕಿರು ಬಂದರುಗಳ ಮೂಲಕ ಕಬ್ಬಿಣದ ಅದಿರು ಅಕ್ರಮ ರಫ್ತು ತಡೆಯಲು 'ಕರ್ನಾಟಕ ಕಿರು ಬಂದರುಗಳಲ್ಲಿ ಕಬ್ಬಿಣದ ಅದಿರು ನಿರ್ವಹಣಾ ನೀತಿ-2025' ಎಂಬ ಪ್ರಮಾಣಿತ ಕಾರ್ಯನಿರ್ವಹಣಾ ವಿಧಾನ (ಎಸ್‌ಒಪಿ) ಜಾರಿ ತರಲು ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಗುರುವಾರ ನಡೆದ ಸಚಿವ ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ, 'ರಾಜ್ಯದಿಂದ ಅಕ್ರಮವಾಗಿ ಅದಿರುಗಳ ಸಾಗಣೆ ಮತ್ತು ರಫ್ತು ತಡೆಯಲು ರೂಪುರೇಷೆ ಸಿದ್ಧಪಡಿಸುವ ಉದ್ದೇಶದಿಂದ 10 ಸಣ್ಣ ಬಂದರುಗಳಿಂದ ಕಬ್ಬಿಣದ ಅದಿರು ರಫ್ತು ನಿಷೇಧಿಸಿ 2010ರ ಜುಲೈ 26ರಂದು ಸರ್ಕಾರ ಆದೇಶ ಹೊರಡಿಸಿತ್ತು. ಆದರೂ, ಕೇಂದ್ರ ಸರ್ಕಾರದ ನೀತಿಯನ್ನು ಕಟ್ಟುನಿಟ್ಟಾಗಿ ಪಾಲಿಸಿ ಈ ಬಂದರುಗಳಿಂದ ಕಬ್ಬಿಣದ ಅದಿರು ರಫ್ತು ಮಾಡಲು ಸುಪ್ರೀಂ ಕೋರ್ಟ್ 2022ರಲ್ಲಿ ಅನುಮತಿ ನೀಡಿತ್ತು. ಹೊಸ ನೀತಿ ಜಾರಿಗೆ ಬರಲಿರುವ ಕಾರಣ ಈ ಆದೇಶವನ್ನು ಹಿಂಪಡೆಯಲಾಗುವುದು' ಎಂದರು.

'ಅದಿರು ಅಕ್ರಮ ಸಾಗಣೆಗೆ ಸಂಬಂಧಿಸಿ ಹಲವು ಪ್ರಕರಣಗಳು ನ್ಯಾಯಾಲಯಗಳಲ್ಲಿ ಮತ್ತು ಲೋಕಾಯುಕ್ತದಲ್ಲಿ ವಿಚಾರಣೆ ಬಾಕಿಯಿದೆ. ಹೀಗಾಗಿ, ಹೊಸ ನೀತಿಯನ್ನು ಪೂರ್ವಾನ್ವಯವಾಗಿ ಜಾರಿಗೆ ತರಲು ಸಾಧ್ಯವಿಲ್ಲ. ಮುಂದಿನ ದಿನಗಳಲ್ಲಿ ಹೊಸ ನೀತಿ ಜಾರಿಗೆ ಬರಲಿದೆ' ಎಂದು ಅವರು ವಿವರಿಸಿದರು.

'ಕಾರವಾರ, ತದಡಿ, ಭಟ್ಕಳ, ಮಲ್ಪೆ, ಹಳೇ ಮಂಗಳೂರು, ಬೇಲೆಕೇರಿ, ಹೊನ್ನಾವರ, ಕುಂದಾಪುರ, ಹಂಗಾರಕಟ್ಟೆ ಮತ್ತು ಪಡುಬಿದ್ರಿ ಬಂದರುಗಳಿಂದ ಕಬ್ಬಿಣದ ಅದಿರು ರಫ್ತು ಮಾಡುವುದನ್ನು 2010ರ ಆದೇಶದಲ್ಲಿ ನಿಷೇಧಿಸಿತ್ತು. ರಾಜ್ಯದಲ್ಲಿ ಒಟ್ಟು 13 ಪ್ರಮುಖವಲ್ಲದ ಬಂದರುಗಳಿವೆ' ಎಂದರು.

'ಹೊಸ ನೀತಿಯಡಿ ನೋಂದಣಿ ಶುಲ್ಕ, ಕಬ್ಬಿಣದ ಅದಿರನ್ನು ನಿರ್ವಹಿಸಲು ಭೂಮಿ ಹಂಚಿಕೆಗಾಗಿ ಪರವಾನಗಿ ಶುಲ್ಕ, ಬಂದರಿನಲ್ಲಿ ಸರಕುಗಳ ಸಾಗಣೆ ಅಥವಾ ನಿರ್ವಹಣೆಯ ಸೇವೆಗಳಿಗೆ ವಿಧಿಸುವ ಶುಲ್ಕ, ಕನಿಷ್ಠ ಗ್ಯಾರಂಟಿ ಠೇವಣಿ, ಭದ್ರತಾ ಠೇವಣಿ, ನಿಯಮ ಪಾಲಿಸದಿದ್ದರೆ ದಂಡ ವಿಧಿಸಲಾಗುವುದು. ಮಾಲಿನ್ಯ ತಗ್ಗಿಸುವಿಕೆ, ಸುರಕ್ಷತೆ ಮತ್ತು ಮೇಲ್ವಿಚಾರಣೆ ಶುಲ್ಕದ ಮೂಲಕ ಸರ್ಕಾರಕ್ಕೆ ಪ್ರತಿ ಟನ್‌ಗೆ ₹ 130ರಷ್ಟು ಆದಾಯ ಬರಲಿದೆ' ಎಂದು ಸಚಿವರು ವಿವರಿಸಿದರು.

13 ಕಿರು ಬಂದರುಗಳು

ಕಾರವಾರ, ಹೊನ್ನಾವರ, ಮಲ್ಪೆ, ಬೇಲೆಕೇರಿ, ಮಂಕಿ, ಪಡುಬಿದ್ರಿ, ಕೆಣಿ, ಭಟ್ಕಳ, ಹಳೇ ಮಂಗಳೂರು, ತದಡಿ, ಕುಂದಾಪುರ, ಪಾವಿನಕುರ್ವೆ, ಹಂಗಾರಕಟ್ಟೆ

ಸುದ್ದಿ 2 ನಿಮಿಷ

'ಅತಿಥಿ' ನೇಮಕಾತಿ ಸ್ಥಗಿತಕ್ಕೆ ಬಸವರಾಜ ಹೊರಟ್ಟಿ ಪತ್ರ

ಬೆಂಗಳೂರು: ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರ ನೇಮಕಾತಿ ಪ್ರಕ್ರಿಯೆಯನ್ನು ತಕ್ಷಣ ಸ್ಥಗಿತಗೊಳಿಸುವಂತೆ ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ, ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಅವರಿಗೆ ಪತ್ರ ಬರೆದಿದ್ದಾರೆ.

ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ನಿಗದಿಪಡಿಸಿದ ವಿದ್ಯಾರ್ಹತೆಯ ಕಾರಣ ನೀಡಿ, ಎರಡು ದಶಕಗಳಿಂದ ಕೆಲಸ ಮಾಡಿದ ಅತಿಥಿ ಉಪನ್ಯಾಸಕರನ್ನು ಕೈಬಿಟ್ಟು, 2025-26ನೇ ಸಾಲಿನ ಎರಡು, ನಾಲ್ಕು ಹಾಗೂ ಆರನೇ ಸೆಮಿಸ್ಟರ್‌ಗಳಿಗೆ ನೇಮಕಾತಿ ಪ್ರಕ್ರಿಯೆ ನಡೆಸುತ್ತಿರುವುದು ಸರಿಯಲ್ಲ. ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರ ಸಂಘ ಹೋರಾಟದಿಂದ ಸರ್ಕಾರ ಈ ನಿರ್ಧಾರದಿಂದ 6,000ಕ್ಕೂ ಹೆಚ್ಚು ಅತಿಥಿ ಉಪನ್ಯಾಸಕರು ಕೆಲಸ ಕಳೆದುಕೊಂಡಿದ್ದಾರೆ. ಅವರಿಗೆ ಸೇವಾ ಭದ್ರತೆ ನೀಡಲು ಹೊಸ ಕಾನೂನು ರೂಪಿಸಬೇಕು.



ಗೌರವಯುತ ವೇತನ ನಡೆಸಲು ಅವಕಾಶ ಮಾಡಿಕೊಡಬೇಕು ಎಂದು ಸಲಹೆ ನೀಡಿದ್ದಾರೆ.

ಅಂಗವಿಕಲರ ಪ್ರಮಾಣಪತ್ರ ಸಲ್ಲಿಸಿದ ಎಲ್ಲರಿಗೂ ಪ್ರಥಮ ಪಟ್ಟಿ ನಲ್ಲೇ ಆಯ್ಕೆಗೆ ಅವಕಾಶ ನೀಡಿರುವ ಸೂಚನೆಯನ್ನು ಹಿಂದಕ್ಕೆ ಪಡೆಯಬೇಕು. ಯುಜಿಸಿ ಶೈಕ್ಷಣಿಕ ಅರ್ಹತೆ ಹೊರತುಪಡಿಸಿ, ಶೈಕ್ಷಣಿಕ, ಸೇವಾನುಭವ, ಅಂಗವಿಕಲರ ಕೃಪಾಂಕದ ಆಧಾರದ ಮೇಲೆ ನೇಮಕಾತಿ ಪ್ರಕ್ರಿಯೆ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ಪ್ರೊಬೇಷನರಿ ಪಿಎಸ್‌ಐ ಸೇವೆಯಿಂದ ವಜಾ

ದಾವಣಗೆರೆ: ಆಭರಣ ತಯಾರಕರೊಬ್ಬರಿಂದ 78 ಗ್ರಾಂ ಚಿನ್ನಾಭರಣ ದರೋಡೆ ಮಾಡಿದ ಆರೋಪ ಎದುರಿಸುತ್ತಿರುವ ಪ್ರೊಬೇಷನರಿ ಪಿಎಸ್‌ಐ ಮಾಳಪ್ಪ ಚಿಪ್ಪಲಕಟ್ಟಿ ಅವರನ್ನು ಸೇವೆಯಿಂದ ವಜಾಗೊಳಿಸಿ ಪೊಲೀಸ್ ಇಲಾಖೆ ಆದೇಶಿಸಿದೆ. ಮತ್ತೊಬ್ಬ ಪಿಎಸ್‌ಐ ಪ್ರವೀಣ್‌ಕುಮಾರ್ ಅವರನ್ನು ಸೇವೆಯಿಂದ ಅಮಾನತುಗೊಳಿಸಲಾಗಿದೆ.


ಮಾಳಪ್ಪ ಚಿಪ್ಪಲಕಟ್ಟಿ ಹಾವೇರಿ ಜಿಲ್ಲೆಯ ಹಂಸಬಾವಿ ಪೊಲೀಸ್ ಠಾಣೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಪ್ರವೀಣ್‌ಕುಮಾರ್ ರಾಣೆಬೆನ್ನೂರು ಸಂಚಾರ ಠಾಣೆಯಿಂದ ಶಿವಮೊಗ್ಗ ಜಿಲ್ಲೆಯ ಸಾಗರ ಠಾಣೆಗೆ ವರ್ಗಾವಣೆಗೊಂಡಿದ್ದರು.

'ಸಾರ್ವಜನಿಕರ ರಕ್ಷಣೆ ನೀಡುವ ಹಾಗೂ ನೊಂದವರಿಗೆ ನ್ಯಾಯ ಕೊಡಿಸುವಂತಹ ಬಹುಮುಖ್ಯ ಜವಾಬ್ದಾರಿಯುತ ಹುದ್ದೆಯಲ್ಲಿದ್ದುಕೊಂಡು ದರೋಡೆ ಕೃತ್ಯ ಎಸಗಿದ್ದು ಘೋರ ಅಪರಾಧ. ಮೊದಲ ಆರೋಪಿ ಮಾಳಪ್ಪ ಚಿಪ್ಪಲಕಟ್ಟಿ ಅವರನ್ನು ಸೇವೆಯಿಂದ ವಜಾಗೊಳಿಸಲಾಗಿದೆ. ಪ್ರವೀಣ್‌ಕುಮಾರ್ ಅವರನ್ನು ಅಮಾನತುಗೊಳಿಸಲಾಗಿದೆ' ಎಂದು ಪೂರ್ವ ವಲಯದ ಐಜಿಪಿ ಬಿ.ಆರ್. ರವಿಕಾಂತೇಗೌಡ ಆದೇಶದಲ್ಲಿ ತಿಳಿಸಿದ್ದಾರೆ.

ನ.24ರಂದು ನಸುಕಿನಲ್ಲಿ ಕಾರವಾರದ ಆಭರಣ ತಯಾರಕ ವಿಶ್ವನಾಥ್ ಅರ್ಕಸಾಲಿ ಅವರಿಂದ ₹ 7.5 ಲಕ್ಷ ಮೌಲ್ಯದ ಚಿನ್ನಾಭರಣವನ್ನು ದರೋಡೆ ಮಾಡಿದ್ದರು. ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರು ಪಿಎಸ್‌ಐ ಸೇರಿ 7 ಆರೋಪಿಗಳನ್ನು ಕೆಟಿಜೆ ನಗರ ಠಾಣೆಯ ಪೊಲೀಸರು ನ.25ರಂದು ಬಂಧಿಸಿದ್ದರು.

ಪ್ರಾಥಮಿಕ ತನಿಖೆ ಆಧರಿಸಿ ಪಿಎಸ್‌ಐಗಳ ವಿರುದ್ಧ ಶಿಸ್ತು ಕ್ರಮಕ್ಕೆ ಶಿಫಾರಸು ಮಾಡಲಾಗಿತ್ತು. ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ ಡಿಜಿಪಿ ಎಂ.ಎ. ಸಲೀಂ ತನಿಖೆಯನ್ನು 30 ದಿನಗಳ ಒಳಗೆ ಪೂರ್ಣಗೊಳಿಸಲು ಸೂಚನೆ ನೀಡಿದ್ದಾರೆ.

'ಬೆಲಗಮ್ ಮಹಾರಾಷ್ಟ್ರ': ಕ್ಷಮೆ ಕೇಳಿದ ಸಂಸ್ಥೆ



ಜಾಹೀರಾತಿನಲ್ಲಿ 'ಬೆಳಗಾವಿ ಮಹಾರಾಷ್ಟ್ರ' ಎಂದು ಬರೆಯಲಾಗಿದೆ

ಬೆಳಗಾವಿ: ನಗರದಲ್ಲಿ ಡಿ.5ರಂದು ಗಾಯಕ ಮಹೇಶ ಕಾಳೆ ಅವರ ಕಾರ್ಯಕ್ರಮ ಆಯೋಜಿಸಿರುವ ಮಹಾರಾಷ್ಟ್ರದ ಏಕದಂತ ರಂಗಭೂಮಿ ಸಂಸ್ಥೆ, ಸಾಮಾಜಿಕ ಮಾಧ್ಯಮದಲ್ಲಿ ಹಾಕಿರುವ ಜಾಹೀರಾತಿನಲ್ಲಿ 'ಬೆಲಗಮ್ ಮಹಾರಾಷ್ಟ್ರ' ಎಂದು ಬರೆದಿರುವುದಕ್ಕೆ ಗಡಿ ಕನ್ನಡಿಗರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಇದರಿಂದ ಎಚ್ಚೆತ್ತುಕೊಂಡ ಸಂಸ್ಥೆ ಕ್ಷಮೆಯಾಚಿಸಿ ಮತ್ತೊಂದು ಪೋಸ್ಟ್ ಹಾಕಿದೆ.

'ತಪ್ಪು ತಿದ್ದಿಕೊಳ್ಳದಿದ್ದರೆ ಹೋರಾಟ ಮಾಡಬೇಕಾಗುತ್ತದೆ' ಎಂದು ಜಿಲ್ಲಾ ಕನ್ನಡ ಸಂಘಟನೆಗಳ ಕ್ರಿಯಾ ಸಮಿತಿ ಅಧ್ಯಕ್ಷ ಅಶೋಕ ಚಂದರಗಿ ಹಾಗೂ ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾ ಘಟಕದ ಅಧ್ಯಕ್ಷ ದೀಪಕ ಗುಡಗನಟ್ಟಿ ಎಚ್ಚರಿಸಿದರು. ಈ ಸುದ್ದಿ ಸಾಮಾಜಿಕ ಜಾಲತಾಣಗಳಲ್ಲಿ ಹರಡುತ್ತಿದ್ದಂತೆಯೇ ಸಂಸ್ಥೆಯವರು ಎಚ್ಚೆತ್ತುಕೊಂಡರು.

'ಉದ್ದೇಶ ಪೂರ್ವಕ ತಪ್ಪು ಮಾಡಿಲ್ಲ. ಪ್ರಚಾರಕ್ಕಾಗಿ ಇನ್‌ಸ್ಟಾಗ್ರಾಮ್ ಮತ್ತು ಫೇಸ್‌ಬುಕ್ ಖಾತೆಯಲ್ಲಿ 'ಮಹಾರಾಷ್ಟ್ರ' ಎಂಬ ಪದವನ್ನು ಹ್ಯಾಶ್‌ಟ್ಯಾಗ್ ಆಗಿ ಸೇರಿಸಿದ್ದೇವೆಯೇ ಹೊರತು, ಬೆಳಗಾವಿಯ ಭೌಗೋಳಿಕ ವ್ಯಾಪ್ತಿ ಸೂಚಿಸಲು ಅಲ್ಲ. ಈ ಬೆಳವಣಿಗೆಗೆ ನಾವು ವಿಷಾದಿಸುತ್ತೇವೆ' ಎಂದು ಸಂಸ್ಥೆಯವರು ಪೋಸ್ಟ್ ಹಂಚಿಕೊಂಡಿದ್ದಾರೆ.

ಜೀವನದಲ್ಲಿ ಏರಿಳಿತಗಳಿರಬೇಕು..!

ಶಾಸಕ ಸೈಲ್ ಪ್ರಕರಣ: ಸಿಬಿಐಗೆ ಕುಟುಕಿದ ನ್ಯಾಯಮೂರ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾನೂನಿನ ಮುದ್ರಿತ ಅಕ್ಷರಗಳು ಸಾಂವಿಧಾನಿಕ ತಿದ್ದುಪಡಿ ಪಡೆಯುವತನಕ ಅವು ಹೇಗಿರುತ್ತವೆಯೊ ಹಾಗೆಯೇ ಇರುತ್ತವೆಯಾದರೂ, ಅವುಗಳನ್ನು ಉಚ್ಚರಿಸುವ ಭಾವ ಮತ್ತು ಬಗೆ ಒಬ್ಬರಿಂದ ಮತ್ತೊಬ್ಬರಿಗೆ ಭಿನ್ನವಾಗಿರುತ್ತದೆ. ಇದು ಜೀವನದಲ್ಲಿ ಏರಿಳಿತಗಳಿರಬೇಕು ಎಂಬುದರ ಸಾತ್ವಿಕ ಪ್ರತೀಕ...!

ಬೇಲೆಕೇರಿ ಬಂದರಿನಿಂದ ಅಕ್ರಮವಾಗಿ ಅದಿರು ಸಾಗಣೆ ಮತ್ತು ಮಾರಾಟಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಅಪರಾಧಿಗಳಾದ ಕಾಂಗ್ರೆಸ್ ಶಾಸಕ ಸತೀಶ್ ಸೈಲ್ ಸೇರಿದಂತೆ ಇತರರು ಸಲ್ಲಿಸಿರುವ ಕ್ರಿಮಿನಲ್ ಮೇಲ್ಮನವಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಮೇಲ್ಮನವಿದಾರ ಮಹೇಶ್ ಜೆ.ಬಿಳಿಯೆ (ಪ್ರಕರಣ ದಾಖಲಾಗಿದ್ದ ಸಮಯದಲ್ಲಿ ಪೋರ್ಟ್ ಕನ್ಸರ್ವೇಟರ್ ಆಗಿದ್ದರು) ಪರ ವಾದ ಮಂಡಿಸಿದ ಹೈಕೋರ್ಟ್ ಹಿರಿಯ ವಕೀಲ ನಾಗೇಂದ್ರ ನಾಯಕ್ ಅವರು ಶಾಸಕ ಸತೀಶ್ ಸೈಲ್ ಪರ ವಾದ ಮಂಡಿಸಿದ ಪದಾಂಕಿತ ಹಿರಿಯ ವಕೀಲ ಸಿ.ವಿ. ನಾಗೇಶ್ ಅವರ ವಾದಾಂಶಗಳನ್ನು ಅನುಮೋದಿಸಿದರು.

'ಜನಪ್ರತಿನಿಧಿಗಳ ಸೆಷನ್ಸ್ ನ್ಯಾಯಾಲಯ ಮೇಲ್ಮನವಿದಾರರನ್ನು ಉಳಿದ ಆರೋಪಿಗಳಿಂದ ಪ್ರತ್ಯೇಕಿಸಿ ವಿಚಾರಣೆ ನಡೆಸಿದೆ. ವಾಸ್ತವದಲ್ಲಿ ಎಲ್ಲರ ಜಂಟಿ ವಿಚಾರಣೆ ಆಗಬೇಕಿತ್ತು' ಎಂಬ ತಾಂತ್ರಿಕ ಅಂಶವನ್ನು ಉಲ್ಲೇಖಿಸಿ ವಾದ ಮಂಡಿಸಿದರು.

ಇದಕ್ಕೆ ಪ್ರತಿಯಾಗಿ ಸಿಬಿಐ ಪರ ವಕೀಲ ಪಿ.ಪ್ರಸನ್ನ ಕುಮಾರ್, 'ಜಂಟಿ ವಿಚಾರಣೆ ಅಗತ್ಯವಿಲ್ಲ ಎಂಬುದು ಸ್ಥಾಪಿತ ಕಾನೂನು. ಹಿರಿಯ ವಕೀಲರು ಹೇಳುತ್ತಿರುವುದನ್ನು ನೋಡಿದರೆ ಆಲಿ ಬಾಬಾ ಮತ್ತು ನಲವತ್ತು ಕಳ್ಳರ ಕಥೆಯನ್ನು ನೆನಪಿಗೆ ತರುತ್ತಿದೆ. ಎಷ್ಟೇ ಭಿನ್ನ ಅಥವಾ ಎತ್ತರದ ದನಿಯಲ್ಲಿ ಕಾನೂನನ್ನು ವಿಶ್ಲೇಷಿಸಿದರೂ ಅರ್ಥ ಒಂದೇ ಆಗಿರುತ್ತದೆ. ಅದು ಬದಲಾಗುವುದಿಲ್ಲ' ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಮೂರ್ತಿಯವರು, 'ಜೀವನದಲ್ಲಿ ಏರಿಳಿತಗಳಿರಬೇಕು' ಎಂದು ಸಿಬಿಐ ಅನ್ನು ಕುಟುಕಿದರಲ್ಲದೆ ಅಂತಿಮ ಆದೇಶವನ್ನು ಕಾಯ್ದಿರಿಸಿದರು. ಪ್ರಕರಣದಲ್ಲಿ ಆರು ಜನರಿಗೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ವಿಧಿಸಿದ್ದ ಕಠಿಣ ಜೈಲು ಶಿಕ್ಷೆಯನ್ನು ಹೈಕೋರ್ಟ್ ಈಗಾಗಲೇ ಅಮಾನತ್ತಿನಲ್ಲಿ ಇರಿಸಿದೆ. ಸೈಲ್ ಪರ ಹೈಕೋರ್ಟ್ ವಕೀಲ ಎಸ್.ಸುನಿಲ್ ಕುಮಾರ್ ವಕಾಲತ್ತು ವಹಿಸಿದ್ದಾರೆ.

ಸೂರ್ಯಾಸ್ತ...

ಪ್ರಜಾವಾಣಿ ಚಿತ್ರ: ಬಿ.ಎಂ.ಕೇದಾರನಾಥ



ಧಾರವಾಡ ತಾಲ್ಲೂಕಿನ ಕರಡಿಗುಡ್ಡ ಗ್ರಾಮದ ಮಲ್ಲಿಕಾರ್ಜುನ (ಗುಡ್ಡದ ಮಲ್ಲಯ್ಯ) ದೇವಸ್ಥಾನ ಬಳಿ ಗುರುವಾರ ಸಂಜೆ ಸೂರ್ಯಾಸ್ತದ ಸೊಬಗು ಕಂಡಿದ್ದು ಹೀಗೆ.

'ಸರ್ಕಾರದ ವಿರುದ್ಧ ಅವಿಶ್ವಾಸ ಗೊತ್ತುವಳಿ ಮಂಡಿಸುತ್ತೇವೆ'

ಪ್ರಜಾವಾಣಿ ವಾರ್ತೆ



ವಿ. ಸುನಿಲ್ ಕುಮಾರ್

ಉಡುಪಿ: 'ರಾಜ್ಯ ಸರ್ಕಾರ ಸಂಪೂರ್ಣವಾಗಿ ವಿಶ್ವಾಸ ಕಳೆದುಕೊಂಡಿದ್ದು, ಮುಖ್ಯಮಂತ್ರಿಗೆ ಉಪಮುಖ್ಯಮಂತ್ರಿ ಮೇಲೆ, ಉಪಮುಖ್ಯಮಂತ್ರಿಗೆ ಮುಖ್ಯಮಂತ್ರಿ ಮೇಲೆ ವಿಶ್ವಾಸವಿಲ್ಲ. ಈ ಕಾರಣಕ್ಕೆ ಬೆಳಗಾವಿ ಅಧಿವೇಶನದಲ್ಲಿ ಅವಿಶ್ವಾಸ ಗೊತ್ತುವಳಿ ಮಂಡಿಸುತ್ತೇವೆ' ಎಂದು ಕಾರ್ಕಳ ಶಾಸಕ ವಿ. ಸುನಿಲ್ ಕುಮಾರ್ ಹೇಳಿದರು.

ಸುದ್ದಿಗಾರರ ಜೊತೆ ಇಲ್ಲಿ ಗುರುವಾರ ಮಾತನಾಡಿದ ಅವರು, 'ರಾಜ್ಯದಲ್ಲಿ ಎರಡು ತಿಂಗಳಿಂದ ಆಡಳಿತ ಇಲ್ಲದ ಪರಿಸ್ಥಿತಿ ನಿರ್ಮಾಣವಾಗಿದೆ. ಶಾಸನ ಇಲ್ಲದ ದುಶ್ಯಾಸನರ ಆಡಳಿತ ರಾಜ್ಯದಲ್ಲಿದೆ' ಎಂದರು.

> ರಾಜ್ಯದಲ್ಲಿ ರಾಜಕೀಯ ಅಸ್ಥಿರತೆ ಎದುರಾದರೆ ಚುನಾವಣೆಗೆ ಹೋಗುತ್ತೇವೆ ಹೊರತು, ಡಿ.ಕೆ. ಶಿವಕುಮಾರ ಜೊತೆ ಸೇರಿ ಸರ್ಕಾರ ರಚಿಸಲ್ಲ
>
> **ಗೋವಿಂದ ಕಾರಜೋಳ**
> ಸಂಸದ

'ಶೇಕಡ 90 ರಷ್ಟು ಸಚಿವರು ವಿಧಾನಸೌಧಕ್ಕೆ ಬರುತ್ತಿಲ್ಲ. ಮುಖ್ಯಮಂತ್ರಿ ಮೈಸೂರಿಗೆ ಸೀಮಿತರಾದರೆ, ಉಪಮುಖ್ಯಮಂತ್ರಿ ದೆಹಲಿಗೆ ಸೀಮಿತರಾಗಿದ್ದಾರೆ. ರೈತರ, ಕಾರ್ಮಿಕರ ಸಮಸ್ಯೆ ಕೇಳುವವರಿಲ್ಲ. ಸರ್ಕಾರಿ ನೌಕರರಿಗೆ ಸಂಬಳವಿಲ್ಲ' ಎಂದು ಆರೋಪಿಸಿದರು.

'ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಕಡೆಗಣಿಸಲಾಗಿದೆ. ಅವರೇ ಹೈಕಮಾಂಡ್ ನೋಡಿಕೊಳ್ಳುತ್ತದೆ ಎನ್ನುತ್ತಿದ್ದಾರೆ' ಎಂದರು.

ಸಿದ್ದರಾಮಯ್ಯ ಬದಲಿಸಲು ಕಾರಣಗಳಿಲ್ಲ: ಯತೀಂದ್ರ

ಪ್ರಜಾವಾಣಿ ವಾರ್ತೆ



ಡಾ.ಯತೀಂದ್ರ ಸಿದ್ದರಾಮಯ್ಯ

ಮೈಸೂರು: 'ಸಿದ್ದರಾಮಯ್ಯ ಅವರೇ ಪೂರ್ಣಾವಧಿಗೆ ಮುಖ್ಯಮಂತ್ರಿ ಆಗಿರುತ್ತಾರೆ. ಅವರನ್ನು ಅಧಿಕಾರದಿಂದ ಕೆಳಗಿಳಿಸಲು ಯಾವ ಕಾರಣಗಳೂ ಇಲ್ಲ' ಎಂದು ಅವರ ಪುತ್ರ, ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಹೇಳಿದರು.

ಇಲ್ಲಿ ಗುರುವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, 'ಸಿದ್ದರಾಮಯ್ಯ ಅವರ ಮೇಲೆ ಯಾವ ಆರೋಪವೂ ಇಲ್ಲ. ಹೀಗಿರುವಾಗ ನಾಯಕತ್ವ ಬದಲಾವಣೆ ಚರ್ಚೆಯೇ ಬರಬಾರದಿತ್ತು. ಆದರೂ ಕೆಲವರು ಬದಲಾವಣೆ ಬಗ್ಗೆ ಮಾತನಾಡುತ್ತಿದ್ದಾರೆ' ಎಂದರು.

'ಮುಖ್ಯಮಂತ್ರಿ ಬದಲಾವಣೆ ಮಾಡುತ್ತೇವೆ ಎಂದು ಹೈಕಮಾಂಡ್ ಒಮ್ಮೆಯೂ ಹೇಳಿಲ್ಲ. ಆದರೂ ಹೈಕಮಾಂಡ್ ತೀರ್ಮಾನವೇ ಅಂತಿಮ. ಉಳಿದ ಎರಡೂವರೆ ವರ್ಷವೂ ತಂದೆಯವರೇ ಮುಖ್ಯಮಂತ್ರಿ ಆಗಿರುತ್ತಾರೆ ಎಂಬ ವಿಶ್ವಾಸ ನನಗಿದೆ' ಎಂದು ಹೇಳಿದರು.

'ನನಗಿರುವ ಮಾಹಿತಿ ಪ್ರಕಾರ, ಅಧಿಕಾರ ಹಂಚಿಕೆಯ ಸೂತ್ರವೇ ರಚನೆಯಾಗಿಲ್ಲ. ಸಿದ್ದರಾಮಯ್ಯ ಅವರಾಗಲಿ, ಕೆಲ ಹಿರಿಯ ಸಚಿವರಾಗಲಿ ಆ ಬಗ್ಗೆ ಯಾವತ್ತೂ ಈ ಬಗ್ಗೆ ಮಾತನಾಡಿಯೇ ಇಲ್ಲ. ಅಂದರೆ ಅಧಿಕಾರ ಹಂಚಿಕೆಯ ಮಾತುಕತೆ ನಡೆದಿಲ್ಲವೆಂದೇ ಅರ್ಥ ತಾನೆ?' ಎಂದರು.

'ಯಾರಿಗೆ ಎಷ್ಟು ಶಾಸಕರ ಬೆಂಬಲವಿದೆ ಎನ್ನುವ ಚರ್ಚೆ ಬೇಡ. ಅದು ನಮ್ಮ ಪಕ್ಷದ ಆಂತರಿಕ ವಿಚಾರ. ಎಲ್ಲಾ ಶಾಸಕರ ಬೆಂಬಲ ಸಿದ್ದರಾಮಯ್ಯ ಅವರಿಗಿದೆ' ಎಂದು ಹೇಳಿದರು.

'ಡಿ.ಕೆ. ಶಿವಕುಮಾರ್ ಅವರನ್ನು ಸಿಎಂ ಮಾಡಬೇಕು' ಎಂಬ ಆದಿಚುಂಚನಗಿರಿ ಪೀಠಾಧ್ಯಕ್ಷ ನಿರ್ಮಲಾನಂದನಾಥ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಯತೀಂದ್ರ, 'ಯಾರನ್ನು ಸಿಎಂ ಮಾಡಬೇಕು, ಮಾಡಬಾರದು ಎಂಬುದು ನಮ್ಮ ಪಕ್ಷದ ಆಂತರಿಕ ವಿಚಾರ. ಅದು ನಮ್ಮ ಶಾಸಕರು ಮತ್ತು ಹೈಕಮಾಂಡ್‌ಗೆ ಬಿಟ್ಟಿದ್ದು. ಆ ಬಗ್ಗೆ ಬೇರೆಯವರ ಅಭಿಪ್ರಾಯ ಅನಗತ್ಯ' ಎಂದರು.

ಗದ್ದುಗೆ ತಿಕ್ಕಾಟ: ಸಂಪುಟ ಸಭೆಯಲ್ಲಿ ಪ್ರಸ್ತಾಪ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನಡುವೆ ನಾಯಕತ್ವಕ್ಕಾಗಿ ನಡೆಯುತ್ತಿರುವ ತಿಕ್ಕಾಟದ ವಿಷಯ ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿಯೂ ಪ್ರಸ್ತಾಪವಾಗಿದೆ.

ಗೊಂದಲ ನಿವಾರಿಸುವಂತೆ ಗೃಹ ಸಚಿವ ಜಿ. ಪರಮೇಶ್ವರ, ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ, ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಮತ್ತು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ ಸೇರಿದಂತೆ ಕೆಲವು ಹಿರಿಯ ಸಚಿವರ ತಂಡ ಕಾಂಗ್ರೆಸ್ ಹೈಕಮಾಂಡ್ ನಾಯಕರನ್ನು ಭೇಟಿ ಮಾಡುವ ಬಗ್ಗೆ ಸಭೆಯಲ್ಲಿ ಚರ್ಚೆಯಾಗಿದೆ.

ಸಚಿವ ಸಂಪುಟ ಸಭೆಯಲ್ಲಿ ವಿಷಯ ಪ್ರಸ್ತಾಪಿಸಿ ಅಸಮಾಧಾನ ವ್ಯಕ್ತಪಡಿಸಿದ ಗೃಹ ಸಚಿವ ಜಿ. ಪರಮೇಶ್ವರ, 'ಕೆಲವು ಸಚಿವರು, ಶಾಸಕರು ಹೈಕಮಾಂಡ್ ನಾಯಕರನ್ನು ಭೇಟಿ ಮಾಡಲು ದೆಹಲಿಗೆ ಹೋಗುತ್ತಿದ್ದಾರೆ. ಹೊರಗಡೆ ಏನೇನೊ ಆಗುತ್ತಿದೆ. ಮಾಧ್ಯಮದವರು ನಮ್ಮನ್ನು ಪ್ರಶ್ನೆ ಮಾಡುತ್ತಿದ್ದಾರೆ. ನಾವು ಅದಕ್ಕೆ ಉತ್ತರಿಸಬೇಕಾಗಿದೆ. ಈ ವಿಷಯದ ಬಗ್ಗೆ ಸ್ಪಷ್ಟತೆ ಬೇಕಿದೆ. ಇದು ಸಂಪುಟಕ್ಕೆ ಸಂಬಂಧಿಸಿದ ವಿಷಯ ಅಲ್ಲವೇ ಎಂದು ನೇರವಾಗಿ ಪ್ರಶ್ನಿಸಿದ್ದಾರೆ' ಎಂದು ಗೊತ್ತಾಗಿದೆ.

'ಈ ವಿಚಾರದಲ್ಲಿ ಸಚಿವ ಸಂಪುಟವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ನಾವು ಹಿರಿಯ ಸಚಿವರು ಹೈಕಮಾಂಡ್ ನಾಯಕರನ್ನು ಭೇಟಿ ಆಗಬಹುದಲ್ಲವೇ ಎಂದೂ ಕೇಳಿದ್ದಾರೆ. ಆಗ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಹೌದು ಖರ್ಗೆಯವರು ದೂರವಾಣಿ ಕರೆ ಮಾಡಿದ್ದರು. ನಾಲ್ಕೈದು ಮಂದಿ ಹಿರಿಯರನ್ನು ಕರೆದುಕೊಂಡು ಬನ್ನಿ. ಚರ್ಚೆ ಮಾಡೋಣ ಎಂದು ಖರ್ಗೆ ಹೇಳಿದ್ದಾರೆ. ಅದಕ್ಕೆ ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್, ಇದೇನು ದೊಡ್ಡ ವಿಷಯ ಅಲ್ಲ. ನಾನೇ ದೆಹಲಿಗೆ ಎಲ್ಲರನ್ನೂ ಕರೆದುಕೊಂಡು ಹೋಗುತ್ತೇನೆ ಎಂದಿದ್ದಾರೆ ಎಂದು' ಮೂಲಗಳು ಹೇಳಿವೆ.

> ಕೊಟ್ಟ ಮಾತಿನ ಬಗ್ಗೆ ದೆಹಲಿ ಅಥವಾ ಬೆಂಗಳೂರಿನಲ್ಲಿ ಕೇಳಿದರೆ, ಉತ್ತರ ಸಿಗಬಹುದು. ಹಾವೇರಿಯಲ್ಲಿ ಕೇಳಿದರೆ ಸಿಗುವುದಿಲ್ಲ
>
> **ಸತೀಶ ಜಾರಕಿಹೊಳಿ**
> ಲೋಕೋಪಯೋಗಿ ಸಚಿವ

> ಮುಖ್ಯಮಂತ್ರಿ ಸ್ಥಾನ ಸೇರಿ ಯಾವುದೇ ವಿಷಯವಿದ್ದರೂ ನಮ್ಮ ನಾಯಕರು ನಿರ್ಧರಿಸುವರು. ಈ ವಿಷಯಗಳಲ್ಲಿ ಸ್ವಾಮೀಜಿಗಳು ಹೇಳಿಕೆ ನೀಡಬಾರದು. ಅವರು ರಾಜಕಾರಣದಿಂದ ದೂರವಿರಬೇಕು
>
> **ಶಿವಾನಂದ ಪಾಟೀಲ,** ಜವಳಿ ಸಚಿವ

ಪುಸ್ತಕೋದ್ಯಮ ಸಮಸ್ಯೆ ನಿವಾರಣೆಗೆ 20 ದಿನಗಳ ಗಡುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈಗಾಗಲೇ ಖರೀದಿಸಿದ ಪುಸ್ತಕಗಳ ಬಾಕಿ ಹಣ ಬಿಡುಗಡೆ, ಪುಟವಾರು ದರ ಪರಿಷ್ಕರಣೆ ಸೇರಿ ಪುಸ್ತಕೋದ್ಯಮಕ್ಕೆ ಸಂಬಂಧಿಸಿದ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ಕರ್ನಾಟಕ ರಾಜ್ಯ ಲೇಖಕ–ಪ್ರಕಾಶಕ–ಮುದ್ರಕರ ಒಕ್ಕೂಟವು 20 ದಿನಗಳ ಗಡುವು ನೀಡಿದೆ.

ಗುರುವಾರ ಇಲ್ಲಿ ಒಕ್ಕೂಟದ ಪ್ರತಿನಿಧಿಗಳ ಜತೆಗೆ ಸಭೆ ನಡೆಸಿದ ಇಲಾಖೆ ಆಯುಕ್ತ ಬಸವರಾಜೇಂದ್ರ, ಪುಸ್ತಕೋದ್ಯಮದ ಸಮಸ್ಯೆಗಳನ್ನು ಆಲಿಸಿದರು.

'ಈಗ ತುರ್ತಾಗಿ 2022ರ ಪುಸ್ತಕ ಆಯ್ಕೆ ಪಟ್ಟಿ ಮತ್ತು 2021ರಲ್ಲಿ ಖರೀದಿಸಿದ ಪುಸ್ತಕಗಳ ಬಾಕಿ ಹಣವನ್ನು ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುವುದು. ಕನ್ನಡ ಪುಸ್ತಕಗಳ ಪುಟವಾರು ಬೆಲೆ ಏರಿಕೆ ಮತ್ತು ಖರೀದಿಗೆ ಸಂಬಂಧಿಸಿದಂತೆ ಇಲಾಖೆ ಸಚಿವರ ಅಧ್ಯಕ್ಷತೆಯಲ್ಲಿ ಪ್ರಕಾಶಕರ, ಮುದ್ರಕರ ಮತ್ತು ಹಣಕಾಸು ಅಧಿಕಾರಿಗಳ ಸಭೆ ಕರೆದು, ಶೀಘ್ರದಲ್ಲಿಯೇ ತೀರ್ಮಾನಿಸಲಾಗುವುದು' ಎಂದು ಆಯುಕ್ತರು ಭರವಸೆ ನೀಡಿದರು.

'ರಾಜ್ಯ ಗ್ರಂಥಾಲಯ ಪ್ರಾಧಿಕಾರಕ್ಕೆ ನಗರ ಕೇಂದ್ರ ಗ್ರಂಥಾಲಯಗಳು ನೀಡುತ್ತಿರುವ ಅಭಿವೃದ್ಧಿ ಶುಲ್ಕವನ್ನು ಶೇ 5ರಿಂದ ಶೇ 10ಕ್ಕೆ ಏರಿಸಬೇಕು. ಆ ಹಣದಿಂದಲೇ ಏಕಗವಾಕ್ಷಿ ಸಗಟು ಪುಸ್ತಕ ಖರೀದಿ ಪ್ರಕ್ರಿಯೆ ನಡೆಸಬಹುದು' ಎಂದು ಒಕ್ಕೂಟದ ಪ್ರತಿನಿಧಿಗಳು ಸಲಹೆ ನೀಡಿದರು.

ಈ ಬಗ್ಗೆ ಸಕಾರಾತ್ಮಕವಾಗಿ ಸ್ಪಂದಿಸಿದ ಬಸವರಾಜೇಂದ್ರ, 'ಈಗಾಗಲೇ ಸರ್ಕಾರಕ್ಕೆ ಈ ಬಗ್ಗೆ ಅನುಮತಿಗಾಗಿ ಪತ್ರ ಬರೆಯಲಾಗಿದೆ. ಎಲ್ಲ ಸಮಸ್ಯೆಗಳಿಗೂ ಡಿ.20ರೊಳಗೆ ಪರಿಹಾರ ಒದಗಿಸಿ, ಪುಸ್ತಕೋದ್ಯಮದ ಸಮಗ್ರ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗುವುದು' ಎಂದರು.

ಆಯುಕ್ತರ ಈ ಭರವಸೆಯಿಂದ ಹೋರಾಟವನ್ನು ತಾತ್ಕಾಲಿಕವಾಗಿ ಮುಂದೂಡಲು ನಿರ್ಧರಿಸಿದರು.

ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘದ ಅಧ್ಯಕ್ಷ ನಿಡಸಾಲೆ ಪುಟ್ಟಸ್ವಾಮಯ್ಯ, ಕರ್ನಾಟಕ ಪ್ರಕಾಶಕರ ಸಂಘದ ಕಾರ್ಯದರ್ಶಿ ಅಭಿನವ ರವಿಕುಮಾರ್, ಒಕ್ಕೂಟದ ಸೃಷ್ಟಿ ನಾಗೇಶ್, ಚಂದ್ರಕೀರ್ತಿ, ಆರ್. ದೊಡ್ಡೇಗೌಡ, ಧಾತ್ರಿ ಉಮೇಶ್, ರಾಜೇಶ್ ಬಿ. ಹೊನ್ನೇನಹಳ್ಳಿ, ವಿಶಾಲಾಕ್ಷಿ, ಮಂಜೇಗೌಡ ಇದ್ದರು.

ಬೀದಿಗೆ ಬಂತು ಕುರ್ಚಿ ಜಗಳ...

'ಅಹಿಂದ ಕದನ'

ಒಂದನೇ ಪುಟದಿಂದ...

ಒಕ್ಕೂಟದ ಅಧ್ಯಕ್ಷ ಕೆ.ಎಂ. ರಾಮಚಂದ್ರಪ್ಪ, 'ಅಹಿಂದ ಸಮುದಾಯದ ಜನರು ಮತ ನೀಡಿರುವುದರಿಂದಲೇ ಕಾಂಗ್ರೆಸ್ ಅಧಿಕಾರಕ್ಕೆ ಬಂದಿದೆ. ಒಕ್ಕಲಿಗ ಸಮುದಾಯದ ಮಠಗಳು ಮತ್ತು ಸಂಘಗಳು ಅವರ ನಾಯಕರ ಪರವಾಗಿ ಲಾಬಿ ಮಾಡುವುದಾದರೆ, ನಾವು ಅಹಿಂದ ನಾಯಕರ ಪರವಾಗಿ ಅಖಾಡಕ್ಕೆ ಇಳಿಯುತ್ತೇವೆ' ಎಂದರು.

'ರಾಜ್ಯದಲ್ಲಿ ಅಹಿಂದ ಸಮುದಾಯದವರೇ ಬಹುಸಂಖ್ಯಾತರು ಎಂಬುದನ್ನು ಸಾಬೀತುಪಡಿಸಿದ್ದ ಸಾಮಾಜಿಕ ಶೈಕ್ಷಣಿಕ ಸಮೀಕ್ಷೆಯ ವರದಿಯ ಶಿಫಾರಸುಗಳು ಜಾರಿ ಆಗದಂತೆ ಪ್ರಬಲ ಸಮುದಾಯದವರು ನೋಡಿಕೊಂಡರು. ಸ್ವಾತಂತ್ರ್ಯ ಬಂದಾಗಿನಿಂದಲೂ ಈ ರೀತಿಯ ಬೆದರಿಕೆ, ದಬ್ಬಾಳಿಕೆಗಳನ್ನು ನಡೆಸಿಕೊಂಡೇ ಬಂದಿದ್ದಾರೆ. ಆದರೆ ಈಗ ಅವರ ಬೆದರಿಕೆಗೆ ಜಗ್ಗುವಂತಹ ಪರಿಸ್ಥಿತಿ ಇಲ್ಲ' ಎಂದರು.

'ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಇಳಿಸಲು ನಾವು ಅವಕಾಶ ಕೊಡುವುದಿಲ್ಲ. ಒಂದೊಮ್ಮೆ ಹಾಗೆ ಮಾಡಿದರೆ ರಾಜ್ಯದಲ್ಲಿ ಮೇಲ್ವರ್ಗ ಮತ್ತು ಕೆಳವರ್ಗಗಳ ಮಧ್ಯೆ ಸಂಘರ್ಷ ಉಂಟಾಗುತ್ತದೆ. ಕಾಂಗ್ರೆಸ್ ಹೈಕಮಾಂಡ್ ಅದಕ್ಕೆ ಅವಕಾಶ ಮಾಡಿಕೊಡಬಾರದು' ಎಂದು ಆಗ್ರಹಿಸಿದರು.

'ಡಿ.ಕೆ.ಶಿವಕುಮಾರ್ ಅವರ ಶ್ರಮಕ್ಕೆ ಕೂಲಿ ಕೊಡಿ ಎಂದು ಒಕ್ಕಲಿಗರ ಸಂಘದವರು ಆಗ್ರಹಿಸಿದ್ದಾರೆ. ಶಿವಕುಮಾರ್ ಅವರಿಗೆ ಈಗಾಗಲೇ ಕೆಪಿಸಿಸಿ ಅಧ್ಯಕ್ಷ ಸ್ಥಾನವನ್ನು ನೀಡಲಾಗಿದೆಯಲ್ಲ' ಎಂದರು.

'ಸಿ.ಎಂ ಸ್ಥಾನ ಬಿಡಿ'

ಒಂದನೇ ಪುಟದಿಂದ...

ಅಲ್ಲದೇ 'ಶಿವಕುಮಾರ್ ಅವರಿಗೆ ಅಧಿಕಾರ ಬಿಟ್ಟುಕೊಡುತ್ತೇವೆ ಎಂದು ಪಕ್ಷದ ಹಿರಿಯರು ಮಾತು ಕೊಟ್ಟಿದ್ದರು. ಆ ಮಾತನ್ನು ಅವರು ಈಗ ಉಳಿಸಿಕೊಳ್ಳಬೇಕು. ಮುಖ್ಯಮಂತ್ರಿ ಆಗಲು ಶಿವಕುಮಾರ್ ಅವರಿಗೆ ಒಂದು ಅವಕಾಶ ಕೊಡಬೇಕು' ಎಂದಿದ್ದಾರೆ.

'ಶ್ರಮಕ್ಕೆ ಕೂಲಿ ಕೊಡಿ': 'ರಾಜ್ಯದಲ್ಲಿ ಕಾಂಗ್ರೆಸ್ ಅನ್ನು ಅಧಿಕಾರಕ್ಕೆ ತರಲು ಡಿ.ಕೆ.ಶಿವಕುಮಾರ್ ಅವರು ಹಾಕಿರುವ ಶ್ರಮಕ್ಕೆ ಪಕ್ಷವು ಕೂಲಿ ಕೊಡಬೇಕು. ಅವರು ಮುಖ್ಯಮಂತ್ರಿ ಆಗಲು ಹೈಕಮಾಂಡ್ ಅವಕಾಶ ನೀಡಬೇಕು' ಎಂದು ಒಕ್ಕಲಿಗರ ಸಂಘದ ಅಧ್ಯಕ್ಷ ಎಲ್.ಶ್ರೀನಿವಾಸ್ ಒತ್ತಾಯಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಲು ಹಗಲಿರುಳು ಶ್ರಮಿಸಿದ್ದು, ಹಳೆ ಮೈಸೂರು ಭಾಗದಲ್ಲಿ ಕಾಂಗ್ರೆಸ್ ಅಧಿಕ ಸ್ಥಾನಗಳನ್ನು ಗೆಲ್ಲಲು ಕಾರಣರಾಗಿದ್ದಾರೆ. ಪಕ್ಷದ ನಿಷ್ಠಾವಂತ ಕಾರ್ಯಕರ್ತರಾಗಿರುವ ಶಿವಕುಮಾರ್‌ಗೆ ಯಾವುದೇ ಕಾರಣಕ್ಕೂ ಅನ್ಯಾಯವಾಗಬಾರದು. ಒಂದು ವೇಳೆ ಅವರಿಗೆ ಮುಖ್ಯಮಂತ್ರಿ ಸ್ಥಾನ ಸಿಗದಿದ್ದರೆ, ಸಮುದಾಯದ ಸ್ವಾಮೀಜಿಗಳ ಮಾರ್ಗದರ್ಶನದಲ್ಲಿ ಹೋರಾಟ ಮಾಡಲಾಗುವುದು ಎಂದು ಎಚ್ಚರಿಸಿದರು.

ಸಂಘದ ಮಾಜಿ ಅಧ್ಯಕ್ಷ ಬಿ.ಕೆಂಚಪ್ಪಗೌಡ, 'ಶಿವಕುಮಾರ್ ಅವರು ಚುನಾವಣೆ ವೇಳೆ ಪೆನ್ನು, ಪೇಪರ್ ಕೊಡಿ ಎಂದು ಕೇಳಿದ್ದರು. ಅದರಂತೆ ಒಕ್ಕಲಿಗ ಸಮುದಾಯ ಅವರ ಪಕ್ಷವನ್ನು ಬೆಂಬಲಿಸಿತ್ತು. ಕೆಪಿಸಿಸಿ ಅಧ್ಯಕ್ಷರಾಗಿದ್ದವರು ಮುಖ್ಯಮಂತ್ರಿ ಆಗುವ ಪರಿಪಾಟ ಇದೆ. ಹಾಗಾಗಿ ಸಮುದಾಯಕ್ಕೆ ಅನ್ಯಾಯವಾಗಲು ಬಿಡುವುದಿಲ್ಲ. ಮುಖ್ಯಮಂತ್ರಿ ಸ್ಥಾನ ನೀಡದಿದ್ದರೆ ಮುಂದಿನ ಚುನಾವಣೆಯಲ್ಲಿ ಪಾಠ ಕಲಿಸುತ್ತೇವೆ' ಎಂದರು.

ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಜಿ.ಗಂಗಾಧರ್, ಉಪಾಧ್ಯಕ್ಷರಾದ ರೇಣುಕ ಪ್ರಸಾದ್, ಎಂ.ಪುಟ್ಟಸ್ವಾಮಿ, ಖಜಾಂಚಿ ಕೆ.ವಿ.ಶ್ರೀಧರ್, ಸಂಘದ ನಿರ್ದೇಶಕರಾದ ವೆಂಕಟರಾಮೇಗೌಡ, ಹನುಮಂತರಾಯಪ್ಪ, ಬಿ.ಪಿ. ಮಂಜೇಗೌಡ ಸುದ್ದಿಗೋಷ್ಠಿಯಲ್ಲಿ ಇದ್ದರು.

'ಬದುಕು ಸುಧಾರಿಸದ ಮಾತಿಗೆ ಬಲವಿಲ್ಲ...

ಒಂದನೇ ಪುಟದಿಂದ....

'ಕರ್ನಾಟಕದ ಜನರಿಗೆ ನಾವು ಕೊಟ್ಟ ಮಾತು ಕೇವಲ ಘೋಷಣೆಯಲ್ಲ, ಅದೇ ನಮಗೆ ಜಗತ್ತು' ಎಂಬ ಬರಹ ಇರುವ ಪೋಸ್ಟರ್ ಅನ್ನು ಅದರೊಂದಿಗೆ ಲಗತ್ತಿಸಿದ್ದಾರೆ.

'ಕರ್ನಾಟಕದ ಜನರು ನೀಡಿರುವ ಅಧಿಕಾರವು ಒಂದು ಕ್ಷಣಿಕ ಮಂತ್ರವಲ್ಲ. ಅದು ಐದು ವರ್ಷಗಳ ಪೂರ್ಣ ಜವಾಬ್ದಾರಿ. ನಾನೂ ಸೇರಿದಂತೆ ಕಾಂಗ್ರೆಸ್ ಪಕ್ಷವು ಜನರಿಗಾಗಿ ನೀಡಿರುವ ಮಾತನ್ನು ಕಾಯಕದಲ್ಲಿ ತೋರಿಸುತ್ತಿದ್ದೇವೆ' ಎಂದು ಹೇಳಿದ್ದಾರೆ.

ರಾಜ್ಯದ ಮಹಿಳೆಯರಿಗೆ 600 ಕೋಟಿಗೂ ಹೆಚ್ಚು ಉಚಿತ ಪ್ರಯಾಣದ ಅವಕಾಶಗಳನ್ನು ಶಕ್ತಿ ಯೋಜನೆ ಮೂಲಕ ಕಲ್ಪಿಸಲಾಗಿದೆ. 1.24 ಕೋಟಿ ಮಹಿಳೆಯರಿಗೆ ಗೃಹಲಕ್ಷ್ಮಿ ಹಣ, 3 ಲಕ್ಷಕ್ಕೂ ಹೆಚ್ಚು ಯುವಕರಿಗೆ ಯುವನಿಧಿ ನೆರವು, 4.08 ಕೋಟಿ ನಾಗರಿಕರಿಗೆ ಆಹಾರ ಭದ್ರತೆ, 1.64 ಕೋಟಿ ಕುಟುಂಬಗಳಿಗೆ ಉಚಿತ ವಿದ್ಯುತ್ ನೀಡುವ ಮೂಲಕ 'ಕೊಟ್ಟ ಮಾತು' ಉಳಿಸಿಕೊಂಡಿದ್ದೇವೆ. 2013–18ರ ನನ್ನ ಮೊದಲ ಅವಧಿಯಲ್ಲಿ, 165 ಭರವಸೆಗಳಲ್ಲಿ 157 ಭರವಸೆ ನೆರವೇರಿಸಿದ್ದೇವೆ. ಈ ಅವಧಿಯಲ್ಲಿ, 593 ಭರವಸೆಗಳಲ್ಲಿ 243ಕ್ಕೂ ಹೆಚ್ಚು ಈಡೇರಿವೆ. ಉಳಿದ ಪ್ರತಿಯೊಂದನ್ನೂ ನಮ್ಮ ಬದ್ಧತೆ, ವಿಶ್ವಾಸಾರ್ಹತೆ ಮತ್ತು ಕಾಳಜಿಯೊಂದಿಗೆ ಪೂರೈಸುತ್ತೇವೆ ಎಂದು ವಿವರಿಸಿದ್ದಾರೆ.

ಸಚಿವರ ಜತೆ ಸಿ.ಎಂ ಪ್ರತ್ಯೇಕ ಚರ್ಚೆ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಗೃಹ ಕಚೇರಿ ಕೃಷ್ಣಾದಲ್ಲಿ ಕೆಲ ಸಚಿವರ ಜತೆ ಒಂದು ಗಂಟೆಗೂ ಹೆಚ್ಚು ಹೊತ್ತು ಸಮಾಲೋಚನೆ ನಡೆಸಿದರು. ಸಂಪುಟ ಸಭೆಗೂ ಮೊದಲು ನಡೆದ ಚರ್ಚೆಯಲ್ಲಿ ಸಚಿವರಾದ ಎಚ್.ಕೆ.ಪಾಟೀಲ, ಈಶ್ವರ ಖಂಡ್ರೆ, ಶರಣಬಸಪ್ಪ ದರ್ಶನಾಪುರ, ಕೃಷ್ಣ ಬೈರೇಗೌಡ, ಪ್ರಿಯಾಂಕ್ ಖರ್ಗೆ, ಸಂತೋಷ್ ಲಾಡ್, ಬೋಸರಾಜು, ವಿಧಾನಪರಿಷತ್ ಸದಸ್ಯ ಎಂ.ಆರ್. ಸೀತಾರಾಮ್ ಭಾಗವಹಿಸಿದ್ದರು ಎಂದು ಗೊತ್ತಾಗಿದೆ.

ಚಿಟಿಕೆ ಸುದ್ದಿ


ಬಾಂಬ್ ಬೆದರಿಕೆ ಮೂವರು ಉಗ್ರರ ಬಂಧನ

ಇಂಫಾಲ್ (ಪಿಟಿಐ): 'ಮಣಿಪುರದಲ್ಲಿ ನಡೆಯುತ್ತಿರುವ 'ಸಂಗಾಯ್ ಪ್ರವಾಸ ಹಬ್ಬ'ದಲ್ಲಿ ಬಾಂಬ್ ಸ್ಫೋಟಿಸುವುದಾಗಿ ಬೆದರಿಕೆ ಒಡ್ಡಿದ್ದ ಮಹಿಳೆ ಸೇರಿ ಮೂವರು ಬಂಡುಕೋರರನ್ನು ಭದ್ರತಾ ಪಡೆಗಳು ಬಂಧಿಸಿವೆ' ಎಂದು ಪೊಲೀಸರು ಗುರುವಾರ ಮಾಹಿತಿ ನೀಡಿದರು.

'ಫೇಸ್‌ಬುಕ್ ಖಾತೆಯೊಂದರಿಂದ ನ.21ರಂದು ಬೆದರಿಕೆಯ ವಿಡಿಯೊ ಹಂಚಿಕೆಯಾಗಿತ್ತು. ನ.21ರಿಂದ ನ.30ರವರೆಗೆ ಈ ಹಬ್ಬ ನಡೆಯಲಿದೆ. ರಾಜ್ಯದಲ್ಲಿ ನಡೆಯುತ್ತಿರುವ ಜನಾಂಗೀಯ ಸಂಘರ್ಷದಲ್ಲಿ ನಿರಾಶ್ರಿತರಾದವರು ಮತ್ತು ಕೆಲವು ಸಂಘಟನೆಗಳು ಈ ಹಬ್ಬವನ್ನು ಬಹಿಷ್ಕರಿಸಿವೆ.

'ಭಾರತ ವಿರೋಧಿ ಧೋರಣೆ'

ನವದೆಹಲಿ (ಪಿಟಿಐ): ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ ಸೂಚನೆಯಂತೆ ಪಾಕಿಸ್ತಾನ, ಬಾಂಗ್ಲಾದೇಶ, ಮಲೇಷ್ಯಾ, ಸಿಂಗಪುರ ಮತ್ತು ಇತರ ದೇಶಗಳಲ್ಲಿನ ಸಾಮಾಜಿಕ



ಮಾಧ್ಯಮ ಖಾತೆಗಳಲ್ಲಿ ಭಾರತ ವಿರೋಧಿ ಸಂಕಥನವನ್ನು ಸೃಷ್ಟಿಸಲಾಗುತ್ತಿದೆ ಎಂದು ಬಿಜೆಪಿ ಗುರುವಾರ ಆರೋಪಿಸಿದೆ.

ಕಾಂಗ್ರೆಸ್ ಮಾಧ್ಯಮ ವಿಭಾಗದ ಮುಖ್ಯಸ್ಥ ಪವನ್ ಖೇರಾ ಅವರ 'ಎಕ್ಸ್' ಖಾತೆ ಸಹ ಅಮೆರಿಕದಲ್ಲಿದೆ ಎಂದು ದೂರಿದೆ.

ಬಿಜೆಪಿ ಪ್ರಧಾನ ಕಚೇರಿಯಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಸಂಸದ ಮತ್ತು ರಾಷ್ಟ್ರೀಯ ವಕ್ತಾರ ಸಂಬಿತ್ ಪಾತ್ರಾ ಅವರು ವಿದೇಶಗಳಿಂದ ಪೋಸ್ಟ್‌ಗಳನ್ನು ಅಪ್‌ಲೋಡ್ ಮಾಡಲಾಗುತ್ತಿದೆ ಎಂದು ಆರೋಪಿಸಲಾದ ವಿವಿಧ 'ಎಕ್ಸ್' ಖಾತೆಗಳನ್ನು ಪ್ರದರ್ಶಿಸಿದರು.

ಮತಗಳ್ಳತನ, ಮೋದಿ ವಿರುದ್ಧ ಕಾಂಗ್ರೆಸ್‌ನ ಆರೋಪಗಳು ಸೇರಿದಂತೆ ವಿವಿಧ ವಿಷಯಗಳ ಕುರಿತ ಸಾಮಾಜಿಕ ಮಾಧ್ಯಮ ಅಭಿಯಾನಗಳನ್ನು ಪ್ರದರ್ಶಿಸಿದರು.

ಎಡಿಎಲ್‌ಆರ್ ಸೇರಿ ಮೂವರ ಬಂಧನ

ಮಂಗಳೂರು: ಹೊರಗುತ್ತಿಗೆ ನೌಕರರೊಬ್ಬರ ಸಂಬಳದ ಬಾಕಿ ಬಿಲ್ ಪಾವತಿಗೆ ಮತ್ತು ಅವರನ್ನು ಹೊರಗುತ್ತಿಗೆ ಆಧಾರದಲ್ಲಿ ಕರ್ತವ್ಯದಲ್ಲಿ ಮುಂದುವರಿಸಲು ನೇಮಕಾತಿ ಆದೇಶವನ್ನು ಮಾಡಿಸಿಕೊಡಲು ಲಂಚ ಪಡೆದ ಆರೋಪದ ಮೇಲೆ ಮಂಗಳೂರು ತಾಲ್ಲೂಕಿನ ಭೂದಾಖಲೆಗಳ ಸಹಾಯಕ ನಿರ್ದೇಶಕ (ಎಡಿಎಲ್‌ಆರ್) ಬಿ.ಕೆ. ರಾಜು, ಉಳ್ಳಾಲ ಕಚೇರಿಯ ಸರ್ವೇಯರ್ ಕೃಷ್ಣಮೂರ್ತಿ ಹಾಗೂ ಸರ್ವೆ ಸೂಪರ್‌ವೈಸರ್ ಎಸ್.ಧನಶೇಖರ ಎಂಬುವರನ್ನು ಲೋಕಾಯುಕ್ತ ಪೊಲೀಸರು ಗುರುವಾರ ಬಂಧಿಸಿದ್ದಾರೆ.

'ಉಳ್ಳಾಲದ ಭೂದಾಖಲೆಗಳ ಸಹಾಯಕ ನಿರ್ದೇಶಕರ ಕಚೇರಿಯ ಸರ್ವೇಯರ್ ಕೃಷ್ಣಮೂರ್ತಿ ₹50 ಸಾವಿರ, ಭೂದಾಖಲೆಗಳ ಸಹಾಯಕ ನಿರ್ದೇಶಕ ಬಿ.ಕೆ. ರಾಜು ಅವರು ₹10 ಸಾವಿರ, ಸರ್ವೆ ಸೂಪರ್‌ವೈಸರ್ ಎಸ್. ಧನಶೇಖರ ₹10 ಸಾವಿರ ಲಂಚ ಕೇಳಿದ್ದಾರೆ' ಎಂದು ದಕ್ಷಿಣ ಕನ್ನಡ ಜಿಲ್ಲೆಯ ಭೂದಾಖಲೆ ಇಲಾಖೆಯ ನಗರ ಆಸ್ತಿ ಮಾಲೀಕತ್ವದ ದಾಖಲೆ ವಿಭಾಗದ ಕಚೇರಿಯಲ್ಲಿ ಹೊರಗುತ್ತಿಗೆ ನೌಕರರಾಗಿದ್ದ ವ್ಯಕ್ತಿಯೊಬ್ಬರು ಲೋಕಾಯುಕ್ತಕ್ಕೆ ದೂರು ನೀಡಿದ್ದರು.

ನೇಮಕಾತಿಗೆ ಷರತ್ತುಬದ್ಧ ಅನುಮತಿ

ಒಳ ಮೀಸಲು: ಒಟ್ಟು ಪ್ರಮಾಣ ಶೇ 50ರಿಂದ 56ಕ್ಕೆ ಹೆಚ್ಚಿಸಿದ್ದ ಕಾಯ್ದೆ ಅನ್ವಯದ ನೇಮಕ ಪ್ರಕ್ರಿಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೀಸಲಾತಿ ಪ್ರಮಾಣವನ್ನು ಹಿಗ್ಗಿಸಿ ಒಟ್ಟು ಮೀಸಲು ಪ್ರಮಾಣವನ್ನು ಶೇ 50ರಿಂದ 56ಕ್ಕೆ ಹೆಚ್ಚಿಸಿದ್ದ ಕಾಯ್ದೆ ಅನ್ವಯ ಈಗಾಗಲೇ ಆರಂಭಿಸಿರುವ ಸರ್ಕಾರಿ ಹುದ್ದೆಗಳ ನೇಮಕಾತಿ ಮತ್ತು ಬಡ್ತಿ ಪ್ರಕ್ರಿಯೆ ಮುಂದುವರಿಸಲು ರಾಜ್ಯ ಸರ್ಕಾರಕ್ಕೆ, ಹೈಕೋರ್ಟ್ ಷರತ್ತುಬದ್ಧ ಅನುಮತಿ ನೀಡಿದೆ.

ಈ ಸಂಬಂಧ ಡಾ.ಅಂಬೇಡ್ಕರ್ ಪರಿಶಿಷ್ಟ ಜಾತಿಗಳ ಒಕ್ಕೂಟದ ರಾಜ್ಯ ಘಟಕದ ಅಧ್ಯಕ್ಷ ಮಹೇಂದ್ರ ಕುಮಾರ್ ಮಿತ್ರ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿತು.

ವಿಚಾರಣೆ ವೇಳೆ ರಾಜ್ಯ ಸರ್ಕಾರದ

ಮುಖ್ಯಾಂಶಗಳು


- ಒಟ್ಟು 3,644 ಹುದ್ದೆ ಭರ್ತಿ ಮಾಡಬೇಕಿದೆ-ಎ.ಜಿ ವಾದ
- ನ್ಯಾ.ನಾಗಮೋಹನ ದಾಸ್ ಸಮಿತಿ ಎಡವಿದೆ-ಅರ್ಜಿದಾರರ ಪ್ರತಿವಾದ

ಪರ ಹಾಜರಾಗಿದ್ದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, 'ಕಾಯ್ದೆಯ ಅನ್ವಯ, ಕರ್ನಾಟಕ ಲೋಕಸೇವಾ ಆಯೋಗವು (ಕೆಪಿಎಸ್‌ಸಿ) ನೇಮಕಾತಿ ಆರಂಭಿಸಿದ್ದು ಅದು ಅಂತಿಮ ಹಂತದಲ್ಲಿದೆ. ಒಟ್ಟು 3,644 ಹುದ್ದೆಗಳನ್ನು ಭರ್ತಿ ಮಾಡಬೇಕಿದೆ. ಹೊಸದಾಗಿ ಯಾವುದೇ ಅಧಿಸೂಚನೆ ಹೊರಡಿಸುವುದಿಲ್ಲ. ಹೊಸ ಕಾಯ್ದೆ ಅಡಿ ಈಗಾಗಲೇ ನೇಮಕಾತಿ ಮಾಡಿರುವುದಕ್ಕೆ ಮಧ್ಯಂತರ ಆದೇಶ ಅನ್ವಯಿವಾಗುವುದಿಲ್ಲ ಎಂದು ಆದೇಶಿಸಬೇಕು. ನೇಮಕಾತಿ ಪ್ರಕ್ರಿಯೆ ಮುಂದುವರಿಸಲು ಮತ್ತು ಬಡ್ತಿ ನೀಡಲು ಸರ್ಕಾರಕ್ಕೆ ಅನುಮತಿಸಬೇಕು' ಎಂದು ಕೋರಿದರು.

ಇದಕ್ಕೆ ಪ್ರತಿಯಾಗಿ ಅಭ್ಯರ್ಥಿ ಮಧು ಪರ ಹಾಜರಾಗಿದ್ದ ಪದಾಂಕಿತ ಹಿರಿಯ ವಕೀಲ ಪಿ.ಎಸ್.ರಾಜಗೋಪಾಲ್ ಅವರು 'ನೇಮಕಾತಿ ಪ್ರಕ್ರಿಯೆ ನಡೆಯಲಿ. ಆದರೆ, ಅಂತಿಮಪಟ್ಟಿಯನ್ನು ನ್ಯಾಯಾಲಯದ ಅನುಮತಿ ಇಲ್ಲದೇ ಪ್ರಕಟಿಸಬಾರದು. ಜಿಬಿಎ ಹೊರಡಿಸಿರುವ ನೇಮಕಾತಿ ಅಧಿಸೂಚನೆಯನ್ನು ಪ್ರಶ್ನಿಸಿದ್ದೇವೆ. ಆಯ್ಕೆಯಾದ ಮೇಲೆ ನೇಮಕಾತಿ ಆದೇಶ ನೀಡಲು ಮೂರು ತಿಂಗಳಾಗುತ್ತದೆ. ಜಾತಿ ಪ್ರಮಾಣ ಪತ್ರ ಮತ್ತಿತರ ದಾಖಲೆಗಳನ್ನು ಪರಿಶೀಲಿಸಬೇಕಾಗುತ್ತದೆ. ನಿವೃತ್ತ ನ್ಯಾ.ಎಚ್.ಎನ್. ನಾಗಮೋಹನ ದಾಸ್ ಸಮಿತಿಯ ವರದಿ ಅನುಸಾರ ಮೀಸಲಾತಿ ಹೆಚ್ಚಿಸಿರುವುದಾಗಿ ಸರ್ಕಾರ ಹೇಳುತ್ತಿದೆ. ಆದರೆ, ನ್ಯಾ. ನಾಗಮೋಹನ್ ದಾಸ್ ಸಮಿತಿಯು ಅಗತ್ಯ ಪ್ರಾತಿನಿಧ್ಯ ಪರೀಕ್ಷೆ ಅನ್ವಯಿಸುವಲ್ಲಿ ಮೂಲಭೂತವಾಗಿ ಎಡವಿದೆ. ಅದು ಅನುಪಾತದ ಪ್ರಾತಿನಿಧ್ಯ ಕಲ್ಪಿಸಿದೆ' ಎಂಬ ಆಕ್ಷೇಪ ವ್ಯಕ್ತಪಡಿಸಿದರು.

ಇನ್ನಿತರ ಅರ್ಜಿದಾರರ ಪರ ಹೈಕೋರ್ಟ್ ವಕೀಲರಾದ ನಚಿಕೇತ್ ಮತ್ತು ರಂಗನಾಥ್ ಜೋಯಿಸ್ 'ನೇಮಕಾತಿ ಪ್ರಕ್ರಿಯೆ ಮುಂದುವರಿಸಲು ಅವಕಾಶ ನೀಡಬಾರದು. ಅರ್ಜಿಗಳನ್ನು ಅಂತಿಮವಾಗಿ ಇತ್ಯರ್ಥಪಡಿಸುವ ನಿಟ್ಟಿನಲ್ಲಿ ವಾದ ಮಂಡಿಸಲು ಸಿದ್ಧವಿದ್ದು ಅದಕ್ಕೆ ಆದ್ಯತೆ ನೀಡಬೇಕು' ಎಂದು ಕೋರಿದರು.

2026ರ ಜನವರಿ 28ಕ್ಕೆ ವಿಚಾರಣೆ



ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ, 'ಮೀಸಲಾತಿ ಹೆಚ್ಚಿಸಿರುವುದರ ಅನುಸಾರ ಹೊಸದಾಗಿ ಯಾವುದೇ ನೇಮಕಾತಿ ಅಥವಾ ಬಡ್ತಿ ನೀಡುವಂತಿಲ್ಲ. ಕಾಯ್ದೆಯ ಅನ್ವಯ ಈಗಾಗಲೇ ಆರಂಭಿಸಿರುವ ನೇಮಕಾತಿ ಪ್ರಕ್ರಿಯೆ ಮುಂದುವರಿಸಬಹುದು. ನೇಮಕಾತಿ ಅಥವಾ ಸೀಟುಗಳ ಹಂಚಿಕೆ ಹಾಲಿ ಅರ್ಜಿಗಳ ಅಂತಿಮ ನಿರ್ಧಾರಕ್ಕೆ ಒಳಪಟ್ಟಿರುತ್ತದೆ. ಇದನ್ನು ನೇಮಕಾತಿ ಅಥವಾ ಬಡ್ತಿ ಪತ್ರದಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಬೇಕು. ಈ ವಿಚಾರದಲ್ಲಿ ಅಭ್ಯರ್ಥಿಗಳಿಗೆ ಯಾವುದೇ ಹಕ್ಕು ದೊರೆಯುವುದಿಲ್ಲ. ಈ ಮಾರ್ಪಾಡು 2025ರ ನವೆಂಬರ್ 19ರ ಮಧ್ಯಂತರ ಆದೇಶಕ್ಕೆ ಮಾತ್ರ ಅನ್ವಯವಾಗುತ್ತದೆ' ಎಂದು ಸ್ಪಷ್ಟಪಡಿಸಿತು. ಪ್ರತಿವಾದಿ ರಾಜ್ಯ ಸರ್ಕಾರಕ್ಕೆ ಆಕ್ಷೇಪಣೆ ಸಲ್ಲಿಸಲು ಕಾಲಾವಕಾಶ ನೀಡಿ ವಿಚಾರಣೆಯನ್ನು 2026ರ ಜನವರಿ 28ಕ್ಕೆ ಮುಂದೂಡಿತು.



ಸಂಚಾರಿ ಡಿಜಿಟಲ್ ತಾರಾಲಯಗಳಿಗೆ ಸಿದ್ದರಾಮಯ್ಯ ಅವರು ಚಾಲನೆ ನೀಡಿದರು. ಸಚಿವರಾದ ಎನ್‌.ಎಸ್‌.ಬೋಸರಾಜು, ಪ್ರಿಯಾಂಕ್ ಖರ್ಗೆ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

ಶಾಲೆ ಅಂಗಳಕ್ಕೆ ತಾರಾಲಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ತಾರಾಲಯ, ಬಾಹ್ಯಾಕಾಶ ಪ್ರಯೋಗಾಲಯಗಳಂತಹ ಸವಲತ್ತುಗಳಿಂದ ವಂಚಿತರಾಗಬಾರದು ಎಂಬ ಉದ್ದೇಶದಿಂದ, ಸಂಚಾರಿ ತಾರಾಲಯಗಳನ್ನು ಒದಗಿಸಿದ್ದೇವೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ವಿಧಾನಸೌಧದ ಮೆಟ್ಟಿಲುಗಳ ಮೇಲೆ ಗುರುವಾರ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ 'ಶಾಲೆಯ ಅಂಗಳದಲ್ಲಿ ತಾರಾಲಯ: ಡಿಜಿಟಲ್ ಸಂಚಾರಿ ತಾರಾಲಯ'ಗಳಿಗೆ ಚಾಲನೆ ನೀಡಿ ಅವರು ಮಾತನಾಡಿದರು.

'ತಾರಾಲಯ ಸವಲತ್ತು ನಗರಗಳಿಗೆ ಸೀಮಿತವಾಗಿತ್ತು. ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಅದು ಸುಲಭವಾಗಿ ಲಭ್ಯವಿರಲಿಲ್ಲ. ಈ ಅಂತರವನ್ನು ಹೋಗಲಾಡಿಸುವ ಉದ್ದೇಶದಿಂದ ಈ ಕಾರ್ಯಕ್ರಮ ರೂಪಿಸಲಾಗಿದೆ. ಗ್ರಾಮೀಣ ಭಾಗದ ವಿದ್ಯಾರ್ಥಿಗಳಲ್ಲಿ ಖಗೋಳ ವಿಜ್ಞಾನದ ಕೌತುಕವನ್ನು ಬಿತ್ತಿ, ವಿಜ್ಞಾನ ಕಲಿಕೆಯಲ್ಲಿ ಕ್ರಾಂತಿಕಾರಿ ಬದಲಾವಣೆ ತರುವುದು ನಮ್ಮ ಸರ್ಕಾರದ ಗುರಿ. ಈ ಯೋಜನೆ ಈಗಾಗಲೇ 17 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ತಲುಪಿದೆ' ಎಂದರು.

ವಿಜ್ಞಾನ ತಂತ್ರಜ್ಞಾನ ಸಚಿವ ಎನ್.ಎಸ್. ಬೋಸರಾಜು, 'ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವ ಮೂಡಿಸುವ ಉದ್ದೇಶದಿಂದ ವಿಜ್ಞಾನ ಶಿಕ್ಷಣಕ್ಕೆ ನಮ್ಮ ಸರ್ಕಾರ ಒತ್ತು ನೀಡಿದೆ. ತಾರಾಲಯ ಕಲ್ಪನೆಗೆ ಆಧುನಿಕ ಸ್ಪರ್ಶ ನೀಡಿ, ಗ್ರಾಮೀಣ ಪ್ರದೇಶಗಳಿಗೆ ಕೊಂಡೊಯ್ಯಲಾಗುತ್ತಿದೆ. ಈಗ ಕೆಲವೇ ಜಿಲ್ಲೆಗಳಿಗೆ ಸೀಮಿತವಾಗಿರುವ ಈ ಕಾರ್ಯಕ್ರಮವನ್ನು ಶೀಘ್ರವೇ ಎಲ್ಲ ಜಿಲ್ಲೆಗಳಿಗೆ ವಿಸ್ತರಿಸಲಾಗುವುದು' ಎಂದರು.

ಕಾವೇರಿ ತಂತ್ರಾಂಶ: ಪರಿಷ್ಕರಣೆಗೆ ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚಾಲ್ತಿಯಲ್ಲಿರುವ ಕಾವೇರಿ 2.0 ತಂತ್ರಾಂಶದ ಕಾನೂನಿನಲ್ಲಿ, 'ಮ್ಯುಟೇಷನ್ ಆಧಾರಿತ ಸಿವಿಲ್ ಕೋರ್ಟ್ ಡಿಕ್ರಿ' ಎಂಬ ಹೊಸ ಕಾರ್ಯ ನಿರ್ವಹಣಾ ಶೀರ್ಷಿಕೆಯನ್ನೂ ಸೇರ್ಪಡೆ ಮಾಡಿ ಪರಿಷ್ಕರಿಸಬೇಕು' ಎಂದು ಹೈಕೋರ್ಟ್, ನೋಂದಣಿ ಮತ್ತು ಮುದ್ರಾಂಕ ಇಲಾಖೆ, ಕಂದಾಯ ಇಲಾಖೆಗೆ ನಿರ್ದೇಶಿಸಿದೆ.

'ಸಿವಿಲ್ ವ್ಯಾಜ್ಯದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಸೆಷನ್ಸ್ ನ್ಯಾಯಾಲಯ ಅಂಗೀಕರಿಸಿದ ರಾಜಿ ಡಿಕ್ರಿಯ ಅನುಸಾರ ನಮ್ಮ ಹೆಸರಿಗೆ ಖಾತಾ ವರ್ಗಾವಣೆ ಮಾಡಲು ನಿರ್ದೇಶಿಸಬೇಕು' ಎಂದು ಕೋರಿ ಬಂಟ್ವಾಳ ತಾಲ್ಲೂಕಿನ ನರಿಕೊಂಬು ಗ್ರಾಮದ ಗಿಲ್ಬರ್ಟ್ ವಾರ್ಘ್ ಸೇರಿದಂತೆ ಐವರು ಸಲ್ಲಿಸಿದ್ದ ರಿಟ್ ಅರ್ಜಿ ಪುರಸ್ಕರಿಸಿರುವ ನ್ಯಾಯಮೂರ್ತಿ ಸಚಿನ್ ಶಂಕರ್ ಮಗದುಂ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಸದ್ಯ ಕಾವೇರಿ 2.0 ಮಾರಾಟ, ಗಿಫ್ಟ್ ಡೀಡ್, ಅಡಮಾನ, ಪಿತ್ರಾರ್ಜಿತ ಆಸ್ತಿ ಕುರಿತ ಚಟುವಟಿಕೆಗಳನ್ನು ಆಧರಿಸಿದೆ ಮತ್ತು ಇದರಲ್ಲಿ ಆಸ್ತಿ ವಿವಾದಗಳ ಕುರಿತಂತೆ ಸಿವಿಲ್ ನ್ಯಾಯಾಲಯಗಳ ತೀರ್ಪುಗಳನ್ನು ಪರಿಶೀಲಿಸಲು ಯಾವುದೇ ಅವಕಾಶವಿಲ್ಲ. ಇದರಿಂದಾಗಿ ನಾಗರಿಕರು, ನ್ಯಾಯಾಲಯಗಳು ನಿರ್ಣಾಯಕವಾಗಿ ನಿರ್ಧರಿಸಿದ ವಿಷಯಗಳಿಗೆ ಹಲವು ಅನುಮೋದನೆಗಳು, ಪರಿಶೀಲನೆಗಳು ಮತ್ತು ಪ್ರಮಾಣೀಕರಣಗಳನ್ನು ಪಡೆಯಬೇಕೆಂದು ಸೂಚಿಸುತ್ತದೆ. ಹಾಗಾಗಿ, ಹಾಲಿ ತಂತ್ರಾಂಶದಲ್ಲಿ ಗೊಂದಲ ಉಂಟು ಮಾಡುತ್ತಿರುವ ಕಾರಣ ಪರಿಷ್ಕರಣೆ ಅತ್ಯಗತ್ಯವಾಗಿದೆ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

'ಖಚಿತಪಡಿಸಿಕೊಳ್ಳಬೇಕು'

'ಕೋರ್ಟ್ ತೀರ್ಪುಗಳು ಮತ್ತು ಆಡಳಿತಾತ್ಮಕ ನಿರ್ಣಯಗಳನ್ನು ಜಾರಿಗೊಳಿಸುವ ಮಧ್ಯೆ ಸಮನ್ವಯ ಸ್ಥಾಪಿಸಲು ಮತ್ತು ಸಿವಿಲ್ ನ್ಯಾಯಾಲಯದ ತೀರ್ಪುಗಳು ರಾಜ್ಯದ ಡಿಜಿಟಲ್ ಆದಾಯ ಮೂಲಸೌಕರ್ಯದಲ್ಲಿ ಸ್ವಯಂಚಾಲಿತವಾಗಿ ಮನ್ನಣೆ ಪಡೆಯುವುದನ್ನು ಖಚಿತಪಡಿಸಿಕೊಳ್ಳಬೇಕಿದೆ. ಈ ನಿಟ್ಟಿನಲ್ಲಿ ಸೆಂಟರ್ ಫಾರ್ ಸ್ಮಾರ್ಟ್ ಗವರ್ನೆನ್ಸ್ (ಸಿಎಸ್‌ಜಿ) ಸಹಯೋಗದೊಂದಿಗೆ ಕಾನೂನಿನ ಪರಿಷ್ಕರಣೆ ಮಾಡಬೇಕು' ಎಂದು ನ್ಯಾಯಪೀಠ ನಿರ್ದೇಶಿಸಿದೆ.

ಐವರು ಅನುವಾದಕರಿಗೆ 'ಗೌರವ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ 2025ನೇ ಸಾಲಿನ 'ಗೌರವ ಪ್ರಶಸ್ತಿ'ಗೆ ಐವರು ಅನುವಾದಕರು ಆಯ್ಕೆಯಾಗಿದ್ದಾರೆ.

ಪ್ರಾಧಿಕಾರದ ಅಧ್ಯಕ್ಷ ಚನ್ನಪ್ಪ ಕಟ್ಟಿ ಅವರು ಪ್ರಶಸ್ತಿ ಪಟ್ಟಿಯನ್ನು ಗುರುವಾರ ಬಿಡುಗಡೆ ಮಾಡಿದ್ದಾರೆ. ಕನ್ನಡ ಹಾಗೂ ಇತರ ಭಾಷೆಗಳ ನಡುವೆ ಅನುವಾದಕ್ಕೆ ಸಂಬಂಧಿಸಿದಂತೆ ಆಯ್ಕೆ ಮಾಡಲಾಗಿದೆ.

ವಿವಿಧ ಇಂಗ್ಲಿಷ್ ಕೃತಿಗಳನ್ನು ಕನ್ನಡ ಮತ್ತು ಕೊಂಕಣಿ ಭಾಷೆಗೆ ಅನುವಾದಿಸಿರುವ ಹಾಸನದ ಜೆ.ವಿ. ಕಾರ್ಲೊ, ಕನ್ನಡದಿಂದ ಇಂಗ್ಲಿಷ್‌ಗೆ ಹಾಗೂ ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನೇಕ ಕೃತಿಗಳನ್ನು ಅನುವಾದಿಸಿರುವ ಬೆಂಗಳೂರಿನ ವನಮಾಲಾ ವಿಶ್ವನಾಥ್, ಜಾನಪದ ಮತ್ತು ಅನುವಾದ ಕ್ಷೇತ್ರಕ್ಕೆ ಕೊಡುಗೆಗಳನ್ನು ನೀಡಿದ ಚಿತ್ರದುರ್ಗದ ಸಂಧ್ಯಾ ರೆಡ್ಡಿ ಕೆ.ಆರ್., ಮರಾಠಿ ಹಾಗೂ ಮಲೆಯಾಳ ಭಾಷೆಯಿಂದ ಕನ್ನಡಕ್ಕೆ ಅನೇಕ ಮಹತ್ವದ ಕೃತಿಗಳನ್ನು ಅನುವಾದಿಸಿದ ಹೊಸಪೇಟೆಯ ವಿಠಲರಾವ್ ಟಿ. ಗಾಯಕ್ವಾಡ್ ಹಾಗೂ ಮರಾಠಿ ಭಾಷೆಯಲ್ಲಿ ರಚಿತವಾದ ಸಮಾಜ ಸುಧಾರಕರ ಮತ್ತು ಹೋರಾಟಗಾರರ ಕುರಿತಾದ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿದ ಅಥಣಿಯ ಜೆ.ಪಿ. ದೊಡಮನಿ ಅವರು ಪ್ರಶಸ್ತಿಗೆ ಭಾಜನರಾಗಿದ್ದಾರೆ. ಈ ಪ್ರಶಸ್ತಿಯು ತಲಾ ₹50 ಸಾವಿರ ನಗದು ಹಾಗೂ ಫಲಕ ಒಳಗೊಂಡಿದೆ.

2024ನೇ ಸಾಲಿನ ಪುಸ್ತಕ ಬಹುಮಾನವೂ ಪ್ರಕಟಗೊಂಡಿದ್ದು, ಐದು ಅನುವಾದಿತ ಕೃತಿಗಳು ಆಯ್ಕೆಯಾಗಿವೆ. ಪುಸ್ತಕ ಬಹುಮಾನವು ತಲಾ ₹ 25 ಸಾವಿರ ನಗದು ಒಳಗೊಂಡಿದೆ.

2024ನೇ ಸಾಲಿನ ಪುಸ್ತಕ ಬಹುಮಾನ

ವಿಭಾಗ	ಅನುವಾದಿತ ಕೃತಿ	ಅನುವಾದಕ	ಮೂಲ ಲೇಖಕ
ಕನ್ನಡದಿಂದ ಇಂಗ್ಲಿಷ್	ಏಕತಾರಿ	ಆರ್.ಸದಾನಂದ	ಕುಪ್ಪೆ ನಾಗರಾಜ
ಇಂಗ್ಲಿಷ್‌ನಿಂದ ಕನ್ನಡ	ಆ ಲಯ ಈ ಲಯ	ನಟರಾಜ ಹೊನ್ನವಳ್ಳಿ	ಲೂಯಿ ನಕೋಸಿ
ಇಂಗ್ಲಿಷ್ ಹೊರತಾಗಿ ಬೇರೆ ಭಾರತೀಯ ಭಾಷೆಗಳಿಂದ ಕನ್ನಡ	ಬೌಮನಿಜಂ–ಆಧುನಿಕತೆಯಿಂದ ದ್ರವಾಧು ನಿಕತೆಯವರೆಗೆ	ಮಲ್ಲೇಶಪ್ಪ ಸಿದಾಂಪುರ	ಬಿ.ತಿರುಪತಿರಾವು
ಹಿಂದಿಯಿಂದ ಕನ್ನಡ	ಸತ್ತವರ ಸೊಲ್ಲು	ಕಾರ್ತಿಕ್ ಆರ್.	ಅಶುತೋಷ್ ಭಾರದ್ವಾಜ್
ಕನ್ನಡದಿಂದ ಇಂಗ್ಲಿಷ್ ಹೊರತುಪಡಿಸಿ ಬೇರೆ ಭಾರತೀಯ ಭಾಷೆ	ಹಾಥಿ ಪಾಲ್ನೆ ಜೊ ಚಲಿ	ಎನ್. ದೇವರಾಜ್	ಸಹನಾ ಕಾಂತಬೈಲು


ವನಮಾಲ


ಜೆ.ವಿ. ಕಾರ್ಲೊ


ಸಂಧ್ಯಾ ರೆಡ್ಡಿ


ವಿಠಲರಾವ್


ದೊಡಮನಿ

ಸೆಂಗೋಟಯ್ಯನ್ ಟಿವಿಕೆಗೆ ಸೇರ್ಪಡೆ

ಚೆನ್ನೈ (ಪಿಟಿಐ): ಎಐಎಡಿಎಂಕೆ ಪಕ್ಷದಿಂದ 9 ಬಾರಿ ಶಾಸಕರಾಗಿದ್ದ ಕೆ.ಎ.ಸೆಂಗೋಟಯ್ಯನ್ ಅವರು ಗುರುವಾರ ತಮಿಳಿಗ ವೆಟ್ರಿ ಕಳಗಂ (ಟಿವಿಕೆ) ಮುಖ್ಯಸ್ಥ, ಖ್ಯಾತ ನಟ ವಿಜಯ್ ಅವರನ್ನು ಭೇಟಿಯಾಗಿ ಪಕ್ಷಕ್ಕೆ ಸೇರ್ಪಡೆಯಾದರು. ಬುಧವಾರವಷ್ಟೇ ಅವರು ತಮ್ಮ ಶಾಸಕ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದರು.

ಮಾಜಿ ಸಂಸದೆ ವಿ.ಸತ್ಯಭಾಮ ಜೊತೆಗೂಡಿ ತಮ್ಮ ಬೆಂಬಲಿಗರ ಜೊತೆಗೆ ಇಲ್ಲಿನ ಪನೈಯೂರ್‌ನಲ್ಲಿರುವ ಪಕ್ಷದ ಕೇಂದ್ರ ಕಚೇರಿಯಲ್ಲಿ ಟಿವಿಕೆ ಸೇರಿದರು.

ಸೆಂಗೋಟಯ್ಯನ್ ಅವರ ನಿರ್ಧಾರದಿಂದ ನಮ್ಮ ಮೈತ್ರಿಕೂಟಕ್ಕೆ ಯಾವುದೇ ತೊಂದರೆಯಾಗುವುದಿಲ್ಲ. ಎಷ್ಟು ಮೈತ್ರಿಕೂಟ ರಚನೆಯಾಗುತ್ತದೆಯೋ ಎಂಬುದು ಮುಖ್ಯವಲ್ಲ, 2026ರಲ್ಲಿ ನಮ್ಮ ಮೈತ್ರಿಕೂಟವೇ ಅಧಿಕಾರ ಹಿಡಿಯಲಿದೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನೈನಾರ್ ನಾಗೇಂದ್ರನ್ ಹೇಳಿದರು.

ರೈತರಿಗೆ ₹1033 ಕೋಟಿ

ಒಂದನೇ ಪುಟದಿಂದ...

ಅಲ್ಲದೇ 'ಮುಖ್ಯವಾಗಿ ತೊಗರಿ 5.36 ಲಕ್ಷ ಹೆಕ್ಟೇರ್, ಹೆಸರು ಕಾಳು 2.63 ಲಕ್ಷ ಹೆಕ್ಟೇರ್, ಹತ್ತಿ 2.68 ಲಕ್ಷ ಹೆಕ್ಟೇರ್ ಹಾಗೂ ಮೆಕ್ಕೆಜೋಳ 1.21 ಲಕ್ಷ ಹೆಕ್ಟೇರ್ ಹಾನಿಯಾಗಿರುವುದು ಜಂಟಿ ಸಮೀಕ್ಷೆಯಲ್ಲಿ ದೃಢಪಟ್ಟಿತ್ತು' ಎಂದರು.

ಎಸ್‌ಡಿಆರ್‌ಎಫ್ ಮಾನದಂಡಗಳ ಪ್ರಕಾರ ಗರಿಷ್ಠ ಎರಡು ಹೆಕ್ಟೇರ್‌ಗೆ ಸೀಮಿತವಾಗಿ 14.24 ಲಕ್ಷ ರೈತರಿಗೆ ₹1,218.03 ಕೋಟಿ ಪರಿಹಾರ ವಿತರಿಸಲಾಗಿದೆ. ಈಗ ನೀಡುತ್ತಿರುವ ಹೆಚ್ಚುವರಿ ಪರಿಹಾರ ₹1,033.60 ಕೋಟಿ ಸೇರಿ ಒಟ್ಟು ₹2,251.63 ಕೋಟಿ ನೀಡಿದಂತಾಗುತ್ತದೆ.

ಒಂದು ಹೆಕ್ಟೇರ್‌ಗೆ ಎಷ್ಟು ಪರಿಹಾರ

₹17,000 ಮಳೆಯಾಶ್ರಿತ ಬೆಳೆಗೆ

₹25,500 ನೀರಾವರಿ ಬೆಳೆಗೆ

₹31,000 ಬಹು ಬೆಳೆ ಜಮೀನುಗಳಿಗೆ

ಬೆಳೆ ಹಾನಿ ಪರಿಶೀಲನೆಗೆ ಕೇಂದ್ರ ತಂಡ

ಬೆಳೆ ಹಾನಿ ಪರಿಶೀಲಿಸಲು ಕೇಂದ್ರ ಸರ್ಕಾರ ಅಂತರ ಸಚಿವಾಲಯ ತಂಡವನ್ನು ರಚಿಸಿದ್ದು, ಕರ್ನಾಟಕಕ್ಕೆ ಶೀಘ್ರ ಭೇಟಿ ನೀಡಿ, ಪರಿಶೀಲನೆ ನಡೆಸಲಿದೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಧಾನಮಂತ್ರಿ ಅವರನ್ನು ಭೇಟಿ ಮಾಡಿ ಬೆಳೆಹಾನಿ ಪರಿಹಾರವಾಗಿ ರಾಜ್ಯಕ್ಕೆ ನೀಡಬೇಕಾದ ಬಾಕಿ ಇರುವ ₹614.90 ಕೋಟಿ, ಹಾನಿಗೊಳಗಾದ ಆಸ್ತಿಗಳ ಪುನರ್‌ನಿರ್ಮಾಣಕ್ಕೆ ₹1,521.67 ಕೋಟಿ ಬಿಡುಗಡೆ ಮಾಡುವಂತೆ ಮನವಿ ಸಲ್ಲಿಸಿದ್ದಾರೆ ಎಂದರು.

ಧಾರವಾಡ, ಗದಗ ಮತ್ತು ಹಾವೇರಿ ಜಿಲ್ಲೆಗಳಲ್ಲಿ ಬೆಳೆ ಕೊಯ್ಲಿನ ಹಂತಕ್ಕೆ ಬಂದಾಗ ಭಾರಿ ಮಳೆಯಿಂದ ಹೆಚ್ಚಿನ ಹಾನಿ ಸಂಭವಿಸಿದೆ. ಕೃಷ್ಣಾ ಮತ್ತು ಭೀಮಾ ಜಲಾನಯನ ಪ್ರದೇಶಗಳಲ್ಲಿ ನಿರಂತರ ಒಳ ಹರಿವು ಹೆಚ್ಚಳದಿಂದ ಕಲಬುರಗಿ, ಯಾದಗಿರಿ ಮತ್ತು ಬೀದರ ಜಿಲ್ಲೆಗಳಲ್ಲಿ ತೊಗರಿ ಮತ್ತು ಹತ್ತಿ ಬೆಳೆಗಳು ನಷ್ಟವಾಗಿವೆ ಎಂದು ಮಾಹಿತಿ ನೀಡಿದರು.

ಬಹುಪತ್ನಿತ್ವ ನಿಷೇಧ ಮಸೂದೆಗೆ ಒಪ್ಪಿಗೆ

ಗುವಾಹಟಿ (ಪಿಟಿಐ): ಬಹು ಪತ್ನಿತ್ವ ನಿಷೇಧ ಮಸೂದೆಯನ್ನು ಅಸ್ಸಾಂ ವಿಧಾನಸಭೆ ಗುರುವಾರ ಅಂಗೀಕರಿಸಿದೆ.

ಬಹುಪತ್ನಿತ್ವವನ್ನು ಅಪರಾಧವೆಂದು ಪರಿಗಣಿಸಿ ಗರಿಷ್ಠ 10 ವರ್ಷಗಳ ಜೈಲು ಶಿಕ್ಷೆ ವಿಧಿಸುವ ಅವಕಾಶವನ್ನು ಮಸೂದೆಯಲ್ಲಿ ಕಲ್ಪಿಸಲಾಗಿದೆ.

ಈ ಮಸೂದೆಯು ಇಸ್ಲಾಂಗೆ ವಿರುದ್ಧವಾಗಿಲ್ಲ ಎಂದು ಸ್ಪಷ್ಟಪಡಿಸಿರುವ ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ, ಹಿಂದೂಗಳು, ಮುಸ್ಲಿಮರು, ಕ್ರೈಸ್ತರು ಮತ್ತು ಇತರೆ ಎಲ್ಲ ಸಮುದಾಯದವರು ಈ ಮಸೂದೆಯ ವ್ಯಾಪ್ತಿಯಡಿ ಬರಲಿದ್ದಾರೆ ಎಂದರು.

ಮುಂದಿನ ವರ್ಷ ನಡೆಯಲಿರುವ ಅಸ್ಸಾಂ ವಿಧಾನಸಭೆ ಚುನಾವಣೆಯಲ್ಲಿ ಅಧಿಕಾರಕ್ಕೆ ಬಂದು ಮುಖ್ಯಮಂತ್ರಿಯಾದರೆ, ರಾಜ್ಯದಲ್ಲಿ ಏಕರೂಪದ ನಾಗರಿಕ ಸಂಹಿತೆ (ಯುಸಿಸಿ) ಜಾರಿಗೊಳಿಸುವುದಾಗಿ ಹಿಮಂತ ಹೇಳಿದರು.

'ವಂಚಿಸಿ ಮದುವೆಯಾಗುವರ ವಿರುದ್ಧದ ಮಸೂದೆಯನ್ನು ಫೆಬ್ರುವರಿ ಅಂತ್ಯದಲ್ಲಿ ಜಾರಿಗೆ ತರುವ ಯೋಜನೆ ಇದೆ ಎಂದು ಅವರು ಹೇಳಿದರು.

ಮಂಜು: ವಿಮಾನ ಹಾರಾಟದಲ್ಲಿ ವ್ಯತ್ಯಯ

ದೇವನಹಳ್ಳಿ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಗುರುವಾರ ಮುಂಜಾನೆ 3ರಿಂದ 8.30ರವರೆಗೂ ದಟ್ಟ ಮಂಜು ಆವರಿಸಿದ ಕಾರಣದಿಂದಾಗಿ ಒಟ್ಟು 48 ವಿಮಾನಗಳ ಕಾರ್ಯಾಚರಣೆಯಲ್ಲಿ ವ್ಯತ್ಯಯ ಉಂಟಾಗಿದೆ ಎಂದು ಮೂಲಗಳು ತಿಳಿಸಿವೆ.

ಕಾಶ್ಮೀರ ಕಣಿವೆಯಾದ್ಯಂತ ತೀವ್ರ ಶೋಧ

ಶ್ರೀನಗರ (ಪಿಟಿಐ): ನಿಷೇಧಿತ ಜಮಾತ್-ಎ-ಇಸ್ಲಾಮಿ (ಜೆಇಐ) ಸಂಘಟನೆಯ ವಿರುದ್ಧದ ಕಾರ್ಯಾಚರಣೆಯ ಭಾಗವಾಗಿ ಪೊಲೀಸರು ಗುರುವಾರ ಕಾಶ್ಮೀರ ಕಣಿವೆಯಾದ್ಯಂತ ಹಲವು ಸ್ಥಳಗಳಲ್ಲಿ ಶೋಧ ಕಾರ್ಯ ನಡೆಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅನಂತನಾಗ್, ಪುಲ್ವಾಮಾ, ಬಡ್ಗಾಮ್, ಕುಲ್ಗಾಮ್ ಮತ್ತು ಕುಪ್ವಾಡ ಜಿಲ್ಲೆಗಳಲ್ಲಿ ಶೋಧ ಕಾರ್ಯ ನಡೆದಿದೆ. ಭಯೋತ್ಪಾದಕ ಜಾಲ ಮತ್ತು ಅದಕ್ಕೆ ಬೆಂಬಲ ನೀಡುವ ವ್ಯವಸ್ಥೆಗಳನ್ನು ಭೇದಿಸುವ ಪ್ರಯತ್ನಗಳ ಭಾಗವಾಗಿ ಜೆಇಐ ಸದಸ್ಯರು ಹಾಗೂ ಅವರ ಸಹಚರರಿಗೆ ಸೇರಿದ ಮನೆಗಳು, ಇತರ ತಾಣಗಳನ್ನು ಗುರಿಯಾಗಿಸಿ ಈ ದಾಳಿ ನಡೆದಿದೆ ಎಂದಿದ್ದಾರೆ.

ಜೆಇಐನ ಕೆಲವು ಸದಸ್ಯರು ದೇಶವಿರೋಧಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ ಎಂದು ಖಚಿತ ಗುಪ್ತಚರ ಮಾಹಿತಿ ಆಧಾರದಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಕೆಲವು ಸದಸ್ಯರ ಮನೆಗಳಿಂದ ಎಲೆಕ್ಟ್ರಾನಿಕ್ ಸಾಧನಗಳು, ದಾಖಲೆಗಳು ಮತ್ತು ಪುಸ್ತಕಗಳು ಸಿಕ್ಕಿವೆ. ವಿವರವಾದ ಪರಿಶೀಲನೆಗಾಗಿ ಎಲ್ಲಾ ವಸ್ತುಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಹೇಳಿದ್ದಾರೆ.

ಕಾನೂನುಬಾಹಿರ ಚಟುವಟಿಕೆಗಳು ನಡೆಯುತ್ತಿರುವ ಶಂಕೆಯ ಮೇರೆಗೆ ಹಂದ್ವಾಢದ ವಾರಿಪೋರಾದಲ್ಲಿರುವ ಜಾಮಿಯಾ ಇಸ್ಲಾಮಿಯಾ ಸಂಸ್ಥೆಯ ಮೇಲೂ ದಾಳಿ ನಡೆಸಲಾಗಿದೆ.



ಪೊಲೀಸರು ಮತ್ತು ಸಿಆರ್‌ಪಿಎಫ್ ಸಿಬ್ಬಂದಿ ಪುಲ್ವಾಮಾದಲ್ಲಿ ಜೆಇಐ ಸದಸ್ಯನ ಮನೆಯಲ್ಲಿ ಶೋಧ ನಡೆಸಿದರು ಪಿಟಿಐ ಚಿತ್ರ

ಎನ್‌ಐಎ ಕಸ್ಟಡಿಗೆ ಆರೋಪಿ


ನವದೆಹಲಿ: ಕೆಂಪು ಕೋಟೆ ಬಳಿ ನಡೆದ ಕಾರು ಸ್ಫೋಟಕ್ಕೆ ಸಂಬಂಧಿಸಿದಂತೆ ಆತ್ಮಾಹುತಿ ಬಾಂಬರ್ ಡಾ.ಉಮರ್ ನಬಿಗೆ ಆಶ್ರಯ ನೀಡಿದ ಆರೋಪದ ಮೇಲೆ ಫರೀದಾಬಾದ್‌ನ ನಿವಾಸಿ ಶೋಯಬ್ ಎಂಬಾತನನ್ನು ದೆಹಲಿಯ ನ್ಯಾಯಾಲಯ ಹತ್ತು ದಿನಗಳವರೆಗೆ ಎನ್‌ಐಎ ಕಸ್ಟಡಿಗೆ ಒಪ್ಪಿಸಿದೆ.

ಹರಿಯಾಣದ ಫರೀದಾಬಾದ್‌ನ ಧೌಜ್‌ನಲ್ಲಿ ಬಂಧಿಸಿದ ಶೋಯಬ್‌ನನ್ನು ಅಧಿಕಾರಿಗಳು ಬಿಗಿ ಭದ್ರತೆಯ ನಡುವೆ ಪಟಿಯಾಲಾ ಹೌಸ್ ನ್ಯಾಯಾಲಯಕ್ಕೆ ಹಾಜರುಪಡಿಸಿದರು. ಬಾಂಬ್ ಸ್ಫೋಟ ಘಟನೆಗೂ ಮುನ್ನ ಉಮರ್ ನಬಿಗೆ ಆಶ್ರಯ ನೀಡಿದ ಆರೋಪದಲ್ಲಿ ಶೋಯಬ್‌ನನ್ನು ಧೌಜ್‌ನಲ್ಲಿರುವ ನಿವಾಸದಲ್ಲಿ ಬಂಧಿಸಲಾಯಿತು ಎಂದು ಎನ್‌ಐಎ ಅಧಿಕಾರಿಯೊಬ್ಬರು ತಿಳಿಸಿದರು.

ಜಸೀರ್ ಕಸ್ಟಡಿ ಏಳು ದಿನ ವಿಸ್ತರಣೆ: ದೆಹಲಿಯ ಕೆಂಪುಕೋಟೆ ಬಳಿಯ ಕಾರು ಸ್ಫೋಟ ಪ್ರಕರಣದ ಆರೋಪಿ ಜಸೀರ್ ಬಿಲಾಲ್ ವಾನಿಯ ಎನ್‌ಐಎ ಕಸ್ಟಡಿ ಅವಧಿಯನ್ನು 7 ದಿನಗಳವರೆಗೆ ವಿಸ್ತರಿಸಿ ದೆಹಲಿ ನ್ಯಾಯಾಲಯ ಆದೇಶಿಸಿದೆ. ಈ ಹಿಂದೆ ವಿಧಿಸಲಾಗಿದ್ದ 10 ದಿನಗಳ ಕಸ್ಟಡಿ ಅವಧಿ ಗುರುವಾರ ಮುಕ್ತಾಯವಾದ ಕಾರಣ ಆತನನ್ನು ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಯಿತು.

ಅಭಿಮತ ವಿಭಾಗ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಬಡವನಾದರೂ ತೃಪ್ತಿ ಇರುವವನೇ ಶ್ರೀಮಂತ.
–ವಿಲಿಯಂ ಷೇಕ್ಸ್‌ಪಿಯರ್

ಸಂಪಾದಕೀಯ

ಶಾಲಾಮಕ್ಕಳಿಗೆ ಬೆಳಗಿನ ತಿಂಡಿ ಅಪಾರ ಸಾಧ್ಯತೆಗಳ ಪ್ರಸ್ತಾವ

ಶಾಲೆಗಳಲ್ಲಿ ಈಗ ಜಾರಿಯಲ್ಲಿ ಇರುವ ಮಧ್ಯಾಹ್ನದ ಬಿಸಿಯೂಟ ಒದಗಿಸುವ ಪ್ರಧಾನ ಮಂತ್ರಿ ಪೋಷಣ ಯೋಜನೆಯಡಿ ಬೆಳಗಿನ ತಿಂಡಿಯನ್ನೂ ಸೇರಿಸುವ ಸ್ವಾಗತಾರ್ಹ ಪ್ರಸ್ತಾವವನ್ನು ರಾಜಸ್ಥಾನ, ಕೇರಳ, ಛತ್ತೀಸಗಢ, ಗುಜರಾತ್, ದೆಹಲಿ ಸೇರಿದಂತೆ ಕೆಲವು ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳು ಕೇಂದ್ರ ಸರ್ಕಾರದ ಮುಂದೆ ಇರಿಸಿವೆ. ಬಿಸಿಯೂಟ ಯೋಜನೆಯು ಸರ್ಕಾರಿ ಶಾಲೆಗಳ ಮಕ್ಕಳಿಗೆ ಮಧ್ಯಾಹ್ನದ ಊಟವನ್ನು ಒದಗಿಸುತ್ತಿದೆ. ಈ ಯೋಜನೆಯನ್ನು 12ನೇ ತರಗತಿಯವರೆಗೂ ವಿಸ್ತರಣೆ ಮಾಡಬೇಕು ಎಂಬ ಪ್ರಸ್ತಾವವನ್ನು ಕರ್ನಾಟಕ ಸೇರಿದಂತೆ ಕೆಲವು ರಾಜ್ಯಗಳು ಕೇಂದ್ರದ ಮುಂದಿರಿಸಿವೆ. ಮಧ್ಯಾಹ್ನದ ಬಿಸಿಯೂಟ ಯೋಜನೆಯು ಬೆಳಗಿನ ತಿಂಡಿಯನ್ನೂ ಒಳಗೊಳ್ಳಬೇಕು ಎಂಬ ಶಿಫಾರಸು ಹೊಸದೇನೂ ಅಲ್ಲ. ಈ ಪ್ರಸ್ತಾವ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ (ಎನ್‌ಇಪಿ) ಇದೆ. ಪೌಷ್ಟಿಕಾಂಶಯುಕ್ತ ಬೆಳಗಿನ ತಿಂಡಿಯು ಮಕ್ಕಳಿಗೆ ಹೆಚ್ಚು ಅನುಕೂಲಕರವಾಗುತ್ತದೆ ಎಂಬ ವಾದ ಇದೆ. 2021-22ರಲ್ಲಿ ಕೇಂದ್ರ ಶಿಕ್ಷಣ ಸಚಿವಾಲಯವು ಪ್ರಧಾನ ಮಂತ್ರಿ ಪೋಷಣ ಯೋಜನೆಯಲ್ಲಿ ತಿಂಡಿಯನ್ನೂ ಸೇರಿಸಬೇಕು ಎಂಬ ಪ್ರಸ್ತಾವ ಸಿದ್ಧಪಡಿಸಿತ್ತು. ಆದರೆ, ಇದನ್ನು ಕೇಂದ್ರ ಹಣಕಾಸು ಸಚಿವಾಲಯವು ಒಪ್ಪಿರಲಿಲ್ಲ. ಶಿಕ್ಷಣಕ್ಕೆ ಸಂಬಂಧಿಸಿದ ಸಂಸತ್ತಿನ ಸ್ಥಾಯಿ ಸಮಿತಿಯು ತನ್ನ ವರದಿಯೊಂದರಲ್ಲಿ ಈ ಪ್ರಸ್ತಾವದ ಕುರಿತು ಉಲ್ಲೇಖಿಸಿದೆ, ವಿಷಯವನ್ನು ಪರಿಗಣಿಸಲಾಗಿದೆ ಎಂದು ಹೇಳಿದೆ.


ಮಕ್ಕಳ ಆರೋಗ್ಯದ ಕಾಳಜಿಗಾಗಿ ಅವರಿಗೆ ಪೌಷ್ಟಿಕಾಂಶಯುಕ್ತ ಆಹಾರ ನೀಡಲು ನೀತಿಯೊಂದನ್ನು ರೂಪಿಸಿ, ಅದನ್ನು ಅನುಷ್ಠಾನಕ್ಕೆ ತರುವ ವಿಚಾರದಲ್ಲಿ ಭಾರತದ ಮಧ್ಯಾಹ್ನದ ಬಿಸಿಯೂಟ ಯೋಜನೆಯು ಒಂದು ಮೈಲಿಗಲ್ಲು ಎಂಬುದರಲ್ಲಿ ಎರಡು ಮಾತಿಲ್ಲ. ಈ ಯೋಜನೆಯಿಂದಾಗಿ ಮಕ್ಕಳ ಮೇಲೆ ಹಾಗೂ ಸಮಾಜದ ಮೇಲೆ ಆಗಿರುವ ಧನಾತ್ಮಕ ಪರಿಣಾಮವು ಅಪಾರ. ಯೋಜನೆಯ ಭಾಗವಾಗಿ ತಿಂಡಿಯನ್ನೂ ನೀಡುವುದರಿಂದ ಬಹಳಷ್ಟು ಮಕ್ಕಳ ನಿತ್ಯದ ಪೌಷ್ಟಿಕಾಂಶದ ಅಗತ್ಯವನ್ನು ಪೂರೈಸಲು ಸಾಧ್ಯವಾಗುತ್ತದೆ. 2025ರ 'ವಿಶ್ವ ಹಸಿವಿನ ಸೂಚ್ಯಂಕ'ದಲ್ಲಿ 123 ದೇಶಗಳ ಪೈಕಿ ಭಾರತವು 102ನೆಯ ಸ್ಥಾನದಲ್ಲಿದೆ. ಪರಿಸ್ಥಿತಿ ಹೀಗಿರುವಾಗ ಈ ಯೋಜನೆಯ ಭಾಗವಾಗಿ ಬೆಳಗಿನ ತಿಂಡಿಯನ್ನು ಮಕ್ಕಳಿಗೆ ನೀಡುವುದರಿಂದ ದೇಶದ ಕೋಟ್ಯಂತರ ಬಡ ಕುಟುಂಬಗಳಿಗೆ ಆಗುವ ಪ್ರಯೋಜನವನ್ನು ಪದಗಳಲ್ಲಿ ವಿವರಿಸುವುದು ಸುಲಭದಲ್ಲಿ ಆಗುವ ಕೆಲಸವಲ್ಲ. ಭಾರತದಲ್ಲಿ ಮಕ್ಕಳಲ್ಲಿ ಪೌಷ್ಟಿಕಾಂಶದ ಕೊರತೆ, ದೈಹಿಕ ಬೆಳವಣಿಗೆಯ ಕೊರತೆಯ ಸಮಸ್ಯೆಯು ಬಹಳ ತೀವ್ರವಾಗಿದೆ. ಮಕ್ಕಳಿಗೆ ಬೆಳಗಿನ ತಿಂಡಿಯನ್ನು ಕೊಡುವ ಪ್ರಸ್ತಾವವನ್ನು ಅಗತ್ಯವಿರುವ ಜನವರ್ಗದ ಕಲ್ಯಾಣಕ್ಕೆ ರೂಪಿಸುವ ಯೋಜನೆಯಾಗಿ ಕಾಣಬೇಕು; ಅಂತಹ ಒಂದು ಯೋಜನೆಯ ಪ್ರಯೋಜನವು ಸರ್ಕಾರಗಳು ನೀಡುವ ಹಲವು ಕೊಡುಗೆಗಳ ಒಟ್ಟು ಮೊತ್ತಕ್ಕಿಂತ ಹೆಚ್ಚು ಮೌಲ್ಯಯುತವಾಗಿರುತ್ತದೆ.



ಶಾಲಾ ಮಕ್ಕಳಿಗೆ ಬೆಳಗಿನ ಉಪಾಹಾರ ನೀಡುವ ಕೆಲವು ರಾಜ್ಯಗಳ ಪ್ರಸ್ತಾವವೊಂದು ಕೇಂದ್ರ ಸರ್ಕಾರದ ಮುಂದಿದೆ. ಅದು ಜಾರಿಗೆ ಬಂದಲ್ಲಿ ಆಗಬಹುದಾದ ಪರಿಣಾಮ ಅಸಾಧಾರಣ.

ಬೆಳಗಿನ ತಿಂಡಿಯನ್ನು ಕೊಡಲು ಅಂದಾಜು ₹4,000 ಕೋಟಿ ವೆಚ್ಚವಾಗುತ್ತದೆ ಎಂದು ಕೇಂದ್ರ ಶಿಕ್ಷಣ ಸಚಿವಾಲಯವು ಲೆಕ್ಕಹಾಕಿದೆ ಎಂಬ ವರದಿಗಳಿವೆ. ದೇಶದ ವಾರ್ಷಿಕ ಬಜೆಟ್ ವೆಚ್ಚದ ಮೊತ್ತವು ₹50 ಲಕ್ಷ ಕೋಟಿಗೂ ಹೆಚ್ಚು. ಹೀಗಿರುವಾಗ ಬೆಳಗಿನ ತಿಂಡಿಗೆ ಬೇಕಾಗುವ ಮೊತ್ತವು ನಗಣ್ಯ. ಬೆಳಗಿನ ತಿಂಡಿಯ ಹೆಸರಿನಲ್ಲಿ ಮಕ್ಕಳ ಭವಿಷ್ಯದ ಮೇಲೆ ಮಾಡುವ ಹೂಡಿಕೆಯು, ದೇಶದಲ್ಲಿ ಮುಂದೆ ಬಹಳ ದೊಡ್ಡದಾದ ಹಾಗೂ ಪರಿವರ್ತನೀಯ ಪ್ರಯೋಜನವನ್ನು ತಂದುಕೊಡುವ ಸಾಧ್ಯತೆಯನ್ನು ಹೊಂದಿದೆ. ಬೆಳಗಿನ ತಿಂಡಿಯನ್ನು ಒದಗಿಸಲು ಅಗತ್ಯವಿರುವ ಮಾನವ ಸಂಪನ್ಮೂಲ ಹಾಗೂ ಇತರ ಮೂಲಸೌಕರ್ಯವು ಶಾಲೆಗಳಲ್ಲಿ ಇವೆ. ಹೀಗಾಗಿ ಪ್ರಸ್ತಾವವನ್ನು ಕಾರ್ಯರೂಪಕ್ಕೆ ತರಲು ಹೆಚ್ಚು ಕಷ್ಟ ಆಗಲಿಕ್ಕಿಲ್ಲ. ತಮಿಳುನಾಡು ಮತ್ತು ತೆಲಂಗಾಣದ ಶಾಲೆಗಳು ಮಕ್ಕಳಿಗೆ ತಿಂಡಿ ನೀಡಲು ಆರಂಭಿಸಿವೆ. ಸ್ಥಳೀಯ ಸಂಸ್ಥೆಗಳು, ಶಿಕ್ಷಕ–ಪೋಷಕರ ಸಂಘಗಳು, ಎನ್‌ಜಿಒಗಳು ಕೇರಳದ ಕೆಲವೆಡೆ ಇಂತಹ ಸೌಲಭ್ಯ ನೀಡುತ್ತಿವೆ. ಪ್ರಧಾನ ಮಂತ್ರಿ ಪೋಷಣ ಯೋಜನೆಯ ಭಾಗವಾಗಿ ಕರ್ನಾಟಕದಲ್ಲಿ ಮಕ್ಕಳಿಗೆ ಹಾಲು ಕೊಡಲಾಗುತ್ತಿದೆ, ಆಂಧ್ರಪ್ರದೇಶದಲ್ಲಿ ರಾಗಿ ಮಾಲ್ಟ್ ನೀಡಲಾಗುತ್ತಿದೆ. ಇವನ್ನೆಲ್ಲ ಗಮನಿಸಿದಾಗ, ಮಕ್ಕಳಿಗೆ ಬೆಳಗಿನ ತಿಂಡಿ ಕೊಡುವುದನ್ನು ಶಾಲಾ ಶಿಕ್ಷಣ ವ್ಯವಸ್ಥೆಯ ಭಾಗವಾಗಿಸುವುದರ ಅಗತ್ಯ ಎದ್ದು ಕಾಣುತ್ತಿದೆ.

ಭಿನ್ನಮತವೆಂಬುದು ಬೆಂಕಿ ಕಣಾ!



ಅನುಸಂಧಾನ
ರವೀಂದ್ರ ಭಟ್ಟ

ರಾಷ್ಟ್ರಕವಿ ಕುವೆಂಪು ಅವರು, 'ಕರ್ನಾಟಕ ಎಂಬುದೇನು ಹೆಸರೆ ಬರಿಯ ಮಣ್ಣಿಗೆ, ಮಂತ್ರ ಕಣಾ, ಶಕ್ತಿ ಕಣಾ, ತಾಯಿ ಕಣಾ ದೇವಿ ಕಣಾ, ಬೆಂಕಿ ಕಣಾ ಸಿಡಿಲು ಕಣಾ' ಎಂದು ಹೇಳಿದ್ದರು. ಕರ್ನಾಟಕದ ರಾಜಕೀಯ ಇತಿಹಾಸವನ್ನು ನೋಡಿದರೆ, ಮತದಾರರೂ ಹೆಸರಿಗೆ ಮಾತ್ರ ಮತದಾರರಲ್ಲ; ಅವರೂ ಒಂದು ಶಕ್ತಿ; ಅವರೂ ಒಂದು ಬೆಂಕಿ ಎನ್ನುವುದನ್ನು ಸಾಬೀತುಪಡಿಸುತ್ತಲೇ ಇದ್ದಾರೆ. ಆದರೆ, ನಮ್ಮ ರಾಜಕಾರಣಿಗಳು ಇತಿಹಾಸದಿಂದ ಪಾಠವನ್ನು ಕಲಿಯುತ್ತಲೇ ಇಲ್ಲ. ಇತಿಹಾಸವನ್ನು ತಿಳಿಯದವ ಇತಿಹಾಸವನ್ನು ಸೃಷ್ಟಿಸಲಾರ ಎಂದು ಭಾಷಣ ಮಾಡುವ ಕರ್ನಾಟಕದ ರಾಜಕಾರಣಿಗಳು ಮತದಾರರ ಮನದಾಳವನ್ನು ಅರಿಯದೆ ಮುಗ್ಗರಿಸಿ ಬೀಳುತ್ತಲೇ ಇದ್ದಾರೆ. ರಾಜಕೀಯದಲ್ಲಿ ಭಿನ್ನಮತ ಎನ್ನುವುದು ಬೆಂಕಿಯ ಕಣ. ಅದು ಮೊದಲು ತನ್ನನ್ನು ಸುಡುತ್ತದೆ. ನಂತರ ಇತರರನ್ನು ಸುಡುತ್ತದೆ. ಇದು ಸಾಬೀತಾದ ಸತ್ಯ. ಆದರೂ ನಮ್ಮ ರಾಜಕಾರಣಿಗಳು ಬೆಂಕಿಯನ್ನೇ ಅರಸುತ್ತಾ ಹೋಗುತ್ತಾರೆ. ಈಗಲೂ ರಾಜ್ಯದಲ್ಲಿ ಭಿನ್ನಮತದ ಬೆಂಕಿಯ ಜ್ವಾಲೆ ಹರಡತೊಡಗಿದೆ. ಅದು ಯಾರನ್ನು ಸುಡುತ್ತದೆ ಎನ್ನುವುದೂ ಗೊತ್ತಿರುವ ವಿಚಾರ.

ಭಿನ್ನಮತದ ಜ್ವಾಲೆ ಹರಡಿದ ಬಹುತೇಕ ಎಲ್ಲ ಸಂದರ್ಭಗಳಲ್ಲಿಯೂ ಆಯಾ ಪಕ್ಷಗಳು ಅಧಿಕಾರ ಕಳೆದುಕೊಂಡಿವೆ. ಪದೇ ಪದೇ ಮುಖ್ಯಮಂತ್ರಿ ಬದಲಾಯಿಸಿದರೆ ಕರ್ನಾಟಕದ ಜನರು ಇಷ್ಟಪಡುವುದಿಲ್ಲ ಎನ್ನುವುದು 1983ರ ಚುನಾವಣೆಯಲ್ಲಿ ಮೊದಲ ಬಾರಿಗೆ ಗೊತ್ತಾಯಿತು. ಉತ್ತಮ ಆಡಳಿತ ನೀಡಿದರೆ ಎಂತಹ ಪ್ರಬಲವಾದ ಅಲೆ ಬಂದರೂ ಜನ ಅದನ್ನು ಲೆಕ್ಕಿಸುವುದಿಲ್ಲ ಎನ್ನುವುದಕ್ಕೆ 1978ರ ವಿಧಾನಸಭಾ ಚುನಾವಣೆ ಸಾಕ್ಷಿಯಾಗಿತ್ತು. ದೇಶದಲ್ಲಿ ತುರ್ತು ಪರಿಸ್ಥಿತಿಯ ನಂತರ 1977ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಹೀನಾಯ ಸೋಲು ಕಂಡಿತ್ತು. ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ಜನತಾಪಕ್ಷ ರಾಜ್ಯದಲ್ಲಿಯೂ ಅಧಿಕಾರಕ್ಕೆ ಬಂದೇಬಿಟ್ಟಿತು ಎಂಬ ಭಾವನೆ ಇತ್ತು. ಆದರೆ, ದೇವರಾಜ ಅರಸು ಅವರ ಜನಪರ ಆಡಳಿತ ಮೆಚ್ಚಿಕೊಂಡಿದ್ದ ಮತದಾರರು 1978ರ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ 149 ಸ್ಥಾನಗಳನ್ನು ನೀಡಿದರು. ಉತ್ತಮ ಆಡಳಿತ ನೀಡಿದರೆ ಜನ ಕೈಬಿಡುವುದಿಲ್ಲ ಎನ್ನುವುದಕ್ಕೆ ಇದು ಮೊದಲ ನಿದರ್ಶನವಾಗಿತ್ತು. ನಂತರದ ದಿನಗಳಲ್ಲಿ ದೇವರಾಜ ಅರಸು ಅವರನ್ನು ಪದಚ್ಯುತಗೊಳಿಸಿ ಗುಂಡೂರಾವ್ ಅವರನ್ನು ಮುಖ್ಯಮಂತ್ರಿ ಮಾಡಲಾಯಿತು. ಇದನ್ನು ಮತದಾರರು ಮೆಚ್ಚಲಿಲ್ಲ. 1983ರ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ 149 ಸ್ಥಾನದಿಂದ 85 ಸ್ಥಾನಗಳಿಗೆ ಕುಸಿಯಿತು.

1984ರಲ್ಲಿ ಇಂದಿರಾ ಗಾಂಧಿ ಅವರ ಹತ್ಯೆ ಆಯಿತು. ಆ ನಂತರ ನಡೆದ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭೂತಪೂರ್ವ ಗೆಲುವು ಪಡೆಯಿತು. ರಾಜ್ಯದಲ್ಲಿಯೂ 28 ಕ್ಷೇತ್ರಗಳ ಪೈಕಿ 24ರಲ್ಲಿ ಕಾಂಗ್ರೆಸ್ ಜಯಗಳಿಸಿತು. ರಾಜ್ಯದಲ್ಲಿ ಆಡಳಿತದಲ್ಲಿದ್ದ ಜನತಾ ಪಕ್ಷ ಕೇವಲ ನಾಲ್ಕು ಸ್ಥಾನ ಗಳಿಸಿತು. ಬಹುಮತದ ಕೊರತೆಯ ನಡುವೆಯೂ ಉತ್ತಮ ಆಡಳಿತ ನೀಡಿದ್ದ ರಾಮಕೃಷ್ಣ ಹೆಗಡೆ ವಿಧಾನಸಭೆಯನ್ನು ವಿಸರ್ಜಿಸಿ ಚುನಾವಣೆ ಘೋಷಿಸಿದರು. 1985ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಜನತಾ ಪಕ್ಷ 139 ಸ್ಥಾನಗಳಲ್ಲಿ ಜಯಗಳಿಸಿ ಅಧಿಕಾರ ಉಳಿಸಿಕೊಂಡಿತು. ಉತ್ತಮ ಆಡಳಿತಕ್ಕೆ ಮತದಾರ ಮನ್ನಣೆ ನೀಡುತ್ತಾನೆ ಎನ್ನುವುದಕ್ಕೆ ಎರಡನೇ ಉದಾಹರಣೆ ಇದು. ನಂತರದ ದಿನಗಳಲ್ಲಿ ಆಡಳಿತಾರೂಢ ಜನತಾ ಪಕ್ಷ ಅಂತಃಕಲಹದ ಬೀಡಾಯಿತು, ಹೋಳಾಯಿತು. ಹಗರಣಗಳಲ್ಲಿ ಸಿಲುಕಿದ ಹೆಗಡೆ ಮುಖ್ಯಮಂತ್ರಿ ಸ್ಥಾನ ಕಳೆದುಕೊಂಡರು. ಎಸ್.ಆರ್. ಬೊಮ್ಮಾಯಿ ಮುಖ್ಯಮಂತ್ರಿಯಾದರು. ಅವರಿಗೂ ಭಿನ್ನಮತದ ಕಾಟ ತಪ್ಪಲಿಲ್ಲ. ಇದನ್ನೆಲ್ಲಾ ಗಮನಿಸಿದ ಮತದಾರ 1989ರ ಚುನಾವಣೆಯಲ್ಲಿ ವೀರೇಂದ್ರ ಪಾಟೀಲರ ನೇತೃತ್ವದ ಕಾಂಗ್ರೆಸ್ ಪಕ್ಷಕ್ಕೆ ಭರ್ಜರಿ ಜಯ ತಂದುಕೊಟ್ಟರು. 178 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಜಯ ಗಳಿಸಿತು. ಆಡಳಿತ ಜನತಾ ಪಕ್ಷದ ಬಹುತೇಕ ಅತಿರಥ ಮಹಾರಥರು ಸೋಲು ಅನುಭವಿಸಿದರು. ದೇವೇಗೌಡರ ನೇತೃತ್ವದ ಜನತಾ ಪಕ್ಷ ಗಳಿಸಿದ್ದು 2 ಸ್ಥಾನ. ಹೆಗಡೆ ನೇತೃತ್ವದ ಜನತಾದಳ ಗಳಿಸಿದ್ದು 24 ಸ್ಥಾನ.

> ಇತಿಹಾಸದಿಂದ ರಾಜಕಾರಣಿಗಳು ಪಾಠ ಕಲಿಯುವುದಿಲ್ಲ ಎನ್ನುವುದನ್ನು ಕರ್ನಾಟಕದ ರಾಜಕಾರಣಿಗಳು ಮತ್ತೆ ಮತ್ತೆ ಸಾಬೀತುಪಡಿಸುತ್ತಿದ್ದಾರೆ. ಭಿನ್ನಮತ ಎನ್ನುವ ಬೆಂಕಿಗೆ ಪತಂಗಗಳಂತೆ ತಮ್ಮನ್ನು ಒಡ್ಡಿಕೊಳ್ಳುತ್ತಿದ್ದಾರೆ. ಆ ಬೆಂಕಿ ಅವರನ್ನು ಸುಡುವ ಜೊತೆಗೆ ನಾಡಿನ ಹಿತಕ್ಕೂ ಮಾರಕವಾಗಿದೆ.

178 ಸ್ಥಾನ ಗಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ವೀರೇಂದ್ರ ಪಾಟೀಲರು ಸಹಜವಾಗಿಯೇ ಮುಖ್ಯಮಂತ್ರಿಯಾದರು. ಅನಾರೋಗ್ಯಪೀಡಿತರಾದ ವೀರೇಂದ್ರ ಪಾಟೀಲರನ್ನು ಪದಚ್ಯುತಿಗೊಳಿಸಲಾಯಿತು. ಬಂಗಾರಪ್ಪ ಅವರನ್ನು ಮುಖ್ಯಮಂತ್ರಿ ಮಾಡಲಾಯಿತು. ಬಂಗಾರಪ್ಪ ಅವರಿಗೂ ಭಿನ್ನಮತದ ಕಾಟ ತಪ್ಪಲಿಲ್ಲ. ಅವರನ್ನೂ ಬದಲಾಯಿಸಿ ವೀರಪ್ಪ ಮೊಯ್ಲಿ ಅವರನ್ನು ಮುಖ್ಯಮಂತ್ರಿ ಮಾಡಲಾಯಿತು. ಇದನ್ನು ಮತದಾರರು ಸಹಿಸಲಿಲ್ಲ. 1994ರ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಅತ್ಯಂತ ಹೀನಾಯವಾಗಿ ಸೋಲು ಕಂಡಿತು. ಕರ್ನಾಟಕದ ಚುನಾವಣಾ ಇತಿಹಾಸದಲ್ಲಿಯೇ ಕಾಂಗ್ರೆಸ್ ಪಕ್ಷ ಶೇ 26ರಷ್ಟು ಮತ ಗಳಿಸಿ 34 ಕ್ಷೇತ್ರಗಳಲ್ಲಿ ಜಯಗಳಿಸಿತು. ಅಂದರೆ ವಿಧಾನಸಭೆಯಲ್ಲಿ ಕಾಂಗ್ರೆಸ್ ಪಕ್ಷದ ಬಲ 178ರಿಂದ 34ಕ್ಕೆ ಕುಸಿಯಿತು.

ಇನ್ನು ಮುಂದೆ ಜಗಳವಾಡುವುದಿಲ್ಲ. ಉತ್ತಮ ಆಡಳಿತ ನೀಡುತ್ತೇವೆ. ಭಿನ್ನಮತಕ್ಕೆ ಅವಕಾಶ ನೀಡುವುದಿಲ್ಲ ಎಂದೆಲ್ಲ ಜನತಾದಳದ ಮುಖಂಡರು ನೀಡಿದ್ದ ಭರವಸೆಯನ್ನು ಮೆಚ್ಚಿದ ಮತದಾರರು ಜನತಾದಳಕ್ಕೆ ಪ್ರಚಂಡ ಬಹುಮತ ನೀಡಿದ್ದರು. ಆದರೆ ನಾಯಿಬಾಲ ಡೊಂಕು ಎನ್ನುವ ಹಾಗೆ ಜನತಾದಳ ವಿದಳವಾಯಿತು. 1996ರಲ್ಲಿ ದೇವೇಗೌಡರು ಪ್ರಧಾನಿಯಾದರು. ಇಲ್ಲಿ ಜೆ.ಎಚ್. ಪಟೇಲರು ಮುಖ್ಯಮಂತ್ರಿಯಾದರು. ಮತ್ತೆ ಒಳಜಗಳಗಳು ಆರಂಭವಾದವು. ಮತದಾರರಿಗೆ ಭ್ರಮನಿರಸನವಾಯಿತು. 1999ರ ವಿಧಾನಸಭಾ ಚುನಾವಣೆಯಲ್ಲಿ ಜನತಾದಳಕ್ಕೆ ಮುಟ್ಟಿನೋಡಿಕೊಳ್ಳುವ ಪೆಟ್ಟುಕೊಟ್ಟರು. ಇದೇ ಸಂದರ್ಭದಲ್ಲಿ ಬಿಜೆಪಿ ಬೆಳವಣಿಗೆಯ ಹಾದಿ ಹಿಡಿಯಿತು. ಅದೇ ಮೊದಲ ಬಾರಿಗೆ ಬಿಜೆಪಿ 40 ಸ್ಥಾನಗಳಲ್ಲಿ ಜಯಗಳಿಸಿತು. ಇದೇ ಚುನಾವಣೆಯಲ್ಲಿ ದೇವೇಗೌಡರ ಕುಟುಂಬದ ಎಲ್ಲರೂ ಸೋತರು. ದೇವೇಗೌಡರು ಹಾಸನ ಲೋಕಸಭಾ ಕ್ಷೇತ್ರದಲ್ಲಿ ಸೋಲುಂಡರು. ಜೆ.ಎಚ್. ಪಟೇಲರಿಗೂ ಜಯ ಸಿಗಲಿಲ್ಲ. ಹೊಳೆನರಸೀಪುರ ಕ್ಷೇತ್ರದಲ್ಲಿ ರೇವಣ್ಣ, ಸಾತನೂರಿನಲ್ಲಿ ಕುಮಾರಸ್ವಾಮಿ ದಯನೀಯವಾಗಿ ಸೋತುಹೋದರು. ಕಾಂಗ್ರೆಸ್ ಪಕ್ಷ ಎಸ್.ಎಂ. ಕೃಷ್ಣ ಅವರ ನೇತೃತ್ವದಲ್ಲಿ 135 ಸ್ಥಾನಗಳಿಸಿ ಅಧಿಕಾರದ ಚುಕ್ಕಾಣಿ ಹಿಡಿಯಿತು.

ಎಸ್.ಎಂ. ಕೃಷ್ಣ ಅವಧಿಯಲ್ಲಿ ಭಿನ್ನಮತದ ಕಾಟ ಅಷ್ಟೇನೂ ಇರಲಿಲ್ಲ. ಅವಧಿಗೆ ಮುನ್ನವೇ ಚುನಾವಣೆ ಪ್ರಕಟಿಸಿದರು. 2004ರಲ್ಲಿ ಅತಂತ್ರ ವಿಧಾನಸಭೆ ಸೃಷ್ಟಿಯಾಯಿತು. ಕಾಂಗ್ರೆಸ್ ಪಕ್ಷ 135ರಿಂದ 65 ಸ್ಥಾನಕ್ಕೆ ಕುಸಿಯಿತು. ಬಿಜೆಪಿ 79 ಸ್ಥಾನ ಪಡೆದು ಅತಿದೊಡ್ಡ ಪಕ್ಷವಾಯಿತು. ಜೆಡಿಎಸ್ 58 ಸ್ಥಾನ ಗಳಿಸಿತು. ಕಾಂಗ್ರೆಸ್ ಮತ್ತು ಜೆಡಿಎಸ್ ಮೈತ್ರಿ ಮಾಡಿಕೊಂಡು ಸರ್ಕಾರ ರಚಿಸಿದವು. ಎನ್. ಧರಂಸಿಂಗ್ ಮುಖ್ಯಮಂತ್ರಿಯಾದರು. ಈ ಸರ್ಕಾರ 20 ತಿಂಗಳು ಕಳೆಯುವುದರಲ್ಲಿ ಪತನವಾಯಿತು. ಕುಮಾರಸ್ವಾಮಿ ಅವರು ಬಿಜೆಪಿ ಜೊತೆ ಸಖ್ಯ ಬೆಳೆಸಿ ಮುಖ್ಯಮಂತ್ರಿಯಾದರು. ಆದರೆ, ಅವರು ತಮ್ಮ ಅವಧಿ ಮುಗಿದ ನಂತರ ಬಿಜೆಪಿಗೆ ಅಧಿಕಾರ ಬಿಟ್ಟುಕೊಡದೇ ಇರುವುದರಿಂದ ಸರ್ಕಾರ ಪತನವಾಯಿತು. ಕುಮಾರಸ್ವಾಮಿ ಅವರ ವಚನ ಭ್ರಷ್ಟತೆ ಬಿಜೆಪಿಗೆ ಭಾರೀ ಬಲ ತುಂಬಿತು. 2008ರ ಚುನಾವಣೆಯಲ್ಲಿ ಬಿಜೆಪಿ ಬಹುಮತದ ಹತ್ತಿರಕ್ಕೆ ಬಂತು. 110 ಕ್ಷೇತ್ರಗಳಲ್ಲಿ ಜಯ ಗಳಿಸಿದ ಬಿಜೆಪಿ ಪಕ್ಷೇತರರ ಬೆಂಬಲದೊಂದಿಗೆ ಸರ್ಕಾರ ರಚಿಸಿತು. ಯಡಿಯೂರಪ್ಪ ಮುಖ್ಯಮಂತ್ರಿಯಾದರು. ಆದರೆ, ನಿರೀಕ್ಷಿತಮಟ್ಟದ ಆಡಳಿತ ಬರಲಿಲ್ಲ. ಆ ಸರ್ಕಾರದಲ್ಲಿಯೂ ಅಂತಃಕಲಹ ವಿಪರೀತವಾಯಿತು. ಗಣಿ ಹಗರಣ, ಲೋಕಾಯುಕ್ತ ತನಿಖೆ ಮುಂತಾದ ಕಾರಣಗಳಿಂದ ಯಡಿಯೂರಪ್ಪ ಅಧಿಕಾರ ಕಳೆದುಕೊಂಡರು. ಕೆಲಕಾಲ ಸದಾನಂದ ಗೌಡ, ನಂತರ ಜಗದೀಶ ಶೆಟ್ಟರ್ ಮುಖ್ಯಮಂತ್ರಿಗಳಾಗಿ ಅಧಿಕಾರ ನಡೆಸಿದರೂ ಜನರಿಗೆ ಬಿಜೆಪಿ ಮೇಲಿನ ಸಿಟ್ಟು ಕಡಿಮೆಯಾಗಿರಲಿಲ್ಲ. ಭಿನ್ನಮತದ ಬೆಂಕಿಯಲ್ಲಿ ಬಿಜೆಪಿ ಸರ್ಕಾರವೂ ಗಾಸಿಗೊಂಡಿತು; 2013ರ ಚುನಾವಣೆಯಲ್ಲಿ ಸೋಲು ಕಂಡಿತು. ಕಾಂಗ್ರೆಸ್ ಪಕ್ಷ 122 ಸ್ಥಾನ ಗಳಿಸಿ ಸ್ವತಂತ್ರವಾಗಿ ಸರ್ಕಾರ ರಚಿಸಿತು. ಸಿದ್ದರಾಮಯ್ಯ ಮುಖ್ಯಮಂತ್ರಿಯಾದರು. ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳು ತಲಾ 40 ಸ್ಥಾನ ಗಳಿಸಿದವು.

ಸಿದ್ದರಾಮಯ್ಯ ಅವರು ಐದು ವರ್ಷ ಪೂರ್ಣ ಪ್ರಮಾಣದ ಮುಖ್ಯಮಂತ್ರಿಯಾಗಿದ್ದರು. ಅವರ ಕಾಲದಲ್ಲಿ ಭಿನ್ನಮತದ ಕಾಟ ಬಹಳ ಇರಲಿಲ್ಲ. ಆದರೂ, 2018ರ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಗೆಲ್ಲಿಸಲು ಅವರು ವಿಫಲರಾದರು. ಮತ್ತೆ ಅತಂತ್ರ ವಿಧಾನಸಭೆ ಸೃಷ್ಟಿಯಾಯಿತು. ಕುಮಾರಸ್ವಾಮಿ ಮತ್ತೆ ಮುಖ್ಯಮಂತ್ರಿಯಾದರು. ನಂತರದ ದಿನಗಳಲ್ಲಿ 'ಆಪರೇಷನ್ ಕಮಲ'ದ ಮೂಲಕ ಬಿಜೆಪಿ ಅಧಿಕಾರಕ್ಕೆ ಬಂತು. ಯಡಿಯೂರಪ್ಪ ಮುಖ್ಯಮಂತ್ರಿಯಾದರೂ ಬಹಳ ಕಾಲ ಬಾಳಲಿಲ್ಲ. ಬಸವರಾಜ ಬೊಮ್ಮಾಯಿ ಚುಕ್ಕಾಣಿ ಹಿಡಿದರು. ಮುಖ್ಯಮಂತ್ರಿ ಬದಲಾವಣೆ, ಭಿನ್ನಮತದ ಕಾಟ, ಅಂತಃಕಲಹದ ಕಾರಣಕ್ಕೆ 2023ರ ಚುನಾವಣೆಯಲ್ಲಿ ಬಿಜೆಪಿ ಅಧಿಕಾರ ಕಳೆದುಕೊಂಡಿತು. ಕಾಂಗ್ರೆಸ್ ಪಕ್ಷಕ್ಕೆ ಭಾರೀ ಬಹುಮತ ದೊರಕಿತು. ಈಗ ಅದೇ ಭಾರವಾಗುವ ಲಕ್ಷಣ ಕಾಣುತ್ತಿದೆ. ಭಿನ್ನಮತ ನಡೆದಾಗಲೆಲ್ಲಾ ಆಡಳಿತ ಯಂತ್ರ ದಿಕ್ಕುತಪ್ಪಿದೆ. ಇದರ ನಡುವೆ ಮತದಾರರ ಸ್ಥಿತಿ, ಅಯ್ಯೋ ಪಾಪ ಪಾಪ.



ವಾಚಕರ ವಾಣಿ

ಮಠಗಳಿಗೆ ರಾಜಕೀಯ ಗೊಡವೆ ಬೇಕೆ?

ಮುಖ್ಯಮಂತ್ರಿ ಹುದ್ದೆಯು ಯಾವುದೇ ನಿರ್ದಿಷ್ಟ ಜಾತಿಯ ಸ್ವತ್ತಲ್ಲ. ಬಲಾಢ್ಯ ಸಮುದಾಯವು ಪಕ್ಷವೊಂದರ ಪರವಾಗಿ ನಿಂತ ತಕ್ಷಣವೇ ಆ ಪಕ್ಷ ಅಧಿಕಾರ ಹಿಡಿಯಲು ಸಾಧ್ಯವಾಗುವುದಿಲ್ಲ. ಈ ಕುರಿತಂತೆ ಮಠಾಧೀಶರ ಮಾತುಗಳು ಅಪ್ರಬುದ್ಧ. ಸಮುದಾಯದ ನಾಯಕನಿಗೆ ರಾಜಕೀಯ ಹುದ್ದೆ ಕೊಡಿಸುವುದು ಮಠಾಧೀಶರ ಕೆಲಸವಲ್ಲ. ಮಠಗಳು ಸಮಾಜದ ಅಂಕುಡೊಂಕು ತಿದ್ದಿ ಸಾಮಾಜಿಕ ಸಾಮರಸ್ಯ ಬೆಸೆಯುವ ಕೆಲಸ ಮಾಡಬೇಕು. ಜೊತೆಗೆ, ರಾಜಕಾರಣದಿಂದ ಅಂತರ ಕಾಪಾಡಿಕೊಳ್ಳಬೇಕು. ಸಮಾಜಮುಖಿಯಾದ ಧಾರ್ಮಿಕ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವುದು ಉತ್ತಮ. ನಾಯಕರ ಸಾಮರ್ಥ್ಯ, ಶ್ರಮ, ದಕ್ಷತೆ, ನಿಷ್ಠೆಯನ್ನು ಶಾಸಕರು ಮತ್ತು ಆಯಾ ಪಕ್ಷದ ವರಿಷ್ಠರು ನಿರ್ಧರಿಸುತ್ತಾರೆ. ಸ್ವಾಮೀಜಿಗಳಿಗೆ ರಾಜಕೀಯದ ಉಸಾಬರಿ ಶೋಭೆ ತರುವುದಿಲ್ಲ.

ಆರ್. ಕುಮಾರ್, ಬೆಂಗಳೂರು

ಅಂಚೆ ಕಚೇರಿ: ಠೇವಣಿಗಳಿಗೆ ಭದ್ರತೆ ಬೇಕು

ಮೈಸೂರು ಜಿಲ್ಲೆಯ ಸರಗೂರು ಪಟ್ಟಣದ ಅಂಚೆ ಕಚೇರಿಯಲ್ಲಿ ಗ್ರಾಹಕರು ಠೇವಣಿ ಇಟ್ಟಿದ್ದ ಕೋಟ್ಯಂತರ ರೂಪಾಯಿ ದುರುಪಯೋಗವಾಗಿದೆ. ಪ್ರಕರಣದ ಬಗ್ಗೆ ಸಿಬಿಐ ತನಿಖೆಗೆ ಶಿಫಾರಸು ಮಾಡಲಾಗಿದೆ. ನ್ಯಾಯಯುತವಾಗಿ ತನಿಖೆ ನಡೆದರೆ ತಪ್ಪಿತಸ್ಥ ಅಧಿಕಾರಿಗಳಿಗೆ ಶಿಕ್ಷೆಯಾಗಬಹುದು. ಆದರೆ, ಠೇವಣಿ ಹಣ ಗ್ರಾಹಕರ ಕೈ ಸೇರುವುದು ಯಾವಾಗ? ಈ ಪ್ರಕರಣದಲ್ಲಿ ಮೇಲಧಿಕಾರಿಗಳು ಶಾಮೀಲಾಗಿರುವ ಸಾಧ್ಯತೆ ಇದೆ. ಇಂದಿಗೂ ಗ್ರಾಮೀಣರಲ್ಲಿ ಅಂಚೆ ಇಲಾಖೆಯ ಮೇಲೆ ನಂಬಿಕೆ ಮತ್ತು ಭರವಸೆ ಹೆಚ್ಚಿದೆ. ಕಡುಬಡವರು, ಕೂಲಿ ಕಾರ್ಮಿಕರು, ಮಧ್ಯಮ ವರ್ಗದವರು ಕಷ್ಟಪಟ್ಟು ದುಡಿದ ಹಣವನ್ನು ಅಂಚೆ ಕಚೇರಿಯಲ್ಲಿ ಇಡುತ್ತಾರೆ. ಅದರ ದುರುಪಯೋಗ ಆಗದಂತೆ ನೋಡಿಕೊಳ್ಳುವುದು ಕೇಂದ್ರ ಸರ್ಕಾರದ ಹೊಣೆ.

ಬೂಕನಕೆರೆ ವಿಜೇಂದ್ರ, ಮೈಸೂರು

ಕುವರಿಯಾದೊಡೆ ಕುಂದೇನದರಿಂದ...

ರಾಮದುರ್ಗದಲ್ಲಿ ತಾಯಿಯೊಬ್ಬರು ನಾಲ್ಕನೇ ಮಗುವೂ ಹೆಣ್ಣಾಗಿದ್ದಕ್ಕೆ ಅದರ ಕತ್ತು ಹಿಸುಕಿ ಕೊಂದಿರುವ ಸುದ್ದಿ ಓದಿ ದುಃಖವಾಯಿತು. ಸಮಾಜದಲ್ಲಿ ಹೆಣ್ಣು ಶಿಶುಗಳು ಹಾಗೂ ಹೆಣ್ಣುಭ್ರೂಣ ಹತ್ಯೆಯು ಕಾನೂನು ಮೀರಿ ನಡೆಯುತ್ತಲೇ ಇವೆ. ದೇಶದಲ್ಲಿ ಲಿಂಗ ಅಸಮಾನತೆಗೆ ಗಂಡು ಸಂತತಿಯ ಬಯಕೆಯೇ ಮೂಲ ಕಾರಣ. ಗಂಡು ಮಗು ಹುಟ್ಟಿದರಷ್ಟೆ ವಂಶ ಬೆಳಗುತ್ತದೆ ಎಂಬ ಅಜ್ಞಾನದಿಂದ ಪೋಷಕರು ಹೊರಬರಬೇಕಿದೆ. ಆಗಷ್ಟೇ ಲಿಂಗಾನುಪಾತದಲ್ಲಿ ಸಮತೋಲನ ಕಾಯ್ದುಕೊಳ್ಳಲು ಸಾಧ್ಯ. ಸರ್ಕಾರ ಕೂಡ ಹೆಣ್ಣುಮಕ್ಕಳ ಹತ್ಯೆಯಂತಹ ದುಷ್ಕೃತ್ಯ ತಡೆಗೆ ಇರುವ ಕಾನೂನಿನ ಕುಣಿಕೆ ಯನ್ನು ಬಿಗಿಗೊಳಿಸಬೇಕಿದೆ.

ಬೀರಲಿಂಗ ಎನ್. ಪೂಜಾರಿ, ಕಲಬುರಗಿ

ವಿಧಾನಸಭೆ ವಿಸರ್ಜನೆ ಹುಡುಗಾಟವಲ್ಲ

'ನಾಯಕತ್ವದ ಗೊಂದಲ ಬಗೆಹರಿಯಬೇಕಾದರೆ ವಿಧಾನಸಭೆ ವಿಸರ್ಜಿಸಿ, ಡಿ.ಕೆ. ಶಿವಕುಮಾರ್ ನೇತೃತ್ವದಲ್ಲೇ ಚುನಾವಣೆ ಎದುರಿಸೋಣ' ಎಂದು ಶಾಸಕ ಕೆ.ಎನ್. ರಾಜಣ್ಣ ಸಲಹೆ ನೀಡಿದ್ದಾರೆ. ವಿಧಾನಸಭೆಯ ವಿಸರ್ಜನೆ ಎಂದರೆ ಹುಡುಗಾಟವೇ? ಮತ್ತೆ ಚುನಾವಣೆ ನಡೆದರೆ ಜನರ ತೆರಿಗೆ ಹಣದ ಅಪವ್ಯಯವಾಗುತ್ತದೆ. ಕಾಂಗ್ರೆಸ್ ಪಕ್ಷದಲ್ಲಿ ಸಮಸ್ಯೆಗಳಿದ್ದರೆ ಚರ್ಚಿಸಿ ಬಗೆಹರಿಸಿಕೊಳ್ಳಬೇಕು. ವಿಸರ್ಜನೆ ಎನ್ನುವುದು ಸ್ಪಷ್ಟ ಬಹುಮತ ನೀಡಿ ಆರಿಸಿದ ಮತದಾರರಿಗೆ ಮಾಡುವ ಅಪಮಾನವೂ ಹೌದು. ಇಂತಹ ಬುದ್ಧಿಗೇಡಿ ಸಲಹೆ ಅಪ್ರಸ್ತುತ. ಚುನಾವಣೆ ಅನಿವಾರ್ಯ ಎನ್ನುವುದಾದರೆ, ಜನರ ತೆರಿಗೆ ಹಣ ಬಳಸದೆ ಪಕ್ಷವೇ ಚುನಾವಣಾ ಖರ್ಚುಗಳನ್ನೂ ಭರಿಸಲಿ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಉನ್ನತ ಶಿಕ್ಷಣ: ಅರಾಜಕತೆಯತ್ತ ನಡಿಗೆ

ರಾಜ್ಯದಲ್ಲಿ ಹಣ ಪಡೆದು ನಕಲಿ ಪದವಿ ಪ್ರಮಾಣಪತ್ರ ನೀಡುವ ದೊಡ್ಡ ಜಾಲ ಸಕ್ರಿಯವಾಗಿದೆ. ಹಣ ಇದ್ದವರಿಗೆ ಶಿಕ್ಷಣ ಇಲ್ಲದಿದ್ದರೂ ಪದವಿ ಪ್ರಮಾಣಪತ್ರಗಳು ಸುಲಭವಾಗಿ ಸಿಗುವುದು ವ್ಯವಸ್ಥೆಯ ವ್ಯಂಗ್ಯವೇ ಸರಿ. ಕೆಳ ಮತ್ತು ಮಧ್ಯಮವರ್ಗದ ವಿದ್ಯಾರ್ಥಿಗಳು ಕಷ್ಟಪಟ್ಟು ಉನ್ನತ ಶಿಕ್ಷಣದ ಪದವಿ ಪಡೆದರೂ ಉದ್ಯೋಗಾವಕಾಶ ಇಲ್ಲದೆ ಅಲೆದಾಡುವುದು ತಪ್ಪಿಲ್ಲ.

ಸಮಾಜದಲ್ಲಿ ಎಲ್ಲರೂ ಸಮಾನರು ಎಂದು ಸಂವಿಧಾನ ಹೇಳುತ್ತದೆ. ಆದರೆ, ಒಂದೇ ಶಿಕ್ಷಣ ಸಂಸ್ಥೆಯಲ್ಲಿ ಹಣ ಕೊಟ್ಟು ಪದವಿ ಪಡೆಯುವ ವರ್ಗ ಹಾಗೂ ಕಷ್ಟ ಪಟ್ಟು ಪದವಿ ಪಡೆದುಕೊಳ್ಳುವ ವರ್ಗವೂ ಇರುವಾಗ ಸಮಾನರೆಂಬ ಆಶಯಕ್ಕೆ ಅರ್ಥವಾದರೂ ಎಲ್ಲಿದೆ? ನಕಲಿ ಪದವಿ ಪ್ರಮಾಣಪತ್ರ ವಿತರಣೆ ಜಾಲದ ವಿರುದ್ಧ ಸರ್ಕಾರ ಕಠಿಣ ಕ್ರಮ ಜರುಗಿಸಲಿ. ಉನ್ನತ ಶಿಕ್ಷಣ ಕ್ಷೇತ್ರದಲ್ಲಿನ ಕೊಳಕನ್ನು ತೊಳೆಯುವ ಕೆಲಸ ತ್ವರಿತವಾಗಿ ಆಗಬೇಕಿದೆ.

ವಿನಾಯಕ್ ಕರಿಬಿಲ್ಕರ್, ಮಾನವಿ

ಇನ್ನೂ ಜಮೆಯಾಗದ ಸಮೀಕ್ಷೆಯ ಹಣ

ರಾಜ್ಯ ಸರ್ಕಾರ ನಡೆಸಿದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ ಸಂಬಂಧಿಸಿದಂತೆ ಸ್ವಸಹಾಯ ಸಂಘಗಳ ಸಮುದಾಯ ಸಂಪನ್ಮೂಲ ವ್ಯಕ್ತಿಗಳು ಮನೆ ಮನೆಗೆ ಭೇಟಿ ನೀಡಿ ಅರಿವು ಮೂಡಿಸಿದ್ದಾರೆ. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಕಾರ್ಯದರ್ಶಿ ಅವರ ಸೂಚನೆ ಮೇರೆಗೆ ಈ ಕಾರ್ಯ ನಿರ್ವಹಿಸಲಾಗಿದೆ. ಪ್ರತಿ ಮನೆ ಭೇಟಿಗೆ ₹4 ನೀಡುವುದಾಗಿ ಸರ್ಕಾರ ಪ್ರಕಟಿಸಿತ್ತು. ಸದ್ಯ ಸಮೀಕ್ಷೆದಾರರಿಗೆ ಹಣ ಪಾವತಿಯಾಗುತ್ತಿದೆ. ಸಂಪನ್ಮೂಲ ವ್ಯಕ್ತಿಗಳಿಗೆ ಇನ್ನೂ ಗೌರವಧನ ಪಾವತಿಯಾಗಿಲ್ಲ. ಕಳೆದ ವರ್ಷ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಶಾಲೆ ಬಿಟ್ಟ ಮಕ್ಕಳ ಬಗ್ಗೆ ಸಮೀಕ್ಷೆ ನಡೆಸಿತ್ತು. ಇದರಲ್ಲಿ ಪಾಲ್ಗೊಂಡ ಸಂಪನ್ಮೂಲ ವ್ಯಕ್ತಿಗಳಿಗೆ ಪ್ರತಿ ಮನೆಗೆ ₹7 ನೀಡುವುದಾಗಿ ತಿಳಿಸಿತ್ತು. ಈ ಗೌರವಧನ ವರ್ಷ ಕಳೆದರೂ ಬಿಡುಗಡೆ ಆಗಿಲ್ಲ. ಸರ್ಕಾರ ಶೀಘ್ರವೇ ಹಣ ಬಿಡುಗಡೆ ಮಾಡಬೇಕಿದೆ.

ಸುಮತಿ, ಬೆಂಗಳೂರು

ಚಾವಡಿ



ಮುನ್ನೋಟ ಅಗತ್ಯ

2028ಕ್ಕೆ ಯಾರು ಮುಖ್ಯಮಂತ್ರಿ ಆಗಬೇಕು ಅಥವಾ ಆಗುತ್ತಾರೆ ಎಂಬ ಚರ್ಚೆಗಿಂತ 2028ಕ್ಕೆ ಕರ್ನಾಟಕ ಹೇಗಿರಬೇಕು ಎಂಬ ಬಗ್ಗೆ ಚರ್ಚಿಸುವುದು ಸೂಕ್ತವಲ್ಲವೆ?

ಈ. ಬಸವರಾಜು, ಶೈಕ್ಷಣಿಕ ಕಾರ್ಯಕರ್ತ, 'ಫೇಸ್‌ಬುಕ್'ನಿಂದ

ಕಿಡಿನುಡಿ



'ಕುರ್ಚಿ ಕುಸ್ತಿ'ಯಲ್ಲಿ, 'ನವೆಂಬರ್ ಕ್ರಾಂತಿ'ಯ ನಡುವೆ ರಾಜ್ಯದಲ್ಲಿ ಆಡಳಿತ ಹಾಗೂ ಕಾನೂನು–ಸುವ್ಯವಸ್ಥೆ ಸಂಪೂರ್ಣವಾಗಿ ಕುಸಿದಿದೆ. ತಾವು ಪ್ರತಿನಿಧಿಸುವ ಕ್ಷೇತ್ರದಲ್ಲಿ ತಲೆದೋರಿರುವ ಹತ್ತು ಹಲವು ಸಮಸ್ಯೆಗಳನ್ನು ಬಗೆಹರಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ವಿಫಲರಾಗಿದ್ದಾರೆ.

ಬಸನಗೌಡ ಪಾಟೀಲ ಯತ್ನಾಳ, ಶಾಸಕ

ಚುರುಮುರಿ



ಕುದುರೆ ವ್ಯಾಪಾರ!

• ಬಿ.ಎನ್. ಮಲ್ಲೇಶ್

'ರೀ... ಈ ರಾಜಕೀಯದೋರು ಯಾವಾಗ ನೋಡಿದ್ರೂ ಕುದುರೆ ವ್ಯಾಪಾರ, ಕುದುರೆ ವ್ಯಾಪಾರ ಅಂತಿರ್ತಾರೆ, ಕತ್ತೆ ವ್ಯಾಪಾರ ಅಂತ ಯಾಕನ್ನಲ್ಲ?' ಮಡದಿ ಕಾಫಿ ಕೊಡುತ್ತ ಕೇಳಿದಳು.

'ರಾಜಕೀಯದಲ್ಲಿ ಕುರ್ಚಿ ಕಿತ್ಕಾಬೇಕು ಅಂದ್ರೆ ಯುದ್ಧ ಮಾಡ್ಬೇಕು. ಅದಕ್ಕೆ ಕುದುರೆಗಳು ಬೇಕು. ಕತ್ತೆಗಳನ್ನ ಇಟ್ಕಂಡು ಯುದ್ಧ ಮಾಡೋಕಾಗುತ್ತಾ?' ಎಂದೆ ನಾನು. ನನಗೂ ಸರಿಯಾದ ಉತ್ತರ ಗೊತ್ತಿರಲಿಲ್ಲ.

'ಆದ್ರೂ ಕುದುರೆ ಸಾಕೋದು ಬಾಳ ಕಷ್ಟ ಅಲ್ವಾ? ಅವಕ್ಕೆ ಹುಲ್ಲು, ಹುರುಳಿ ಹಾಕ್ಬೇಕು, ಬೆನ್ನು ಉಜ್ಜಬೇಕು, ಬಾಲ ನೀವಬೇಕು... ಕತ್ತೆಗಳು ಹಂಗಲ್ಲ, ಹಗ್ಗ ಬಿಚ್ಚಿ ಓಡ್ಸಿದ್ರೆ ಎಲ್ಲಾದ್ರೂ ಮೇಯ್ಕಂಡು ಬರ್ತವೆ...'

'ನೀ ಹೇಳೋದೂ ನಿಜ ಅನ್ನು. ಕುದುರೆಗಳನ್ನ ಲಾಯದಲ್ಲಿ ಕಟ್ಟಿ ಹಾಕಿದ್ರೂ ಅವು ಲಾಯಲ್ಲಾಗಿರಲ್ಲ. ರೆಸಾರ್ಟೇ ಬೇಕು ಅಂತವೆ...'

'ಅಲ್ಲ, ಒಂದೊಂದ್ ಕುದುರೆಗೆ ₹50 ಕೋಟಿನಂತೆ. ಅವಕ್ಕೆ ಯಾಕೆ ಅಷ್ಟು ರೇಟು?' ಮಡದಿಗೆ ಕುತೂಹಲ.

'ನಾಲ್ಕು ಕಾಲಿನ ಕುದುರೆಗಳಿಗೆ ಅಷ್ಟು ರೇಟಿಲ್ಲ. ಎರಡು ಕಾಲಿನ ಕುದುರೆಗಳಿಗೆ ಜಾಸ್ತಿ ರೇಟು...'

'ಎರಡು ಕಾಲಿನ ಕುದುರೆಗಳಾ?'

'ಹೌದು, ಅವಕ್ಕೆ ಡಿಮ್ಯಾಂಡ್ ಜಾಸ್ತಿ. ಅವು ಚಾ ಕುಡಿಯಾಕೇ ಡೆಲ್ಲಿಗೆ ಹೋಗ್ತವೆ ಗೊತ್ತಾ?'

'ಗೊತ್ತಾತು ಬಿಡ್ರಿ, ನೀವು ಹೇಳೋ ಕುದುರೆಗಳು ಮಂತ್ರಿ ಸ್ಥಾನನೂ ಕೇಳ್ತಾವಂತೆ?' ಮಡದಿ ನಕ್ಕಳು.

'ಮಂತ್ರಿ ಸ್ಥಾನನೂ ಕೇಳ್ತವೆ, ಕೊಟ್ಟ ಮಾತು ಮರೀದಂಗೆ ಈಡೇರಿಸಿ ಅಂತ ಎಚ್ಚರಿಕೇನೂ ಕೊಡ್ತವೆ...'

'ಹ್ಞಾ... ಕೊಟ್ಟ ಮಾತು ಅಂದ ಕೂಡ್ಲೆ ನೆನಪಾತು... ನೀವು ದೀಪಾವಳಿಗೆ ಸೀರೆ ಕೊಡಿಸ್ತೀನಿ ಅಂದಿದ್ರಿ, ಕೊಡಿಸಿಲ್ಲ. ಯಾವಾಗ ಕೊಡಿಸ್ತೀರಿ?'

'ಖಂಡಿತ ಕೊಡಿಸ್ತೀನಿ, ಮುಂದಿನ ದೀಪಾವಳಿಗೆ...'

ನನ್ನ ಮಾತಿನ್ನೂ ಮುಗಿದಿರಲಿಲ್ಲ... ಕೈಲಿದ್ದ ಕಾಫಿ ಕಪ್ಪನ್ನು ಟೀಪಾಯಿ ಮೇಲೆ ಕುಕ್ಕಿ ಬಿಲ್ಲಿನಿಂದ ಬಿಟ್ಟ ಬಾಣದಂತೆ ಅಡುಗೆ ಮನೆಯತ್ತ ಮಾಯವಾಗಿ ಹೋದಳು ಮಡದಿ. ನಾನು ಪಿಟಿಕ್ಕನ್ನಲಿಲ್ಲ.

25 ವರ್ಷಗಳ ಹಿಂದೆ

ಮಂಗಳವಾರ, 28-11-2000

• ದಲಿತರ ಮೇಲಿನ ದೌರ್ಜನ್ಯ ತನಿಖೆಗೆ ವಿಶೇಷ ಕೋರ್ಟ್

ಬೆಂಗಳೂರು, ನ. 27– ದಲಿತರ ವಿರುದ್ಧ ನಡೆದ ದೌರ್ಜನ್ಯ ಕುರಿತ ಸುಮಾರು 2,000 ಬಾಕಿ ಪ್ರಕರಣಗಳ ಶೀಘ್ರ ಇತ್ಯರ್ಥಕ್ಕಾಗಿ ರಾಜ್ಯದಲ್ಲಿ ಒಂದು ವಿಶೇಷ ನ್ಯಾಯಾಲಯವನ್ನು ಸ್ಥಾಪಿಸುವಂತೆ ಸರ್ಕಾರ ಹೈಕೋರ್ಟನ್ನು ಕೋರಲಿದೆ.

ಈ ವಿಚಾರವನ್ನು ಸಮಾಜ ಕಲ್ಯಾಣ ಸಚಿವ ಕಾಗೋಡು ತಿಮ್ಮಪ್ಪ ಇಂದು ವರದಿಗಾರರಿಗೆ ತಿಳಿಸಿದರು.

ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿನ ದೌರ್ಜನ್ಯ ಸಮಿತಿ ಡಿಸೆಂಬರ್ ತಿಂಗಳ ಮೊದಲ ವಾರದಲ್ಲಿ ಸಭೆ ಸೇರಿ ಹೈಕೋರ್ಟಿಗೆ ಮನವಿ ಸಲ್ಲಿಸುವ ನಿರ್ಣಯ ಕೈಗೊಳ್ಳಲಿದೆ ಎಂದು ಅವರು ತಿಳಿಸಿದರು.

• ಮೋಸದಾಟ: ಅಜರ್ ವಿರುದ್ಧ ಆರೋಪ ಸಾಬೀತು

ನವದೆಹಲಿ, ನ. 27– ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ಮಹಮ್ಮದ್ ಅಜರುದ್ದೀನ್ ಅವರು, ಕ್ರಿಕೆಟ್ ಮೋಸದಾಟದಲ್ಲಿ ಪಾಲ್ಗೊಂಡಿರುವುದು ಸಾಬೀತಾಗಿದೆ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಅಧ್ಯಕ್ಷ ಎ.ಸಿ. ಮುತ್ತಯ್ಯ ಹೇಳಿದ್ದಾರೆ.

ಕೆ. ಮಾಧವನ್ ಅವರ ವರದಿಯನ್ನು ಪರಿಶೀಲಿಸಿದ ನಂತರ ಮುತ್ತಯ್ಯ ಈ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

75 ವರ್ಷಗಳ ಹಿಂದೆ

ಮಂಗಳವಾರ, 28-11-1950

• 'ಪ್ರಯೋಗ ಶಾಲೆಗಳು ಪ್ರಗತಿಯ ಆಧಾರಸ್ತಂಭ'

ಜಂಷೆಡ್‌ಪುರ, ನ. 27– ಪ್ರಧಾನಿ ಪಂಡಿತ ನೆಹರುರವರು ಇಂದು ಇಲ್ಲಿನ ರಾಷ್ಟ್ರೀಯ ಲೋಹ ಕೈಗಾರಿಕಾ ಪ್ರಯೋಗಶಾಲೆಯನ್ನು ಉದ್ಘಾಟಿಸುತ್ತ, ನಾಡಿನ ಅಭಿವೃದ್ಧಿಯಲ್ಲಿ ವೈಜ್ಞಾನಿಕ ಸಂಶೋಧನೆಯ ಮಹತ್ವ ಕುರಿತು ಮಾತನಾಡಿದರು.

ಕೈಗಾರಿಕೆಗಳಿಗೆ ವಿಜ್ಞಾನವನ್ನು ಅಳವಡಿಸುವುದು ಇಂದಿನ ಭಾರತಕ್ಕೆ ಅತ್ಯಂತ ಮಹತ್ವ ಪೂರಿತವಾದುದೆಂದೂ, ಇದರಿಂದ ಜನತೆಯ ಜೀವನ ಸ್ಥಿತಿ ಉತ್ತಮಗೊಳ್ಳುತ್ತದೆಂದೂ, ರಾಷ್ಟ್ರೀಯ ಲೋಹ ಕೈಗಾರಿಕಾ ಪ್ರಯೋಗಶಾಲೆಯು ಈ ಮಹತ್ವವನ್ನು ಹೆಚ್ಚಿನ ಮಟ್ಟಕ್ಕೆ ಪ್ರತಿನಿಧಿಸುವುದೆಂದೂ ತಿಳಿಸಿದರು.

• ತ್ರಿವೇಣಿ ನಗರ ಕ್ರಾಂತಿಕಾರರ ವಶ

ಪಾಟ್ನಾ, ನ. 27– ಬೀರ್‌ಗಂಜ್ ಕ್ಷೇತ್ರದಲ್ಲಿರುವ ನೇಪಾಳಿ ಕಾಂಗ್ರೆಸ್ ಸ್ವಯಂಸೇವಕರು ಗಂಡಕಿ ನದಿತೀರದ ತ್ರಿವೇಣಿ ನಗರವನ್ನು ನಿನ್ನೆ ವಶಪಡಿಸಿಕೊಂಡರೆಂದು, ನೇಪಾಳಿ ಕಾಂಗ್ರೆಸ್ ವಲಯಗಳಿಂದ ಗೊತ್ತಾಗಿದೆ.

ಕ್ರಾಂತಿಕಾರರ ಸೇನೆಗಳಿಗೆ ಹೆಚ್ಚು ವಿರೋಧವಿರಲಿಲ್ಲ. ಎರಡು ಪಕ್ಷಗಳಲ್ಲೂ ಹೆಚ್ಚು ಸಾವು–ನೋವುಗಳಾಗಲಿಲ್ಲ.

ಸಂಗತ

ದಾರಿ ಯಾವುದು ಜೇನುಹುಳು ಸಂರಕ್ಷಣೆಗೆ?

ಜೇನುಹುಳುಗಳನ್ನು ಶತ್ರುಗಳಂತೆ ನೋಡಲು ಅವುಗಳ ಕುರಿತ ಅನಗತ್ಯ ಭಯ ಹಾಗೂ ಅವುಗಳ ಸ್ಥಳಾಂತರಿಸುವ ಸಾಧ್ಯತೆಗಳ ಮಾಹಿತಿಯ ಕೊರತೆಯೇ ಕಾರಣ.

• ಗಾಣಧಾಳು ಶ್ರೀಕಂಠ

ಅಮೆರಿಕದ ಕ್ಯಾಲಿಫೋರ್ನಿಯಾ ರಾಜ್ಯದಲ್ಲಿ ಬಾದಾಮಿ ಮರಗಳ ಹೂವಿನ ಪರಾಗಸ್ಪರ್ಶಕ್ಕಾಗಿ ಜೇನುಹುಳುಗಳನ್ನು ಬಾಡಿಗೆಗೆ ಪಡೆಯಲಾಗುತ್ತದೆ. ಹತ್ತು ವರ್ಷಗಳ ಹಿಂದೆ ಕ್ಯಾಲಿಫೋರ್ನಿಯಾದ ಮಡೆಸ್ಟೊ ಪಟ್ಟಣದಲ್ಲಿರುವ ಬಾದಾಮಿ ಕ್ಷೇತ್ರಕ್ಕೆ ಭೇಟಿ ನೀಡಿದ್ದಾಗ ಅಲ್ಲಿನ ಬೆಳೆಗಾರರರು ಈ ಮಾಹಿತಿ ಹಂಚಿಕೊಂಡಿದ್ದರು.

ವಿಶ್ವದ ಶೇ 80ರಷ್ಟು ಬಾದಾಮಿ ಬೇಡಿಕೆಯನ್ನು ಕ್ಯಾಲಿಫೋರ್ನಿಯಾ ಪೂರೈಸುತ್ತದೆ. ಅಲ್ಲಿನ ಲಕ್ಷಾಂತರ ಹೆಕ್ಟೇರ್ ಭೂಮಿಯಲ್ಲಿ ಬಾದಾಮಿ ಬೆಳೆಯಲಾಗುತ್ತದೆ. ಬಾದಾಮಿ ಮರಗಳಲ್ಲಿ ಹೂವುಗಳು ಅರಳಿದಾಗ ಏಕಕಾಲಕ್ಕೆ ಎಲ್ಲ ಮರಗಳಲ್ಲೂ ಪರಾಗಸ್ಪರ್ಶ ಕ್ರಿಯೆ ನಡೆಯಬೇಕು. ಒಂದು ಜೇನುನೊಣ ಒಂದೇ ಮರದ ವಿವಿಧ ಹೂವುಗಳಿಂದ ಪರಾಗರೇಣು ಕೊಂಡೊಯ್ದು ದೂರದಲ್ಲಿರುವ ಇತರ ಮರಗಳಿಗೆ ಹಂಚಲು ಸಾಧ್ಯ. ಆದರೆ, ಈ ಪ್ರಕ್ರಿಯೆ ಲಕ್ಷಾಂತರ ಹೆಕ್ಟೇರ್‌ನಲ್ಲಿ ನಡೆಯಬೇಕಿರುವ ಕಾರಣದಿಂದ, ಬಹಳ ದೊಡ್ಡ ಸಂಖ್ಯೆಯಲ್ಲಿ ಜೇನುನೊಣಗಳು ಬೇಕಾಗುತ್ತವೆ. ಅದಕ್ಕಾಗಿಯೇ ಬಾದಾಮಿ ಕೃಷಿಕರು ಮರಗಿಡಗಳು ಹೂ ಬಿಡುವ ವೇಳೆ ಹೆಚ್ಚಿನ ಸಂಖ್ಯೆಯಲ್ಲಿ ಜೇನುಗೂಡುಗಳನ್ನು ಬಾಡಿಗೆಗೆ ಪಡೆಯುತ್ತಾರೆ; 'ಜೇನುನೊಣಗಳು ಬಾದಾಮಿ ಕೃಷಿಯ ಜೀವಾಳ' ಎನ್ನುತ್ತಾರೆ ಬಾದಾಮಿ ಬೆಳೆಗಾರರು.

ಇತ್ತೀಚೆಗೆ ಚಿಕ್ಕಮಗಳೂರಿನ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ (ಸಿಮ್ಸ್) ರಾಸಾಯನಿಕಗಳನ್ನು ಬಳಸಿ 84 ಜೇನುಗೂಡುಗಳನ್ನು ತೆರವುಗೊಳಿಸಿದ ಸುದ್ದಿ ಓದಿದಾಗ ಅಮೆರಿಕದ 'ಬಾಡಿಗೆ ಜೇನುಹುಳುಗಳು' ನೆನಪಾದವು.



ಕ್ಯಾಲಿಫೋರ್ನಿಯಾದಲ್ಲಿ ಬಾದಾಮಿ ಕೃಷಿಗೆ ಜೇನುಹುಳುಗಳು ಎಷ್ಟು ಮುಖ್ಯವೋ, ಚಿಕ್ಕಮಗಳೂರಿನ ಕಾಫಿಕೃಷಿಗೆ, ಪಶ್ಚಿಮಘಟ್ಟದ ಅರಣ್ಯ ಪರಿಸರ ಸಮತೋಲನ ರಕ್ಷಣೆಗೂ ಅಷ್ಟೇ ಮುಖ್ಯ. ಇಂಥ ಸೂಕ್ಷ್ಮ ವಿಷಯ ಅರಿಯದೆ ನಿರುಪದ್ರವಿ, ಪರೋಪಕಾರಿ ಹುಳುಗಳ ಗೂಡುಗಳನ್ನು ತೆರವುಗೊಳಿಸಲು ರಾಸಾಯನಿಕ ಹಾಕಿದರೆಂದು ಓದಿದಾಗ ವ್ಯಥೆಯಾಯಿತು. ವಿದ್ಯಾರ್ಥಿಗಳಲ್ಲಿ ಜೀವವೈವಿಧ್ಯದ ಅರಿವು, ಜಾಗೃತಿ ಮೂಡಿಸಬೇಕಾದ ವಿದ್ಯಾಸಂಸ್ಥೆಗಳೇ ಹೀಗೆ ಮಾಡಿದರೆ ಹೇಗೆ?

ಕಾಲೇಜು, ವಸತಿ ನಿಲಯಗಳ ಆವರಣದಲ್ಲಿ ಜೇನುಗೂಡುಗಳಿದ್ದಾಗ, ಅದರಿಂದ ತೊಂದರೆಯಾಗುತ್ತದೆ ಎಂಬ ಆತಂಕ ಸಹಜ. ಮುಂಜಾಗ್ರತಾ ಕ್ರಮವಾಗಿ ಕಾಲೇಜಿನ ಆಡಳಿತ ಮಂಡಳಿ ಇಂಥದ್ದೊಂದು ಹೆಜ್ಜೆ ಇಟ್ಟಿರಬಹುದು. ಆದರೆ, ಅವುಗಳನ್ನು ನಾಶಗೊಳಿಸುವ ಹಕ್ಕು ಅವರಿಗಿಲ್ಲ. ಜೇನುಹುಳುಗಳನ್ನು ಸುರಕ್ಷಿತವಾಗಿ ಬೇರೆಡೆಗೆ ವರ್ಗಾಯಿಸಲು ದಾರಿಗಳಿದ್ದವು. ಆ ಕೆಲಸಕ್ಕಾಗಿಯೇ ನುರಿತ ತಜ್ಞರಿದ್ದಾರೆ. ಜೇನುಗೂಡುಗಳನ್ನು ಸುರಕ್ಷಿತವಾಗಿ ಸ್ಥಳಾಂತರಿಸುವ ತಂಡಗಳಿವೆ. ಕೃಷಿ ವಿಶ್ವವಿದ್ಯಾಲಯಗಳಲ್ಲಿ ಜೇನು ಕೃಷಿ ವಿಭಾಗವಿದೆ. ಜೇನು ಸಾಕಾಣಿಕೆಯ ಪರಿಣತರಿದ್ದಾರೆ. ಕಾಲೇಜು ಆಡಳಿತ ಮಂಡಳಿ ಇಂಥ ಯಾರನ್ನಾದರೂ ಸಂಪರ್ಕಿಸಿದ್ದರೂ ಪರಿಸರಸ್ನೇಹಿ ಪರಿಹಾರ ಸಿಕ್ಕಿರುತ್ತಿತ್ತು.

ಜೇನುಹುಳುಗಳು ಒಳಗೆ ಪ್ರವೇಶಿಸದಂತೆ ಕಾಲೇಜು ಕೊಠಡಿಗಳ ಕಿಟಕಿಗಳಿಗೆ ಮೆಶ್ ಹಾಕಿದ್ದರೂ ಸಾಕಾಗಿತ್ತು. ಅದು ಬಿಟ್ಟು, ಪರಿಸರ ಸಮತೋಲನದಲ್ಲಿ ಪ್ರಮುಖ ಪಾತ್ರ ವಹಿಸುವ ಜೇನುಹುಳುಗಳನ್ನು ನಾಶಮಾಡಲು ಪ್ರಯತ್ನಿಸುವುದು ಸರಿಯಾದ ಕ್ರಮವಲ್ಲ ಎನ್ನುತ್ತಾರೆ ಚಿಕ್ಕಮಗಳೂರು ಜಿಲ್ಲೆಯ ಪರಿಸರ ಕಾರ್ಯಕರ್ತ ನಾಗರಾಜ ಕೂವೆ.

ಭೂಮಿಯ ಮೇಲಿನ ಶೇ 85ರಷ್ಟು ಜಾತಿಯ ಸಸ್ಯಗಳ ಉಳಿವು ಜೇನುನೊಣಗಳನ್ನು ಅವಲಂಬಿಸಿದೆ. ಕೃಷಿ ಕ್ಷೇತ್ರದಲ್ಲಿ ಅತಿಯಾದ ರಾಸಾಯನಿಕಗಳ ಬಳಕೆ, ಹವಾಮಾನ ವೈಪರೀತ್ಯ ಮತ್ತಿತರ ಕಾರಣಗಳಿಂದಾಗಿ ಜೇನುಹುಳುಗಳು ಅಪಾಯ ಎದುರಿಸುತ್ತಿವೆ. ಇಂಥ ಘಟನೆಗಳು ಮರುಕಳಿಸುತ್ತಿದ್ದರೆ ಭವಿಷ್ಯದಲ್ಲಿ ಬಹುದೊಡ್ಡ ಪರಿಸರ ಬಿಕ್ಕಟ್ಟನ್ನು ಎದುರಿಸಬೇಕಾದೀತು.

ನಗರ ಪ್ರದೇಶಗಳಲ್ಲಿ ಜೇನುಹುಳುಗಳನ್ನು ನಾಶ ಮಾಡುವ ಕೆಲಸಗಳು ನಡೆಯುತ್ತಿರುತ್ತವೆ. ಅವೆಲ್ಲ ಸುದ್ದಿ ಆಗುವುದಿಲ್ಲ. ನಗರದ ಎಷ್ಟೋ ಕಟ್ಟಡಗಳಲ್ಲಿ (ವಿಶೇಷವಾಗಿ ಸರ್ಕಾರಿ ಕಚೇರಿಗಳಲ್ಲೇ) ಬೆಂಕಿ ಹಾಕಿ ಜೇನುಹುಳುಗಳನ್ನು ಓಡಿಸಿರುವ ಉದಾಹರಣೆಗಳಿವೆ.

ಅನೇಕರಿಗೆ ಜೇನುಗೂಡುಗಳನ್ನು ಹೇಗೆ ನಿರ್ವಹಣೆ ಮಾಡಬೇಕು, ವೈಜ್ಞಾನಿಕವಾಗಿ ಹೇಗೆ ಸ್ಥಳಾಂತರಿಸಬೇಕು, ಈ ಬಗ್ಗೆ ಎಲ್ಲಿ ವಿಚಾರಿಸಬೇಕು ಎಂಬುದರ ಬಗ್ಗೆ ಅರಿವು ಇರುವುದಿಲ್ಲ. ಜೇನುಹುಳುಗಳು ದಾಳಿ ಮಾಡಿ ಕಚ್ಚುತ್ತವೆ ಎನ್ನುವ ಭಯವೂ ದುಡುಕಲು ಕಾರಣವಾಗುತ್ತದೆ. ಅಮೃತ ನೀಡುವ ಜೇನುಹುಳುಗಳನ್ನು ವಿಷಕೀಟಗಳಂತೆ ಕಾಣಲಾಗುತ್ತದೆ.

ಜೇನುಹುಳುಗಳನ್ನು ನಾಶಗೊಳಿಸುವ ಪ್ರಯತ್ನ ತಡೆಯುವುದಕ್ಕಾಗಿ, ವೈಜ್ಞಾನಿಕವಾಗಿ ಜೇನುಗೂಡು ಸ್ಥಳಾಂತರಿಸುವ ತಂಡದ ವಿವರಗಳು ಒಂದೆಡೆ ಸಿಗುವಂತೆ ಮಾಡಬೇಕು. ಈ ಮಾಹಿತಿಗಾಗಿ ಸಂಪರ್ಕಿಸಲು ಒಂದು ಸಹಾಯವಾಣಿ ಸ್ಥಾಪಿಸಬೇಕು. 'ಜೇನುಗೂಡು ಸ್ಥಳಾಂತರಿಸುವ ಅಗತ್ಯ ಇದ್ದವರು, ಈ ಸಹಾಯವಾಣಿಗೆ ಕರೆ ಮಾಡಿ' ಎಂದು ಜನರಲ್ಲಿ ಜಾಗೃತಿ ಮೂಡಿಸಬೇಕು.

ಸರ್ಕಾರ, ತೋಟಗಾರಿಕೆ ಇಲಾಖೆಯಲ್ಲಿ ಜೇನುಕೃಷಿ ವಿಭಾಗವನ್ನು ಸೇರಿಸಿದೆ. ಅದೇ ವಿಭಾಗದಲ್ಲಿ ಈ ಸಹಾಯವಾಣಿ ಆರಂಭಿಸುವ ಪ್ರಯತ್ನ ಮಾಡಬಹುದು. ಪ್ರಸ್ತುತ ರಾಜ್ಯದಾದ್ಯಂತ ಬಹುತೇಕ ಹಳ್ಳಿ–ಪಟ್ಟಣಗಳಲ್ಲಿ ಜೇನುಕೃಷಿಕರು ಇದ್ದಾರೆ. ಕೆಲವು ಕಡೆ ಜೇನುಗೂಡು ಬಿಡಿಸುವ ತಂಡಗಳಿವೆ. ಇಂಥವರಿಗೆ ಇನ್ನಷ್ಟು ತರಬೇತಿ ನೀಡಿ ಈ 'ಸಹಾಯವಾಣಿ' ಕಾರ್ಯಕ್ಕೆ ನೆರವಾಗಲು ಬಳಸಿಕೊಳ್ಳಬಹುದು, ಸೂಕ್ತ ಸಂಭಾವನೆ ನೀಡಬಹುದು. ಇದರಿಂದ ಸ್ಥಳೀಯವಾಗಿ ಜೇನುಕೃಷಿಕರಿಗೆ ಉದ್ಯೋಗ ಲಭಿಸಿದಂತಾಗುತ್ತದೆ. ಸಾರ್ವಜನಿಕರಿಗೆ ಜೇನು ಸ್ಥಳಾಂತರಕ್ಕೆ ನೆರವಾದಂತೆಯೂ ಆಗುತ್ತದೆ. ಇಂಥದ್ದೊಂದು ಕ್ರಮದ ಬಗ್ಗೆ ಸರ್ಕಾರ ಚಿಂತನೆ ನಡೆಸಬಹುದು. ಜೇನುಗಳ ಸಂರಕ್ಷಣೆಯ ಕುರಿತು ಜಾಗೃತಿ ಮೂಡಿಸುವ ಕೆಲಸವನ್ನೂ ಮಾಡಬೇಕಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಭಾರತ ತಂಡವು ದಕ್ಷಿಣ ಆಫ್ರಿಕಾ ಎದುರು ಟೆಸ್ಟ್ ಸರಣಿ ಸೋತಿತು. ಆ ಹೊತ್ತಿನಲ್ಲಿಯೇ ಪರ್ತ್‌ನಲ್ಲಿ ಆ್ಯಷಸ್ ಸರಣಿಯ ಪಂದ್ಯದಲ್ಲಿ ಇಂಗ್ಲೆಂಡ್ ತಂಡವು ಆಸ್ಟ್ರೇಲಿಯಾ ಎದುರು ಹೀನಾಯವಾಗಿ ಪರಾಭವಗೊಂಡಿತು. ಎರಡೇ ದಿನದಲ್ಲಿ ಪಂದ್ಯ ಮುಗಿದಿತ್ತು. ಆದರೆ ಹೆಚ್ಚು ಚರ್ಚೆಯಾಗುತ್ತಿರುವುದು ಭಾರತದ ಸೋಲಿನ ಬಗ್ಗೆ. ಅದರಲ್ಲೂ ಮುಖ್ಯ ಕೋಚ್ ಗೌತಮ್ ಗಂಭೀರ್ ಅವರ ಕಾರ್ಯವೈಖರಿ ಕುರಿತು ವ್ಯಾಪಕ ಟೀಕೆಗಳು ಕೇಳಿಬರುತ್ತಿವೆ. ಸ್ಪಿನ್ ಕಲೆಯನ್ನು ಜಗತ್ತಿಗೆ ಕಲಿಸಿಕೊಟ್ಟ ಭಾರತವು ಈಗ ಸ್ಪಿನ್ ಎದುರು ಬ್ಯಾಟಿಂಗ್ ಮಾಡಲು ಮರೆತಿದೆ. ಬೌಲಿಂಗ್ ಕೂಡ ಅಷ್ಟಕ್ಕಷ್ಟೆ. ಒಟ್ಟಿನಲ್ಲಿ ಭಾರತದ ಟೆಸ್ಟ್ ಕ್ರಿಕೆಟ್ ಭವಿಷ್ಯ ಡೋಲಾಯಮಾನವಾಗಿದೆ





ಭಾರತದ ಟೆಸ್ಟ್ ಕ್ರಿಕೆಟ್ ಸ್ಥಿತಿ 'ಗಂಭೀರ'

• ಗಿರೀಶ ದೊಡ್ಡಮನಿ



ಪ್ರಮುಖ ಅಂಶಗಳು

5 ಈ ಸರಣಿಯಲ್ಲಿ ದಾಖಲಾದ ಒಟ್ಟು ಅರ್ಧಶತಕಗಳು. ಅದರಲ್ಲಿ ಎರಡು ಭಾರತದ ಬ್ಯಾಟರ್‌ಗಳದ್ದು.

163 ಸರಣಿಯಲ್ಲಿ ಅತಿ ಹೆಚ್ಚು ರನ್ ಗಳಿಸಿದ ದಕ್ಷಿಣ ಆಫ್ರಿಕಾದ ಬ್ಯಾಟರ್ ಟ್ರಿಸ್ಟನ್ ಸ್ಟಬ್ಸ್

10 ಭಾರತದ ಪರ ಅತ್ಯಧಿಕ ವಿಕೆಟ್ ಪಡೆದ ಬೌಲರ್ ರವೀಂದ್ರ ಜಡೇಜ

1 ಸರಣಿಯಲ್ಲಿ ದಾಖಲಾಗಿದ್ದು ಏಕೈಕ ಶತಕ. ಸೆನುರನ್ ಮುತ್ತುಸಾಮಿ ಗಳಿಸಿದರು

ದ. ಆಫ್ರಿಕಾ ಸರಣಿಯಲ್ಲಿ ಭಾರತದ ಬ್ಯಾಟರ್‌ಗಳು

ಬ್ಯಾಟರ್	ರನ್
ಯಶಸ್ವಿ ಜೈಸ್ವಾಲ್	83
ಸಾಯಿ ಸುದರ್ಶನ್	29
ಕೆ.ಎಲ್. ರಾಹುಲ್	68
ಧ್ರುವ ಜುರೇಲ್	29
ರಿಷಭ್ ಪಂತ್	49
ರವೀಂದ್ರ ಜಡೇಜ	105
ವಾಷಿಂಗ್ಟನ್ ಸುಂದರ್	124

ಗುವಾಹಟಿಯ ಪಿಚ್ ಮೇಲೆ ಹತಾಶೆಯಿಂದ ಮಂಡಿಯೂರಿ ಹಣೆಯನ್ನು ನೆಲಕ್ಕೆ ಹಚ್ಚಿದ್ದ ರವೀಂದ್ರ ಜಡೇಜ ಕಂಗಳಿಂದ ಜಾರಿದ್ದ ಹನಿಗಳು ಮಣ್ಣಿನಲ್ಲಿ ಬೆರೆತುಹೋದವು. ದಕ್ಷಿಣ ಆಫ್ರಿಕಾ ಎದುರಿನ ಎರಡನೇ ಟೆಸ್ಟ್‌ನಲ್ಲಿ ಸೋಲುವುದನ್ನು ತಪ್ಪಿಸಲು ಅವರು ಮಾಡಿದ ಹೋರಾಟವೂ ಮಣ್ಣುಪಾಲಾಯಿತು. ಪರಿಣತ ಬ್ಯಾಟರ್‌ಗಳು ವಿಫಲವಾಗಿದ್ದ ಅಂಗಣದಲ್ಲಿ ಸ್ಪಿನ್ನರ್–ಆಲ್‌ರೌಂಡರ್ ಜಡೇಜ ಅರ್ಧಶತಕ ಹೊಡೆದಿದ್ದರು. ಅವರು ತೋರಿದ್ದ ಛಲ, ಬಲ ಮತ್ತು ಹೋರಾಟವು ಇನ್ನುಳಿದ ಆಟಗಾರರಲ್ಲಿ ಕಾಣಲಿಲ್ಲ. ಅದರ ಫಲವಾಗಿ ತಂಡವು 408 ರನ್‌ಗಳ ಹೀನಾಯ ಸೋಲು ಅನುಭವಿಸಿತು.

ಕ್ರೀಡಾಂಗಣದಲ್ಲಿ ಸೇರಿದ್ದ ಅಭಿಮಾನಿಗಳ ಆಕ್ರೋಶ ಭಾರತ ತಂಡದ ಮುಖ್ಯ ಕೋಚ್ ಗೌತಮ್ ಗಂಭೀರ್ ಅವರತ್ತ ತಿರುಗಿತು. 'ಗೋ ಬ್ಯಾಕ್...' ಘೋಷಣೆಗಳು ಪ್ರತಿಧ್ವನಿಸಿದವು. ಸಾಮಾಜಿಕ ಜಾಲತಾಣಗಳಲ್ಲಿ ಆಕ್ರೋಶ ಕಟ್ಟೆಯೊಡೆಯಿತು. ಒಂದು ವರ್ಷದ ಅಂತರದಲ್ಲಿ ಭಾರತ ತಂಡವು ತವರಿನಲ್ಲಿ ನಡೆದ ಎರಡು ಸರಣಿಗಳಲ್ಲಿ ವೈಟ್‌ವಾಷ್ ಆಗಿರುವುದೇ ಈ ಅಸಮಾಧಾನಕ್ಕೆ ಕಾರಣವಾಗಿದೆ. ಗಂಭೀರ್ ಬಂದ ನಂತರ ಭಾರತ ತಂಡವು 2–0ಯಿಂದ ಬಾಂಗ್ಲಾದೇಶ ಎದುರು ಟೆಸ್ಟ್ ಸರಣಿಯಲ್ಲಿ ಗೆದ್ದಿತು. ಅದರ ನಂತರ ತವರಿನಲ್ಲಿ ನಡೆದ ನ್ಯೂಜಿಲೆಂಡ್ ಎದುರಿನ ಟೆಸ್ಟ್ ಸರಣಿಯಲ್ಲಿ 0–3ರಿಂದ ಮಂಡಿಯೂರಿತು. ಆಸ್ಟ್ರೇಲಿಯಾದಲ್ಲಿ ನಡೆದಿದ್ದ ಸರಣಿಯಲ್ಲಿ 1–3ರಿಂದ ಸೋತಿತ್ತು. ಇಂಗ್ಲೆಂಡ್‌ನಲ್ಲಿ 2–2ರ ಸಮಬಲ ಸಾಧಿಸಿದ್ದು, ಈಚೆಗೆ ಭಾರತದಲ್ಲಿಯೇ ನಡೆದಿದ್ದ ವೆಸ್ಟ್ ಇಂಡೀಸ್ ಎದುರಿನ ಸರಣಿ ಗೆಲುವು ಅವರ ಖಾತೆಯಲ್ಲಿವೆ.

ಭಾರತದ ಟೆಸ್ಟ್ ಕ್ರಿಕೆಟ್ ಅಧಃಪತನವಾಗಿರುವುದಂತೂ ಸತ್ಯ. ಉತ್ತುಂಗದಲ್ಲಿದ್ದ ದೇಶದ ಕ್ರಿಕೆಟ್ ಘನತೆ ಮಣ್ಣುಪಾಲಾಗಿದೆ. ಇದು ಗಂಭೀರ್ ಅವರು ಕಳೆದ ವರ್ಷ ಮುಖ್ಯ ಕೋಚ್ ಆಗಿ ಬಂದ ನಂತರ ಆಗುತ್ತಿರುವುದು ಗಮನಿಸಬೇಕಾದ ಸಂಗತಿ. ಕಳೆದ 66 ವರ್ಷಗಳ ಇತಿಹಾಸದಲ್ಲಿ ಈ ರೀತಿಯ ಹಿನ್ನಡೆಯನ್ನು ಭಾರತವು ಟೆಸ್ಟ್ ಕ್ರಿಕೆಟ್‌ನಲ್ಲಿ ಕಂಡಿರಲಿಲ್ಲ. ತವರಿನಲ್ಲಿ ಎರಡು ಸರಣಿಗಳಲ್ಲಿ ವೈಟ್‌ವಾಷ್ ಆಗಿರುವುದು ತಲೆತಗ್ಗಿಸುವ ವಿಚಾರವೇ ಸರಿ. ಹಾಗಿದ್ದರೆ, ಕೇವಲ ಗಂಭೀರ್ ಅವರೊಬ್ಬರತ್ತ ಬೊಟ್ಟು ತೋರಿಸಿದರೆ ಸಾಕೇ? ಇದರಲ್ಲಿ ತಂಡದ ಆಟಗಾರರ ಪಾತ್ರ ಇಲ್ಲವೇ?

'ಕೋಚ್ ಆದವರು ತಂಡವನ್ನು ಸಿದ್ಧಗೊಳಿಸುತ್ತಾರೆ. ಆದರೆ ಮೈದಾನದಲ್ಲಿ ಆಡಬೇಕಾದವರು ಆಟಗಾರರೇ ಅಲ್ಲವೇ? ಕೋಚ್ ತಮ್ಮ ಅನುಭವಕ್ಕೆ ತಕ್ಕ ಸಲಹೆ, ಸೂಚನೆಗಳನ್ನು ನೀಡುತ್ತಾರೆ. ಅವುಗಳನ್ನು ಅರಿತು ಆಡಬೇಕಾದವರು ಆಟಗಾರರೇ' ಎಂದು ದಿಗ್ಗಜ ಕ್ರಿಕೆಟಿಗ ಸುನಿಲ್ ಗಾವಸ್ಕರ್ ಅಭಿಪ್ರಾಯವನ್ನು ಇಲ್ಲಿ ಗಮನಿಸಬಹುದು. ದಕ್ಷಿಣ ಆಫ್ರಿಕಾ ಎದುರು ಆಡಿದ ತಂಡದಲ್ಲಿ ಯುವ ಆಟಗಾರರೇ ಹೆಚ್ಚಿದ್ದರು. ಆದರೆ ವರ್ಷದ ಹಿಂದೆ ಕಿವೀಸ್ ಎದುರು ನಡೆದ ಸರಣಿಯ ಕತೆ ಏನು?

ನ್ಯೂಜಿಲೆಂಡ್ ತಂಡವು 1955–56ರಿಂದ 12 ಸಲ ಭಾರತ ಪ್ರವಾಸ ಮಾಡಿತ್ತು. ಆದರೆ ಹೋದವರ್ಷವೇ ಅವರಿಗೆ ಸರಣಿ ಜಯಿಸಲು ಸಾಧ್ಯವಾಗಿತ್ತು. ಬೆಂಗಳೂರಿನಲ್ಲಿ ನಡೆದಿದ್ದ ಸರಣಿಯ ಮೊದಲ ಪಂದ್ಯದ ಪ್ರಥಮ ಇನಿಂಗ್ಸ್‌ನಲ್ಲಿ 46 ರನ್‌ಗಳಿಗೆ ಭಾರತ ತಂಡವು ಮುಗ್ಗರಿಸಿತ್ತು. ಅಷ್ಟೇನೂ ಅನುಭವಿಗಳಿಲ್ಲದ ಕಿವೀಸ್ ತಂಡದ ಎದುರು ತಂಡವು ಹೀನಾಯ ಸ್ಥಿತಿ ತಲುಪಿತ್ತು. ರೋಹಿತ್ ಶರ್ಮಾ ತಂಡದ ನಾಯಕರಾಗಿದ್ದರು. ವಿರಾಟ್ ಕೊಹ್ಲಿ ಕೂಡ ತಂಡದಲ್ಲಿದ್ದರು. ಆದರೆ ಬೆಂಗಳೂರು ಪಂದ್ಯದ ಸೋಲಿನಿಂದ ತಂಡವು ಬುದ್ಧಿ ಕಲಿಯಲಿಲ್ಲ. ಸರಣಿಯ ಎಲ್ಲ ಪಂದ್ಯಗಳಲ್ಲಿಯೂ ಸೋತಿತು. ನಂತರ ಆಸ್ಟ್ರೇಲಿಯಾದಲ್ಲಿಯೂ ನಿರಾಶೆ. ಖ್ಯಾತನಾಮ ಸ್ಪಿನ್ನರ್ ಆರ್.ಅಶ್ವಿನ್ ಅವರ ದಿಢೀರ್ ನಿವೃತ್ತಿ ಘೋಷಣೆ ಚರ್ಚೆಗೆ ಗ್ರಾಸವಾಯಿತು. ಅಲ್ಲದೇ ಡ್ರೆಸಿಂಗ್ ರೂಮ್ ವಾತಾವರಣ ಹದ ತಪ್ಪಿರುವ ಕುರಿತ ಗಾಳಿಸುದ್ದಿಗಳು ಓಡಾಡಿದವು.

ಕಳೆದ ಜುಲೈನಲ್ಲಿ ಇಂಗ್ಲೆಂಡ್ ಟೆಸ್ಟ್ ಸರಣಿಗೂ ಕೆಲವು ದಿನಗಳ ಮುನ್ನ ರೋಹಿತ್ ಮತ್ತು ಕೊಹ್ಲಿ ಅವರು ನಿವೃತ್ತಿ ಘೋಷಿಸಿದರು. ಏಕದಿನ ಕ್ರಿಕೆಟ್‌ನಲ್ಲಿ ಮಾತ್ರ ಮುಂದುವರಿಯುವುದಾಗಿ ಹೇಳಿದರು. ಹೊಸ ನಾಯಕ ಶುಭಮನ್ ಗಿಲ್ ಅವರ ಬಳಗವು ಇಂಗ್ಲೆಂಡ್‌ನಲ್ಲಿ ಸಮಬಲ ಸಾಧಿಸಿ ಬಂದಿದ್ದು ದೊಡ್ಡ ಸಾಧನೆಯಾಯಿತು. ಮೇಲ್ನೋಟಕ್ಕೆ ಸಮಸ್ಯೆ ಬಗೆಹರಿದಂತೆ ಕಂಡಿತು. ಆದರೆ ಇದೀಗ ತೆಂಬಾ ಬವುಮಾ ನಾಯಕತ್ವದ ದಕ್ಷಿಣ ಆಫ್ರಿಕಾ ತಂಡವು ಭಾರತ ತಂಡದೊಳಗೆ ಎಲ್ಲವೂ ಸರಿಯಿಲ್ಲ ಎಂಬುದನ್ನು ಬಹಿರಂಗಗೊಳಿಸಿದೆ.

ಆಲ್‌ರೌಂಡರ್ ವ್ಯಾಮೋಹ: ಗಂಭೀರ್ ಅವರು ಹನ್ನೊಂದರ ಬಳಗವನ್ನು ಆಯ್ಕೆ ಮಾಡುತ್ತಿರುವ ವಿಧಾನ ಮತ್ತು ಬ್ಯಾಟರ್‌ಗಳ ಕ್ರಮಾಂಕದ ಕುರಿತು ಈಗ ಚರ್ಚೆ ಜೋರಾಗಿದೆ. ಬ್ಯಾಟಿಂಗ್ ಕ್ರಮಾಂಕಕ್ಕೆ ಬಲ ತುಂಬಲು ಹೆಚ್ಚು ಆಲ್‌ರೌಂಡರ್‌ಗಳಿಗೆ ಸ್ಥಾನ ನೀಡುವ ಗಂಭೀರ್ ಅವರ ಯೋಜನೆ ಕೈಕೊಡುತ್ತಿದೆ. ವಾಷಿಂಗ್ಟನ್ ಅವರನ್ನು ಮೊದಲ ಪಂದ್ಯದಲ್ಲಿ ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡಿಸಲಾಯಿತು. ಎರಡನೆಯದ್ದರಲ್ಲಿ ಎಂಟನೇ ಕ್ರಮಾಂಕದಲ್ಲಿ ಆಡಿಸಲಾಯಿತು. ಗಾಯಗೊಂಡ ಶುಭಮನ್ ಗಿಲ್ ಬದಲು ನಿತೀಶ್ ಕುಮಾರ್ ರೆಡ್ಡಿ ಅವರನ್ನು ತಂಡಕ್ಕೆ ಸೇರ್ಪಡೆ ಮಾಡಿಕೊಂಡಿದ್ದು ಪ್ರಯೋಜನವಾಗಲಿಲ್ಲ.

ಇನ್ನು ಸ್ಪಿನ್ ಬೌಲರ್‌ಗಳೂ ಬ್ಯಾಟಿಂಗ್‌ಗೆ ಹೆಚ್ಚು ನೆರವು ಇದ್ದ ಪಿಚ್‌ನಲ್ಲಿ ಯಶಸ್ವಿಯಾಗುವ ಕಲೆಯನ್ನು ಮರೆತಂತಿದೆ. ಬಾಲಂಗೋಚಿ ಬ್ಯಾಟರ್ ಮಾರ್ಕೊ ಅವರಿಂದ ದಂಡಿಸಿಕೊಂಡ ರೀತಿಯೇ ಈ ಮಾತಿಗೆ ಉದಾಹರಣೆ. ಭಾರತ ಕ್ರಿಕೆಟ್‌ನ ಇತಿಹಾಸದ ಪುಟಗಳನ್ನು ಮತ್ತೊಮ್ಮೆ ತೆರೆದುನೋಡುವ ಅವಶ್ಯಕತೆ ಅವರಿಗೆ ಇದೆ. ವೆಂಕಟರಾಘವನ್, ಎರ್ರಪಳ್ಳಿ ಪ್ರಸನ್ನ, ಬಿಷನ್ ಸಿಂಗ್ ಬೇಡಿ, ಬಿ.ಎಸ್. ಚಂದ್ರಶೇಖರ್, ಅನಿಲ್ ಕುಂಬ್ಳೆ, ಆರ್. ಅಶ್ವಿನ್, ಹರಭಜನ್ ಸಿಂಗ್ ಅವರು ಬಲಾಢ್ಯ ತಂಡಗಳ ಬ್ಯಾಟರ್‌ಗಳ ಸವಾಲನ್ನು ಮೆಟ್ಟಿ ನಿಂತ ಐತಿಹಾಸಿಕ ಘಟನೆಗಳನ್ನು ಮತ್ತೊಮ್ಮೆ ನೋಡಿ ಕಲಿಯಬೇಕು.

'ಭಾರತದಲ್ಲಿ ಸರಣಿ ಆಡಲು ಬರುವ ತಂಡಗಳು ಆತಂಕದೊಂದಿಗೇ ಬರುತ್ತಿದ್ದವು. ಅದಕ್ಕೆ ಕಾರಣ ಭಾರತ ತಂಡಕ್ಕೆ ಇದ್ದ ಪ್ರಭಾವಳಿ. ಆದರೆ ಈಗ ಅಂತಹ ಪ್ರಭಾವಳಿಯೇ ಕಾಣುತ್ತಿಲ್ಲ' ಎಂದು ವೀಕ್ಷಕ ವಿವರಣೆಗಾರ ಹರ್ಷ ಭೋಗ್ಲೆ ಹೇಳಿದ್ದಾರೆ.

ಆ ವೈಭವವನ್ನು ಮರಳಿ ತರಲು ಬಿಸಿಸಿಐ ಏನು ಹೆಜ್ಜೆ ಇಡಲಿದೆ ಎಂಬ ಕುತೂಹಲ ಈಗ ಗರಿಗೆದರಿದೆ. ಈ ಪ್ರಕ್ರಿಯೆಯಲ್ಲಿ ಗಂಭೀರ್ ಸ್ಥಾನ ಕಳೆದುಕೊಳ್ಳುವರೇ ಅಥವಾ ಮುಂಬರುವ ಟಿ20 ವಿಶ್ವಕಪ್ ಟೂರ್ನಿ ಮುಗಿಯುವವರೆಗೂ ಮುಂದುವರಿಯುವರೇ ಎಂದು ಕಾದು ನೋಡಬೇಕಿದೆ.

ಡಬ್ಲ್ಯುಟಿಸಿ ರ್‍ಯಾಂಕ್ ಕುಸಿತ

ಭಾರತ ತಂಡವು ಸದ್ಯ ಡಬ್ಲ್ಯುಟಿಸಿ ರ್‍ಯಾಂಕ್‌ನಲ್ಲಿ ಐದನೇ ಸ್ಥಾನಕ್ಕೆ ಕುಸಿದಿದೆ. ಇನ್ನುಳಿದ ಟೂರ್ನಿಗಳಲ್ಲಿ ಹೆಚ್ಚು ಅಂಕಗಳನ್ನು ಗಳಿಸುವ ಒತ್ತಡವಿದೆ. ಭಾರತ ತಂಡವು ತನ್ನ ಮುಂದಿನ ಟೆಸ್ಟ್ ಸರಣಿಯನ್ನು ಮುಂದಿನ ವರ್ಷದ ಆಗಸ್ಟ್‌ನಲ್ಲಿ ಆಡಲಿದೆ. ಅಲ್ಲಿಯವರೆಗೂ ಬಿಳಿ ಚೆಂಡಿನ ಕ್ರಿಕೆಟ್ ಭರಾಟೆ ಜೋರಾಗಲಿದೆ.

ಕ್ಷಮೆಯಾಚಿಸಿದ ಪಂತ್



ರಿಷಭ್ ಪಂತ್

ನವದೆಹಲಿ (ಪಿಟಿಐ): ದಕ್ಷಿಣ ಆಫ್ರಿಕಾ ಎದುರಿನ ಟೆಸ್ಟ್ ಸರಣಿಯ ಸೋಲಿಗೆ ಭಾರತ ತಂಡದ ಹಂಗಾಮಿ ನಾಯಕ ರಿಷಭ್ ಪಂತ್ ಅವರು ಕ್ಷಮೆ ಕೇಳಿದ್ದಾರೆ.

'ಮತ್ತೆ ಒಗ್ಗೂಡಿ, ಮುಂದೆ ಸಾಗುವತ್ತ ಚಿತ್ತ ಹರಿಸುತ್ತೇವೆ' ಎಂದು ಪಂತ್ ಹೇಳಿದ್ದಾರೆ. 'ಕಳೆದೆರಡು ವಾರಗಳಲ್ಲಿ ನಾವು ಒಳ್ಳೆಯ ಕ್ರಿಕೆಟ್ ಆಡಿಲ್ಲವೆಂಬ ಸತ್ಯವನ್ನು ಒಪ್ಪಿಕೊಳ್ಳಲು ನನಗೆ ಹಿಂಜರಿಕೆ ಇಲ್ಲ. ತಂಡವಾಗಿ ಮತ್ತು ವೈಯಕ್ತಿಕವಾಗಿ ಉತ್ಕೃಷ್ಟ ದರ್ಜೆಯ ಕ್ರಿಕೆಟ್ ಆಡಿ ಲಕ್ಷಾಂತರ ಭಾರತೀಯರನ್ನು ಸಂತುಷ್ಟಗೊಳಿಸಲು ನಾವು ಪ್ರಯತ್ನಿಸುತ್ತೇವೆ. ಆದರೆ ಈ ಬಾರಿ ನಿರೀಕ್ಷೆಗಳಿಗೆ ತಕ್ಕಂತಹ ಫಲಿತಾಂಶ ನೀಡಲು ನಮ್ಮಿಂದ ಸಾಧ್ಯವಾಗಿಲ್ಲ. ಅದಕ್ಕಾಗಿ ಕ್ಷಮೆಯಾಚಿಸುತ್ತೇನೆ. ಈ ತಂಡದಲ್ಲಿ ಪುಟಿದೇಳುವ ಸಾಮರ್ಥ್ಯ ಇದೆ. ಮತ್ತೆ ಎಲ್ಲ ಶಕ್ತಿ ಒಗ್ಗೂಡಿಸಿಕೊಂಡು ಕಣಕ್ಕೆ ಮರಳುತ್ತೇವೆ. ಕಠಿಣ ಪರಿಶ್ರಮದೊಂದಿಗೆ ಗೆಲುವಿನತ್ತ ಸಾಗುತ್ತೇವೆ' ಎಂದು ಪಂತ್ 'ಎಕ್ಸ್'ನಲ್ಲಿ ಸಂದೇಶ ಹಾಕಿದ್ದಾರೆ.

ದಕ್ಷಿಣ ಆಫ್ರಿಕಾದ ಸರಣಿಯಲ್ಲಿ ಶುಭಮನ್ ಗಿಲ್ ಗಾಯಗೊಂಡಿದ್ದರಿಂದ ಎರಡನೇ ಟೆಸ್ಟ್‌ನಲ್ಲಿ ಪಂತ್ ಅವರು ನಾಯಕತ್ವ ವಹಿಸಿದ್ದರು.

ಸ್ಪಿನ್ ಆಡಲು ಬರಲ್ಲವೇ?



'ಸ್ಪಿನ್ ಸುಲ್ತಾನರ ನಾಡು' ಎಂಬ ಹೆಗ್ಗಳಿಕೆ ಹೊಂದಿರುವ ಭಾರತದಲ್ಲಿ ಈಗ ಸ್ಪಿನ್ ಬೌಲಿಂಗ್ ಎಂಬ ಕಲೆ ಅಸ್ತಿತ್ವ ಕಳೆದುಕೊಂಡಿದೆ ಎಂಬುದನ್ನೂ ತೆಂಬಾ ಬವುಮಾ ಬಳಗ ತೋರಿಸಿಕೊಟ್ಟಿದೆ.

'ದಶಕಗಳ ಹಿಂದೆ ಭಾರತಕ್ಕೆ ಸರಣಿ ಆಡಲು ಬರುವ ತಂಡಗಳು ಹೆದರುತ್ತಿದ್ದವು. ಆದರೆ ಈಗ ಹಾಗಿಲ್ಲ. ಭಾರತದಲ್ಲಿ ಸರಣಿ ಆಡಿದರೆ ತಮ್ಮ ಯಶಸ್ಸಿನ ಸೂಚ್ಯಂಕವನ್ನು ಹೆಚ್ಚು ಮಾಡಿಕೊಳ್ಳುವ ವಿಶ್ವಾಸದೊಂದಿಗೆ ವಿದೇಶಿ ಆಟಗಾರರು ಬರುತ್ತಿದ್ದಾರೆ' ಎಂದು ವೀಕ್ಷಕ ವಿವರಣೆಗಾರ ದಿನೇಶ್ ಕಾರ್ತಿಕ್ ವ್ಯಂಗ್ಯ ಮಾಡಿದ್ದಾರೆ.

ಅವರ ಮಾತುಗಳಲ್ಲಿ ಅರ್ಥವಿದೆ. ಕಿವೀಸ್ ಎದುರಿನ ಸರಣಿಯಲ್ಲಿ ಸ್ಪಿನ್ನರ್ ಮಿಚೆಲ್ ಸ್ಯಾಂಟನರ್ ಅವರು ಯಶಸ್ವಿಯಾಗುವುದರೊಂದಿಗೆ ತಾರಾಪಟ್ಟಕ್ಕೇರಿದರು. ಇದೀಗ ದಕ್ಷಿಣ ಆಫ್ರಿಕಾದ ಸಿಮೊನ್ ಹಾರ್ಮರ್ ಪ್ರವರ್ಧಮಾನಕ್ಕೆ ಬಂದಿದ್ದಾರೆ.

ದಕ್ಷಿಣ ಆಫ್ರಿಕಾ ಎದುರಿನ ಸರಣಿಯಲ್ಲಿ ಭಾರತ ತಂಡವು ಪ್ರಮುಖವಾಗಿ ವಿಫಲವಾಗಿದ್ದು ಬ್ಯಾಟಿಂಗ್‌ನಲ್ಲಿ. ಪರಿಣತ ಬ್ಯಾಟರ್‌ಗಳಾದ ಕೆ.ಎಲ್. ರಾಹುಲ್, ಯಶಸ್ವಿ ಜೈಸ್ವಾಲ್, ಸಾಯಿ ಸುದರ್ಶನ್, ರಿಷಭ್ ಪಂತ್, ಧ್ರುವ ಜುರೇಲ್ ಅವರಿಗೆ ಎರಡು ಪಂದ್ಯಗಳಿಂದ ಮೂರಂಕಿ ಮೊತ್ತ ಸೇರಿಸಲು ಸಾಧ್ಯವಾಗಲಿಲ್ಲ. ಇದ್ದುದರಲ್ಲಿ ಸ್ಪಿನ್–ಆಲ್‌ರೌಂಡರ್‌ಗಳಾದ ರವೀಂದ್ರ ಜಡೇಜ, ವಾಷಿಂಗ್ಟನ್ ಸುಂದರ್ ಮತ್ತು ಕುಲದೀಪ್ ಯಾದವ್ ಅವರು ಬ್ಯಾಟರ್‌ಗಳಿಗಿಂತ ಹೆಚ್ಚು ಹೊತ್ತು ಕ್ರೀಸ್‌ನಲ್ಲಿ ಕಳೆದರು. ದೇಶಿ ಕ್ರಿಕೆಟ್ ವ್ಯವಸ್ಥೆ ಅತ್ಯಂತ ಬಲಿಷ್ಠವಾಗಿರುವ ದೇಶಗಳಲ್ಲಿ ಭಾರತ ಅಗ್ರಗಣ್ಯವಾಗಿದೆ. ರಣಜಿ ಟ್ರೋಫಿ ಪಂದ್ಯಗಳು ನಡೆಯುವ ಪಿಚ್‌ಗಳಲ್ಲಿ ಸ್ಪಿನ್ನರ್‌ಗಳು ಮಿಂಚುವುದೇ ಹೆಚ್ಚು. ಆದರೂ ಹಾರ್ಮರ್ ಅವರಂತಹ ಸ್ಪಿನ್ನರ್‌ಗಳನ್ನು ಎದುರಿಸುವಲ್ಲಿ ಬ್ಯಾಟರ್‌ಗಳು ವಿಫಲವಾಗಿದ್ದು ಯಾಕೆ?

ಇನ್ನು ಸ್ಪಿನ್ ಬೌಲಿಂಗ್ ಕೂಡ ಈ ಸರಣಿಯಲ್ಲಿ ಉತ್ಕೃಷ್ಟವಾಗಿರಲಿಲ್ಲ. ಈಡನ್ ಗಾರ್ಡನ್‌ನಲ್ಲಿ ನಡೆದಿದ್ದ ಮೊದಲ ಪಂದ್ಯದಲ್ಲಿ ಚೆಂಡು ಯರ್‍ರಾಬಿರ್‍ರಿ ತಿರುಗುತ್ತಿತ್ತು. ಅದರಲ್ಲಿಯೇ ಎರಡನೇ ಇನಿಂಗ್ಸ್‌ನಲ್ಲಿ ಬವುಮಾ ಗಳಿಸಿದ ಹೋರಾಟದ ಅರ್ಧಶತಕ ಸ್ಪಿನ್ ಬೌಲಿಂಗ್ ಎದುರಿಸಿ ನಿಲ್ಲುವ ಪಾಠ ಕಲಿಸಿತ್ತು. ಆದರೆ ಗುವಾಹಟಿಯ ಪಿಚ್ ಬ್ಯಾಟರ್‌ಗಳಿಗೇ ಹೆಚ್ಚು ಉಪಯುಕ್ತವಾಗಿತ್ತು. ಕೇವಲ ಏಳು ಟೆಸ್ಟ್ ಪಂದ್ಯಗಳನ್ನಾಡಿದ ಅನುಭವಿ ಸೆನುರನ್ ಮುತ್ತುಸಾಮಿ ಶತಕ ಬಾರಿಸಿದರು. ಮಾರ್ಕೊ ಯಾನ್ಸೆನ್ ಅವರು ಬೌಲರ್‌ಗಳನ್ನು ಮನಬಂದಂತೆ ದಂಡಿಸಿದರು. ಭಾರತದ ರವೀಂದ್ರ ಜಡೇಜ ಅವರ ದಿಟ್ಟ ಅರ್ಧಶತಕವೂ ಕಲಾತ್ಮಕವಾಗಿತ್ತು. ಸ್ವೀಪ್, ಸ್ಲಾಗ್ ಸ್ವೀಪ್, ಫ್ರಂಟ್‌ಫೂಟ್ ಡ್ರೈವ್‌ಗಳ ಮಿಶ್ರಣ ಗಮನಿಸುವಂತಿತ್ತು.

ಅಪಾತ್ರರಿಗೆ ದಾನ ಮಾಡಬಾರದು

ನುಡಿ ಬೆಳಗು



ರೇಣುಕಾ ನಿಡಗುಂದಿ

ಒಂದು ಊರಿನಲ್ಲಿ ಒಂದು ಚಿಕ್ಕ ಮನೆಯಲ್ಲಿ ರಾಮಣ್ಣ ಎಂಬ ದಯಾಳು ರೈತನು ತನ್ನ ಮೂರು ಮಕ್ಕಳೊಂದಿಗೆ ನೆಲಸಿದ್ದ. ಆ ಮನೆಯಲ್ಲಿ ಗಾಳಿ ಬೆಳಕು ಸೂರ್ಯನ ಬಿಸಿಲು ಧಾರಾಳವಾಗಿ ಬರುತ್ತಿದ್ದು, ಮನೆ ಮಕ್ಕಳ ನಗುವಿನಿಂದ ಜೀವಂತಿಕೆ ಇತ್ತು. ರಾಮಣ್ಣ ಯಾವಾಗಲೂ ಹೇಳುತ್ತಿದ್ದ: 'ದಾನವು ನಮ್ಮ ಹೃದಯದ ಬೀಜ. ಅದನ್ನು ಸರಿಯಾದ ಮಣ್ಣಿನಲ್ಲಿ ಬಿತ್ತಿದರೆ ಸಮಾಜದ ಮರವಾಗಿ ಬೆಳೆಯುತ್ತದೆ'. ಮಕ್ಕಳು ಪಿಳಿಪಿಳಿ ಕಣ್ಣು ಬಿಟ್ಟುಕೊಂಡು ಕೇಳುತ್ತಿದ್ದರು.

ಒಂದು ಬಿಸಿಲು ಬೆಚ್ಚಗಿನ ಮಧ್ಯಾಹ್ನದಲ್ಲಿ, ಮನೆಯ ಮುಂಗಟ್ಟಿನಲ್ಲಿ ಒಬ್ಬ ಯುವಕ ಭಿಕ್ಷೆಗಾಗಿ ಬಂದ. 'ಅಯ್ಯಾ, ನಾನು ಮೂರು ದಿನಗಳಿಂದ ಏನೂ ತಿಂದಿಲ್ಲ. ಒಂದು ರೊಟ್ಟಿಯನ್ನಾದರೂ ನೀಡಿ' ಎಂದು ಬೇಡಿಕೊಂಡ. ಅವನ ದೈನ್ಯವನ್ನು ಕಂಡು ರಾಮಣ್ಣನ ಕಣ್ಣುಗಳು ತುಂಬಿ ಬಂದವು. 'ಬಾರಪ್ಪಾ' ಎಂದು ಅವನ ಕೈಯನ್ನು ಹಿಡಿದುಕೊಂಡು ಮನೆಯೊಳಗೆ ಕರೆದುಕೊಂಡು ಬಂದ. ಸ್ನಾನಕ್ಕೆ ಬಿಸಿ ನೀರು ಕೊಟ್ಟು ಉಪಚರಿಸಿದ. ನಂತರ, ಹೊಸದಾಗಿ ಖರೀದಿಸಿದ ಪ್ಯಾಂಟ್ ಮತ್ತು ಶರ್ಟ್ ತೊಟ್ಟುಕೊಳ್ಳಲು ನೀಡಿದ. ರಾಮಣ್ಣನ ಹೆಂಡತಿ ಬಿಸಿಬಿಸಿ ಅನ್ನ, ಉಪ್ಪಿನಕಾಯಿ, ಚಪಾತಿ, ಸೊಪ್ಪು ಪಲ್ಯ ಹೊಟ್ಟೆ ತುಂಬಾ ಉಣಬಡಿಸಿದಳು. ಯುವಕನು ಊಟ ಮಾಡುತ್ತಾ 'ಅಣ್ಣಾ, ನೀವು ನನ್ನ ಜೀವ ಉಳಿಸಿದ್ದೀರಿ. ಇದು ನನ್ನ ಜೀವನದ ಅತ್ಯಂತ ಸಂತಸದ ದಿನ' ಎಂದು ಕೈಜೋಡಿಸಿ ಹೇಳಿದ. ಮಕ್ಕಳು ಆ ದೃಶ್ಯವನ್ನು ನೋಡಿ ಕೈ ತಟ್ಟುತ್ತಾ ಸಂತೋಷಪಡುತ್ತಿದ್ದರು. ರಾಮಣ್ಣನು ಕೆಲವು ನೋಟುಗಳನ್ನು ಅವನಿಗೆ ಕೊಡುತ್ತಾ, 'ಇದು ನಿನ್ನ ಭವಿಷ್ಯದ ಬೀಜ. ಅದನ್ನು ಉತ್ತಮ ಕೆಲಸಕ್ಕೆ ಬಳಸು ತಮ್ಮಾ' ಎಂದ. ಯುವಕನು ನಗುಮುಖದೊಂದಿಗೆ ವಿದಾಯ ಹೇಳಿ ಹೊರಟ. ಆ ಮನೆಯಲ್ಲಿ ಒಂದು ದಿವ್ಯ ಸಂತೋಷದ ಗಾಳಿ ಬೀಸುತ್ತಿತ್ತು.


ಸಂಜೆ, ರಾಮಣ್ಣನು ಸಿನಿಮಾ ನೋಡಲು ಚಿತ್ರಮಂದಿರಕ್ಕೆ ಹೋದ. ಟಿಕೆಟ್ ಕೌಂಟರ್ ಬಳಿ ಹಠಾತ್ ಅವನ ಕಣ್ಣು ಒಂದು ಕಡೆ ನೆಟ್ಟಿತು. ಅದೇ ಯುವಕ, ಹೊಸ ಬಟ್ಟೆಗಳಲ್ಲಿ, 'ಬ್ಲ್ಯಾಕ್ ಟಿಕೆಟ್' ಮಾರುತ್ತಿದ್ದ.

'ಸರ್, ಇನ್‌ಸೈಡ್ ಎಂಟ್ರಿ, ಕೇವಲ 50 ರೂಪಾಯಿ. ಫಸ್ಟ್ ರೋ' ಎಂಬ ಉತ್ಸಾಹದ ದನಿ. ದುಃಖದ ಮುಖ, ಕಣ್ಣೀರು ಎಲ್ಲವೂ ನಟನೆಯಾಗಿತ್ತು.

ಆ ಕ್ಷಣ ರಾಮಣ್ಣನಿಗೆ ಹೃದಯ ಒಡೆದಂತೆ ಕಣ್ಣೀರು ಬಂತು. 'ಅಯ್ಯೋ ತಮ್ಮಾ, ನಾನು ನಿನ್ನನ್ನು ದೇವರಂತೆ ಕಂಡಿದ್ದೆ. ನೀನು ಇದನ್ನೇನು ಮಾಡಿದ್ದೀಯಾ?' ಎಂದು ಮನಸ್ಸಿನೊಳಗೆ ಕೇಳಿಕೊಂಡ. ಆ ದಾನ, ಪುಣ್ಯದ ಬೀಜವು ಇಲ್ಲಿ ದುರ್ಬಳಕೆಯ ಬೇರುಗಳನ್ನು ಹೊರಸೂಸುತ್ತಿತ್ತು– ದುಷ್ಕರ್ಮಕ್ಕೆ ಬೆಂಬಲವಾಗಿ.

ಆ ರಾತ್ರಿ ಮನೆಯಲ್ಲಿ ಕುಟುಂಬದ ಸಭೆಯಾಯಿತು. ಮಕ್ಕಳು ಆಶ್ಚರ್ಯದಿಂದ ಕೇಳುತ್ತಿದ್ದರು. ರಾಮಣ್ಣ ಗಂಭೀರವಾಗಿ ಹೇಳಿದ: 'ಮಕ್ಕಳೇ, ದಾನವು ಸೂರ್ಯನಂತೆ– ಅದನ್ನು ಎಲ್ಲರಿಗೂ ಕೊಡದಿರಿ. ಸರಿಯಾದ ಕೈಗಳಿಗೆ ಮಾತ್ರ ಕೊಡಿ. ಅಪಾತ್ರರಿಗೆ ಕೊಟ್ಟರೆ ಅದು ನಮ್ಮ ಪುಣ್ಯವನ್ನು ಕಳೆದುಕೊಳ್ಳುವಂತೆ ಮಾಡುತ್ತದೆ. ಸತ್ಪಾತ್ರರನ್ನು ಹುಡುಕಿ, ನೇರವಾಗಿ ಸಹಾಯ ಮಾಡಿ. ಅದರಲ್ಲೇ ನಿಜವಾದ ಬೆಳವಣಿಗೆಯಿದೆ' ಎಂದು ತಿಳಿಹೇಳಿದ. ❖

ಗುಂಡಣ್ಣ



ರಾಷ್ಟ್ರೀಯ

'ವಂದೇ ಮಾತರಂ', 'ಜೈ ಹಿಂದ್' ಘೋಷಣೆ ತಡೆಗೆ ಆಕ್ಷೇಪ



ಸುಪ್ರಿಯಾ ಶ್ರೀನೇತ್

ನವದೆಹಲಿ (ಪಿಟಿಐ): ಸಂಸದೀಯ ಶಿಷ್ಟಾಚಾರವನ್ನು ಕಾಪಾಡುವುದಕ್ಕಾಗಿ ಸಂಸದರು ಸದನದ ಒಳಗೆ ಹಾಗೂ ಹೊರಭಾಗದಲ್ಲಿ 'ವಂದೇ ಮಾತರಂ' ಹಾಗೂ 'ಜೈ ಹಿಂದ್' ಘೋಷಣೆಗಳನ್ನು ಕೂಗುವಂತಿಲ್ಲ ಎಂದು ರಾಜ್ಯಸಭಾ ಸಚಿವಾಲಯವು ನೆನಪಿಸಿದೆ. ಈ ನಿರ್ಧಾರದ ಬೆನ್ನಲ್ಲೇ, ಬಿಜೆಪಿ ವಿರುದ್ಧ ಕಿಡಿಕಾರಿದ ಕಾಂಗ್ರೆಸ್, 'ದೇಶದ ಸ್ವಾತಂತ್ರ್ಯ ಚಳವಳಿಗೆ ಏನನ್ನೂ ನೀಡದವರಿಗೆ ಈ ಘೋಷಣೆಯಿಂದ ಸಮಸ್ಯೆಯಾಗಿದೆ' ಎಂದು ಪ್ರತಿಕ್ರಿಯಿಸಿದೆ.

ಡಿಸೆಂಬರ್ 1ರಂದು ಸಂಸತ್ತಿನ ಅಧಿವೇಶನ ಆರಂಭವಾಗಲಿದ್ದು, ಅದಕ್ಕೂ ಮುನ್ನ ರಾಜ್ಯಸಭಾ ಸದಸ್ಯರಿಗೆ ಹಂಚಲಾದ ಕೈಪಿಡಿಯಲ್ಲಿ ಈ ಸೂಚನೆಗಳನ್ನು ನೀಡಲಾಗಿದೆ.

ಸದನದ ಘನತೆ ಕಾಪಾಡುವುದಕ್ಕಾಗಿ ಸದಸ್ಯರು ತಮ್ಮ ಭಾಷಣಗಳನ್ನು 'ಧನ್ಯವಾದಗಳು', 'ಜೈ ಹಿಂದ್' ಹಾಗೂ 'ವಂದೇ ಮಾತರಂ' ಘೋಷಣೆಗಳೊಂದಿಗೆ ಮುಕ್ತಾಯಗೊಳಿಸಬಾರದು ಎಂದು ರಾಜ್ಯಸಭೆ ಸಚಿವಾಲಯದ ಅಧಿಸೂಚನೆಯಲ್ಲಿ ತಿಳಿಸಲಾಗಿದೆ. ಈ ನಿರ್ಧಾರಕ್ಕೆ ವಿಡಿಯೊ ಸಂದೇಶದಲ್ಲಿ ಖಾರವಾಗಿ ಪ್ರತಿಕ್ರಿಯಿಸಿದ ಕಾಂಗ್ರೆಸ್ ವಕ್ತಾರೆ ಸುಪ್ರಿಯಾ ಶ್ರೀನೇತ್, 'ನನಗೆ ನಿಜಕ್ಕೂ ಆಘಾತವಾಗಿದೆ. ಈ ಘೋಷಣೆಗಳನ್ನು ಕೂಗಲು ಆಕ್ಷೇಪಣೆಯಾದರೂ ಏಕೆ? ದೇಶದ ಸ್ವಾತಂತ್ರ್ಯ ಹೋರಾಟದ ವೇಳೆ ಬಳಸಲಾಗುತ್ತಿದ್ದ ಘೋಷಣೆಗಳ ಕುರಿತು ಬ್ರಿಟಿಷರಿಗೆ ಸಮಸ್ಯೆ ಗಳಿದ್ದವು. ಈಗ ಬಿಜೆಪಿಗೂ ಸಮಸ್ಯೆ ಉಂಟಾಗಿದೆ' ಎಂದಿದ್ದಾರೆ.

'ಜೈ ಹಿಂದ್' ಎಂದರೆ ಹಿಂದೂಸ್ತಾನದ ಗೆಲುವು ಎಂದರ್ಥ. ಭಾರತವು ಸದಾ ಗೆಲುವು ಪಡೆಯಬೇಕು. ದೇಶದ ಸ್ವಾತಂತ್ರ್ಯ ಚಳವಳಿಯಲ್ಲಿಯೂ ಅದು ಅತ್ಯಂತ ಪ್ರಬಲವಾದ ಘೋಷಣೆಯಾಗಿತ್ತು. ಈ ಘೋಷಣೆಯು ಪ್ರತಿ ಭಾರತೀಯನ ಹೃದಯದ ಬಡಿತ ಹೆಚ್ಚಿಸುತ್ತದೆ' ಎಂದು ತಿಳಿಸಿದ್ದಾರೆ.

ರಾಜ್ಯಸಭಾ ಸಚಿವಾಲಯದ ಮೂಲಗಳ ಪ್ರಕಾರ, 'ಇಂತಹ ಅಧಿಸೂಚನೆಯನ್ನು ಇದೇ ಮೊದಲ ಬಾರಿಗೆ ಹೊರಡಿಸಿದ್ದಲ್ಲ. 2005ರಲ್ಲಿ ಯುಪಿಎ ನೇತೃತ್ವದ ಸರ್ಕಾರದ ಅವಧಿಯಲ್ಲೂ ಇದೇ ಮಾದರಿಯ ಅಧಿಸೂಚನೆ ಹೊರಡಿಸಲಾಗಿತ್ತು' ಎಂದು ತಿಳಿಸಿದೆ.

'ಪಶ್ಚಿಮ ಬಂಗಾಳದಲ್ಲಿ 26 ಲಕ್ಷ ಮತದಾರರು ಹೊಂದಿಕೆ ಆಗುತ್ತಿಲ್ಲ'

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದಲ್ಲಿನ ಈಗಿನ ಮತದಾರರ ಪಟ್ಟಿಯಲ್ಲಿರುವ ಹೆಸರುಗಳ ಪೈಕಿ 26 ಲಕ್ಷ ಮತದಾರರ ಹೆಸರುಗಳು 2002ರ ಪಟ್ಟಿಯೊಂದಿಗೆ ಹೊಂದಿಕೆಯಾಗುತ್ತಿಲ್ಲ ಎಂದು ಚುನಾವಣಾ ಆಯೋಗದ ಅಧಿಕಾರಿಗಳು ತಿಳಿಸಿದ್ದಾರೆ.

2002 ಮತ್ತು 2006ರಲ್ಲಿ ವಿವಿಧ ರಾಜ್ಯಗಳಲ್ಲಿ ನಡೆದ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯನ್ನು (ಎಸ್‌ಐಆರ್) ಈಗ ನಡೆಯುತ್ತಿರುವ ಎಸ್‌ಐಆರ್ ಪ್ರಕ್ರಿಯೆಯ ಜತೆ ಹೋಲಿಸಿ ನೋಡಲಾಗುತ್ತಿದೆ. ಈ ವೇಳೆ ಪಶ್ಚಿಮ ಬಂಗಾಳದಲ್ಲಿ ಇಷ್ಟು ವ್ಯತ್ಯಾಸ ಕಂಡುಬಂದಿದೆ ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

6 ಕೋಟಿ ಅರ್ಜಿ ಡಿಜಿಟಲೀಕರಣ: ಹಾಲಿ ನಡೆಯುತ್ತಿರುವ ಎಸ್‌ಐಆರ್ ಪ್ರಕ್ರಿಯೆ ಅಡಿಯಲ್ಲಿ ಪಶ್ಚಿಮ ಬಂಗಾಳದಲ್ಲಿ ಆರು ಕೋಟಿಗೂ ಹೆಚ್ಚು ಗಣತಿ ನಮೂನೆಗಳ ಡಿಜಿಟಲೀಕರಣ ಮಾಡಲಾಗಿದೆ. ಒಮ್ಮೆ ಈ ಕಾರ್ಯ ಪೂರ್ಣಗೊಂಡ ಬಳಿಕ ನಮೂನೆಗಳನ್ನು ಮ್ಯಾಪಿಂಗ್ ಮಾಡಲಾಗುತ್ತದೆ. ಅಲ್ಲಿ ಅವುಗಳನ್ನು ಹಿಂದಿನ ಎಸ್‌ಐಆರ್ ದಾಖಲೆಗಳೊಂದಿಗೆ ಹೊಂದಿಸಿ ಪರಿಶೀಲಿಸಲಾಗುತ್ತದೆ ಎಂದು ಆಯೋಗದ ಮೂಲಗಳು ತಿಳಿಸಿವೆ. ಡಿಜಿಟಲೀಕರಣ ಕಾರ್ಯ ಮುಂದುವರಿದಂತೆ ಈ ವ್ಯತ್ಯಾಸ ಮತ್ತಷ್ಟು ಹಿಗ್ಗಬಹುದು ಎಂದು ಹೇಳಿದ್ದಾರೆ.

ಕ್ಯಾಲಿಕಟ್ ವಿ.ವಿ: ಪ್ರಶ್ನೆಪತ್ರಿಕೆ ಪುನರಾವರ್ತನೆ


ಕೋಯಿಕ್ಕೋಡ್ (ಪಿಟಿಐ): ಕೇರಳದ ಕ್ಯಾಲಿಕಟ್ ವಿಶ್ವವಿದ್ಯಾಲಯದಲ್ಲಿ ಇತ್ತೀಚೆಗೆ ನಡೆದ ಪದವಿ ಬಹುಶಿಸ್ತೀಯ ಕೋರ್ಸ್‌ನ ಪರೀಕ್ಷೆಗೆ ಕಳೆದ ವರ್ಷದ ಪ್ರಶ್ನೆಪತ್ರಿಕೆಯನ್ನೇ ನೀಡಿರುವುದು ಕಂಡುಬಂದಿದೆ ಎಂದು ಅಧಿಕಾರಿಗಳು ಗುರುವಾರ ಖಚಿತಪಡಿಸಿದ್ದಾರೆ.

'ಈ ವಿಷಯವು ನನ್ನ ಗಮನಕ್ಕೆ ಬಂದಿದ್ದು, ಹೊಸತಾಗಿ ಪರೀಕ್ಷೆ ನಡೆಸುವ ಕುರಿತಂತೆ ಆಡಳಿತ ಮಂಡಳಿಯ ಮುಂದೆ ಪ್ರಸ್ತಾಪಿಸಿ, ಮುಂದಿನ ನಿರ್ಧಾರ ಕೈಗೊಳ್ಳಲಾಗುವುದು' ಎಂದು ವಿ.ವಿಯ ಅಧಿಕಾರಿಗಳು ತಿಳಿಸಿದ್ದಾರೆ.

ನವೆಂಬರ್ 25ರಂದು ನಡೆದ ಮೊದಲ ಸೆಮಿಸ್ಟರ್‌ನ ಮನಃಶಾಸ್ತ್ರದ 'ಒತ್ತಡ ನಿರ್ವಹಣೆಯ ಕಲೆ'ಯ ಕುರಿತಾದ ಪರೀಕ್ಷೆ ವೇಳೆ ಕಳೆದ ವರ್ಷದ ಪ್ರಶ್ನೆಪತ್ರಿಕೆಯನ್ನು ನೀಡಲಾಗಿತ್ತು. ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಪ್ರಶ್ನೆಗಳು ಪುನಾರವರ್ತನೆಯಾಗಿರುವುದನ್ನು ಗಮನಕ್ಕೆ ತಂದಿದ್ದರು. ಇದುವರೆಗೂ ಅಧಿಕೃತ ದೂರುಗಳು ದಾಖಲಾಗಿಲ್ಲ. ಶಿಕ್ಷಕರು ಪರೀಕ್ಷೆಗೂ ಮುನ್ನ ಮೂರು ಮಾದರಿಯ ಪ್ರಶ್ನೆಪತ್ರಿಕೆಗಳನ್ನು ಸಲ್ಲಿಸುತ್ತಾರೆ. ಇದರಲ್ಲಿ ಒಂದು ಪ್ರಶ್ನೆಪತ್ರಿಕೆ ಹಳೆಯದ್ದೇ ಆಗಿತ್ತು. ಪರಿಶೀಲನೆ ವೇಳೆ ಇದು ಬೆಳಕಿಗೆ ಬಂದಿರಲಿಲ್ಲ ಎಂದು ಅವರು ವಿವರಿಸಿದ್ದಾರೆ.

ಪದಬಂಧ 6237

ವಿದ್ಯಾ ವಿನಯ್



ಎಡದಿಂದ ಬಲಕ್ಕೆ

2.ಭಾರತ ದೇಶವನ್ನು ಹೀಗೂ ಕರೆಯುತ್ತಾರೆ (5)
4.ಜಲಪಾತವಿಲ್ಲಿ ಉಲ್ಟಾ ಕಾಣುತ್ತಿದೆ (2)
6.ಮಜದಲ್ಲಿರುವ ಚಕ್ರವರ್ತಿ! (4)
9.ಆ ದಿವಸ ತಂದಿರುವ ಕಾಲುಕಡಿ (3)
11.ಅನುಭವ ಇಲ್ಲದವನು (5)
12.ಪ್ರಯಾಸವಾಗದ ಪಯಣ (3)
14.ಬೆಟ್ಟದ ಮೇಲಿರುವ ಕೋಟೆ (4)
16.ಶ್ರದ್ಧೆಯಿಲ್ಲಿ ತಿರುವುಮುರುವಾಗಿದೆ (2)
18.ದಾರಿಯಲ್ಲಿ ವಹಿಸಿಕೊಂಡಿರುವ ಹೊಣೆಗಾರಿಕೆ (5)

ಮೇಲಿಂದ ಕೆಳಕ್ಕೆ

1.ರಾಜನ ನಿವಾಸ (4)
2.ರಭಸವಾಗಿ ಓಡುವ ಕತ್ತೆ ಉಲ್ಟಾ ನಿಂತಿದೆಯಲ್ಲಾ! (3)
3.ರೈಲುಬಂಡೆಯಲ್ಲಿನ ಬೋಗಿ (2)
5.ಧಾವಂತಕ್ಕೊಂದು ಪರ್ಯಾಯ ಪದ (4)
7.ಜನಪ್ರಿಯನಾದವನು ರಾಗಿ ಹಿಡಿದಿದ್ದಾನಲ್ಲಾ (5)
8.ಪದ ಹೇಳಿ ಪಡೆದ ಡಿಗ್ರಿ (3)
10.ಸ್ವಂತದ ಬಗ್ಗೆ ಹೆಮ್ಮೆಪಡುವುದು (4)
11.ಮೂಲಧನ ಇಲ್ಲಿದೆ (3)
13.ಗಣಿತದಲ್ಲಿ ವರ್ಗ ಸಂಖ್ಯೆ ಬರಲು ಕಾರಣವಾದ ಮೂಲಸಂಖ್ಯೆ (4)
15.ತಿರುಗಿ ನೋಡಿದರೂ ಇದು ದುರಸ್ತಿ! (3)
17.ಜನನಿ ನುಡಿದಿರುವ ಸತ್ಯ (2)

6236ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅತ್ತೆ 3.ಶಾಪ 5.ಪಳಿಯುಳಿಕೆ 6.ತದ್ಭವ 7.ಪಾರ್ಥಿವ 8.ಸಾರ್ವಜನಿಕ 9.ಸಂಧಾನ 10.ಪ್ರಪಾತ 13.ಸೋದಾಹರಣ 14.ನಿಶೆ 15.ಸೋಲು

ಮೇಲಿಂದ ಕೆಳಕ್ಕೆ:
1.ಅಗಣಿತ 2.ಆಯುಧ 4.ಪರಾಭವ 5.ಪರ್ಯವಸಾನ 7.ಪಾಕಪ್ರವೀಣ 9.ಸಂಜೀವಿನಿ 11.ತಡಸಲು 12.ಕುಹಕಿ

ಸುಡೊಕು 6621

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

			4		2		7	
3		6				2		5
				5			8	
8		5						1
			5	9	3		2	
7		2		6		5		4
				2		8		7
2		7					6	
6			7		9	4		

6620 ಸುಡೊಕು

5	3	4	9	8	2	1	7	6
1	7	6	3	4	5	9	8	2
9	8	2	1	6	7	3	4	5
7	2	3	5	9	8	6	1	4
6	5	9	7	1	4	2	3	8
4	1	8	2	3	6	5	9	7
2	9	5	8	7	1	4	6	3
3	6	7	4	2	9	8	5	1
8	4	1	6	5	3	7	2	9

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

28 ನವೆಂಬರ್ 2025 ಶುಕ್ರವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಶುಕ್ಲ ಅಷ್ಟಮಿ ಗಂ. 24-16 **ನಕ್ಷತ್ರ:** ಶತಭಿಷ ಗಂ. 26-50 **ಯೋಗ:** ವ್ಯಾಘಾತ ಗಂ. 11-05 **ಕರಣ:** ವಿಷ್ಟಿ ಗಂ. 12-29 ವೃಶ್ಚಿಕ ಮಾಸದ 13 ನೇ ದಿನ. **ಮಳೆ ನಕ್ಷತ್ರ :** ಅನುರಾಧ 3ನೇ ಪಾದ. **ರಾಹುಕಾಲ :** ಬೆಳಿಗ್ಗೆ 10-30 - 12-00 , **ಸೂರ್ಯೋದಯ :** 06-40 **ಸೂರ್ಯಾಸ್ತ :** 05-57, **ಮುಸ್ಲಿಂ ದಿನಾಂಕ :** 6 ಜುಮಾದುಸ್ಸಾನಿ , **ಅದೃಷ್ಟ ಸಂಖ್ಯೆ :** 8, 3

ಮೇಷ: ಭೂಮಿಯಿಂದ ಉನ್ನತ ಸ್ಥಾನದಲ್ಲಿ ಕೆಲಸ ಮಾಡುವವರು ರಕ್ಷಾ-ಕವಚವನ್ನು ಮರೆಯದಿರಿ. ವಿದ್ಯಾರ್ಥಿಗಳಿಗೆ ಮಿತ್ರವರ್ಗದವರ ಸಹವಾಸ ಅನುಕೂಲವಾಗಿ ಕಂಡುಬರುವುದು. ಮಕ್ಕಳ ಮೇಲೆ ನಿಗಾ ಇರಲಿ.

ವೃಷಭ: ವೃತ್ತಿಗೆ ನೀವು ನೀಡುವಷ್ಟೇ ಪ್ರಾಮುಖ್ಯವನ್ನು ಸಾಂಸಾರಿಕ ಜೀವನಕ್ಕೂ ನೀಡುವುದರಿಂದ ಹಲವು ಸಮಸ್ಯೆಗಳನ್ನು ನಿವಾರಿಸಿಕೊಳ್ಳುವಿರಿ. ಪರಂಪರೆಯಲ್ಲಿ ನಡೆದು ಬಂದ ವಿಧಿಯನ್ನು ಆಚರಿಸಿ.

ಮಿಥುನ: ಯಾವುದೋ ಪುಸ್ತಕಗಳನ್ನು ಓದುವುದರಿಂದ ಮನಸ್ಸು ಶೂನ್ಯದ ಕಡೆಗೆ ವಾಲುತ್ತಿರುವಂತೆ ಭಾಸವಾಗುತ್ತದೆ. ಹರಿತ ವಸ್ತುಗಳ ಮೇಲೆ ಎಷ್ಟು ಕಾಳಜಿ ಇದ್ದರೂ ಕಡಿಮೆ ಎಂದೇ ಆಗುತ್ತದೆ.

ಕರ್ಕಾಟಕ: ಸಿಟ್ಟು ಅಥವಾ ಯೋಚನಾರಹಿತ ನಿರ್ಧಾರಗಳು ಏಕಾಂಗಿತನಕ್ಕೆ ಕಾರಣವಾಗುವುದು. ಇಷ್ಟವಸ್ತುವಿನ ಪ್ರಾಪ್ತಿಗಾಗಿ ಪ್ರಯತ್ನ ಪಡುವಿರಿ. ಇತರರನ್ನು ಸಂತೋಷ ಪಡಿಸುವ ಭರದಲ್ಲಿ ಕೆಲಸವನ್ನು ಮರೆಯದಿರಿ.

ಸಿಂಹ: ರಕ್ತದೊತ್ತಡ ನಿಯಂತ್ರಣದಲ್ಲಿರಿಸಲು ಯೋಗಾಭ್ಯಾಸ, ಧ್ಯಾನ ಮಾಡಿ. ವ್ಯಾವಹಾರಿಕ ಪಾಲುದಾರರ ಜತೆಯಲ್ಲಿ ಬಾಂಧವ್ಯ ಹೊಂದುವಿರಿ. ಒಳ್ಳೆಯತನ ದುರುಪಯೋಗವಾಗದಂತೆ ಎಚ್ಚರ ವಹಿಸಿ.

ಕನ್ಯಾ: ಭೂ ಖರೀದಿಯಂತಹ ಅಥವಾ ಗೃಹ ನಿರ್ಮಾಣ ಕಾರ್ಯದಂತಹ ಯೋಚನೆಗಳು ಕಾರ್ಯರೂಪಕ್ಕೆ ಬರಲಿವೆ. ದೈವಬಲ ಒದಗಿ ಅಭಿವೃದ್ಧಿ ಗೊಳ್ಳುವಿರಿ. ಖಿನ್ನತೆ, ಋಣಾತ್ಮಕ ಚಿಂತನೆಗಳು ಕಾಡಲಿವೆ.

ತುಲಾ: ತಂದೆ ತಾಯಿಯನ್ನು ಸಂತೋಷ ಪಡಿಸುವಂಥ ಕ್ಷಣ ಇರಲಿದೆ. ನೌಕರಿಯಲ್ಲಿ ನಿಮ್ಮ ಅಭಿಪ್ರಾಯಕ್ಕೆ ಸಹೋದ್ಯೋಗಿಗಳ ಸಂಪೂರ್ಣ ಬೆಂಬಲ ಸಿಗುವುದು.

ವೃಶ್ಚಿಕ: ಸಹೋದರರ ನಡವಳಿಕೆ ಅನುಮಾನಗಳಿಗೆ ಕಾರಣವಾದೀತು. ಆಹಾರ ಪದಾರ್ಥದ ವ್ಯಾಪಾರ ಮಾಡುವವರಿಗೆ ನಷ್ಟ ಸಂಭವಿಸಬಹುದು. ಕೆಲವು ವಿಷಯಗಳು ಬೇಸರ ಹುಟ್ಟಿಸಬಹುದು.


ಧನು: ಹೊಸದನ್ನು ಸಾಧಿಸುವ ಪ್ರಚೋದನೆ ಸೆಳೆಯಲಿದೆ. ಈಗ ನಡೆಯುತ್ತಿರುವ ಕೆಲಸ ಕಾರ್ಯಗಳು ನಿಲ್ಲುವಂತಾಗಬಹುದು. ಮನೆಯ ವಿಚಾರಗಳನ್ನು ಮಾತನಾಡಿ ವೈರತ್ವವನ್ನು ತಂದುಕೊಳ್ಳಬೇಡಿ.

ಮಕರ: ಕೋಪದಿಂದ ಪರಿಹಾರವಾಗದ ಕುಟುಂಬ ಸಮಸ್ಯೆಗಳು ಮೃದುವಾದ ಮಾತಿನಿಂದ ಪರಿಹಾರವಾಗುತ್ತವೆ. ವಿಚಾರಗಳು ಕಹಿಯಾಗಲಿ ಸಿಹಿಯಾಗಲಿ ಅದನ್ನು ಇರುವ ಹಾಗೆಯೆ ಸ್ವೀಕರಿಸಿ.

ಕುಂಭ: ದಾಂಪತ್ಯ ಜೀವನದಲ್ಲಿ ಕೆಲವು ಮಾತುಗಳು ಕಿವಿಯ ಮೇಲೆ ಬಿದ್ದರೂ ನಿರ್ಲಕ್ಷಿಸುವುದು ಒಳ್ಳೆಯದು. ನೈಸರ್ಗಿಕ ಶಕ್ತಿ ಸಂಪನ್ಮೂಲಗಳನ್ನು ಹೆಚ್ಚಾಗಿ ಬಳಸುವ ಯೋಚನೆ ನಡೆಸುವಿರಿ. ಬಟ್ಟೆ ವ್ಯಾಪಾರ ನಡೆಸುವವರಿಗೆ ಲಾಭ.

ಮೀನ: ವಿದ್ಯುತ್ ಉಪಕರಣಗಳಿಂದ ಅಪಾಯಗಳು ಉಂಟಾಗಬಹುದು. ಹಿರಿಯರ ಆಸ್ಪತ್ರೆ, ಔಷಧಿಗಳಿಗಾಗಿ ಖರ್ಚು ಮಾಡಬೇಕಾದರೂ ಆದಾಯಕ್ಕೇನೂ ಕೊರತೆ ಇರದು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	26,205
ಇಂದಿನ ಅಂತ್ಯ	26,215
ದಿನದ ಗರಿಷ್ಠ	26,310
▲	10

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು		
	100 ಕ್ಕೆ	₹675
	12 ಕ್ಕೆ	₹96
ಮೈಸೂರು:	100 ಕ್ಕೆ	₹675

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹181.50
ಆರ್‌ಎಸ್‌ಎಸ್-5	₹176.50
ಗುಡ್ ಲಾಟ್	₹164

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹328-778
ದ್ವಿತಳಿ (ಬಿ.ವಿ)	₹555-899

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹28750
ಎಸಿ	₹15540
ಆರ್‌ಪಿ	₹18900
ಆರ್‌ಸಿ	₹10600

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1550 (1550)
ಸೋಯಾ (ರಿಫೈನ್ಡ್)	₹1270 (1265)
ಸೂರ್ಯಕಾಂತಿ (ರಿಫೈನ್ಡ್)	₹1465 (1465)
ಪಾಮೋಲಿನ್	₹1245 (1240)

ಮಹೀಂದ್ರ: ಎಕ್ಸ್‌ಇವಿ 9ಎಸ್ ಬಿಡುಗಡೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಮಹೀಂದ್ರ ಆ್ಯಂಡ್ ಮಹೀಂದ್ರ ಕಂಪನಿಯು, ಎಕ್ಸ್‌ಇವಿ 9ಎಸ್ ವಾಹನವನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ.

ಈ ವಾಹನವು ಏಳು ಆಸನಗಳನ್ನು ಹೊಂದಿರುವ ದೇಶದ ಮೊದಲ ವಿದ್ಯುತ್ ಚಾಲಿತ ಎಸ್‌ಯುವಿ ಆಗಿದೆ ಎಂದು ಕಂಪನಿ ಗುರುವಾರ ತಿಳಿಸಿದೆ. ವಾಹನದ ಆರಂಭಿಕ ಬೆಲೆ ₹19.95 ಲಕ್ಷ.

ಈ ವಾಹನ ಆರು ಮಾದರಿಗಳನ್ನು ಹೊಂದಿದೆ. 2026ರ ಜನವರಿ 14ರಂದು ವಾಹನದ ಬುಕಿಂಗ್ ಆರಂಭವಾಗಲಿದ್ದು, ಜನವರಿ 23ರಂದು ವಾಹನಗಳ ವಿತರಣೆ ಮಾಡಲಾಗುವುದು ಎಂದು ತಿಳಿಸಿದೆ.

2027ರ ಅಂತ್ಯದೊಳಗೆ ಕಂಪನಿಯು 1,000ಕ್ಕೂ ಹೆಚ್ಚು ಚಾರ್ಜಿಂಗ್ ಪಾಯಿಂಟ್‌ಗಳನ್ನು ಸ್ಥಾಪಿಸುವ ಗುರಿಯನ್ನು ಹೊಂದಿದೆ ಎಂದು ತಿಳಿಸಿದೆ.

'ಪ್ರಸ್ತುತ ತಿಂಗಳಿಗೆ 4 ಸಾವಿರದಿಂದ 5 ಸಾವಿರ ವಿದ್ಯುತ್‌ಚಾಲಿತ ವಾಹನಗಳನ್ನು ಮಾರಾಟ ಮಾಡಲಾಗುತ್ತಿದೆ. ಇದನ್ನು ಪ್ರಸಕ್ತ ಆರ್ಥಿಕ ವರ್ಷದ ಅಂತ್ಯದ ವೇಳೆಗೆ 7 ಸಾವಿರಕ್ಕೆ ಹೆಚ್ಚಿಸುವ ಗುರಿ ಹೊಂದಲಾಗಿದೆ' ಎಂದು ಕಂಪನಿಯ ವಾಹನ ಮತ್ತು ಕೃಷಿ ವಾಹನಗಳ ವಿಭಾಗದ ಕಾರ್ಯನಿರ್ವಾಹಕ ನಿರ್ದೇಶಕ ಮತ್ತು ಸಿಇಒ ರಾಜೇಶ್ ಜೆಜುರಿಕರ್ ಹೇಳಿದರು.

ಕ್ಲೇಮ್‌ಗೆ ಏಕೀಕೃತ ಪೋರ್ಟಲ್

ಎಲ್ಲ ಬಗೆಯ ಹಣಕಾಸು ಆಸ್ತಿಗಳ ಕ್ಲೇಮ್‌ಗೆ ನೆರವು: ಸರ್ಕಾರದ ಮಾಹಿತಿ



ನವದೆಹಲಿ (ಪಿಟಿಐ): ಬ್ಯಾಂಕ್ ಠೇವಣಿಗಳು, ಪಿಂಚಣಿ ನಿಧಿಗಳು, ಷೇರುಗಳು, ಕಂಪನಿಗಳು ನೀಡುವ ಲಾಭಾಂಶ (ಡಿವಿಡೆಂಡ್) ಸೇರಿದಂತೆ ವಿವಿಧೆಡೆ ಇರುವ, ಕ್ಲೇಮ್ ಮಾಡಿರದ ಹಣಕಾಸಿನ ಆಸ್ತಿಗಳನ್ನು ಕ್ಲೇಮ್ ಮಾಡುವ ಪ್ರಕ್ರಿಯೆಯನ್ನು ಸುಲಭವಾಗಿಸುವ ಏಕೀಕೃತ ಪೋರ್ಟಲ್ ಒಂದನ್ನು ಅಭಿವೃದ್ಧಿಪಡಿಸಲಾಗುತ್ತಿದೆ.

ಕೇಂದ್ರ ಹಣಕಾಸು ಸಚಿವಾಲಯವು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಜೊತೆಗೂಡಿ ಈ ಪೋರ್ಟಲ್ ಅಭಿವೃದ್ಧಿಪಡಿಸಲು ಕೆಲಸ ಮಾಡುತ್ತಿದೆ ಎಂದು ಕೇಂದ್ರ ಹಣಕಾಸು ಸೇವೆಗಳ ಇಲಾಖೆಯ ಕಾರ್ಯದರ್ಶಿ ಎಂ.ನಾಗರಾಜು ತಿಳಿಸಿದ್ದಾರೆ.

ಈ ಪೋರ್ಟಲ್‌ಅನ್ನು ಶೀಘ್ರವೇ ಆರಂಭಿಸಲಾಗುತ್ತದೆ ಎಂದು ಅವರು ಪಂಜಾಬ್ ನ್ಯಾಷನಲ್ ಬ್ಯಾಂಕ್ ಆಯೋಜಿಸಿದ್ದ 'ನಿಮ್ಮ ಹಣ ನಿಮ್ಮ ಹಕ್ಕು' ಕಾರ್ಯಕ್ರಮದಲ್ಲಿ ಹೇಳಿದ್ದಾರೆ.

'ಹಣಕಾಸು ಸೇವೆಗಳ ಇಲಾಖೆಯು ಈ ಪೋರ್ಟಲ್ ವಿಚಾರವಾಗಿ ಆರ್‌ಬಿಐ ಜೊತೆ ಕೆಲಸ ಮಾಡುತ್ತಿದೆ. ಈ ಪೋರ್ಟಲ್‌ನ ಸಮನ್ವಯದ ಕೆಲಸವನ್ನು ಆರ್‌ಬಿಐ ನಿರ್ವಹಿಸಲಿದೆ' ಎಂದು ಅವರು ತಿಳಿಸಿದ್ದಾರೆ.

ಕ್ಲೇಮ್ ಮಾಡಿರದ ಠೇವಣಿಗಳ ಕ್ಲೇಮ್‌ಗಾಗಿ ಆರ್‌ಬಿಐ 'ಉದ್ಗಮ್' ಪೋರ್ಟಲ್ ಆರಂಭಿಸಿದೆ. ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) 'ಮಿತ್ರ' ಹೆಸರಿನ ಪೋರ್ಟಲ್ ಹೊಂದಿದೆ. ಭಾರತೀಯ ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರವು (ಐಆರ್‌ಡಿಎಐ) 'ಬಿಮಾ ಭರೋಸಾ' ಎಂಬ ಪೋರ್ಟಲ್ ಹೊಂದಿದೆ.


> ಕ್ಲೇಮ್ ಮಾಡಿಕೊಳ್ಳದಿದ್ದ ಒಟ್ಟು ₹1,887 ಕೋಟಿಯನ್ನು ಅಭಿಯಾನ ಆರಂಭವಾದ ನಂತರದಲ್ಲಿ ಸಂಬಂಧಪಟ್ಟವರಿಗೆ ಮರಳಿಸಲಾಗಿದೆ
>
> **ಎಂ. ನಾಗರಾಜು,** ಕಾರ್ಯದರ್ಶಿ ಕೇಂದ್ರ ಹಣಕಾಸು ಸೇವೆಗಳ ಇಲಾಖೆ

ಹೊಸದಾಗಿ ಆರಂಭವಾಗಲಿರುವ ಏಕೀಕೃತ ಪೋರ್ಟಲ್ ಜನರಿಗೆ ತಮ್ಮ ಹಣವನ್ನು, ಹಣಕಾಸಿನ ಆಸ್ತಿಯನ್ನು ಕ್ಲೇಮ್ ಮಾಡುವ ಪ್ರಕ್ರಿಯೆಯನ್ನು ಸುಲಭವಾಗಿಸಲಿದೆ. ಕ್ಲೇಮ್ ವಿಚಾರವಾಗಿ ಇರುವ ಅರಿವಿನ ಕೊರತೆಯ ಕಾರಣದಿಂದಾಗಿ ದೊಡ್ಡ ಮೊತ್ತವು ಹಾಗೇ ಉಳಿದಿದೆ ಎಂದು ಅವರು ತಿಳಿಸಿದ್ದಾರೆ.

ಕೇಂದ್ರ ಸರ್ಕಾರವು ಹಣಕಾಸಿನ ಒಳಗೊಳ್ಳುವಿಕೆಗೆ ಹಾಗೂ ಹಣಕಾಸಿನ ಶಿಕ್ಷಣಕ್ಕೆ ನಿರಂತರವಾಗಿ ಒತ್ತು ನೀಡುತ್ತಿದೆ. ಇದರ ಭಾಗವಾಗಿ ಜನರಿಗೆ ಅವರ ಉಳಿತಾಯದ ಹಣವನ್ನು ಪಡೆದುಕೊಳ್ಳಲು ನೆರವು ನೀಡಲು ಯತ್ನಿಸುತ್ತಿದೆ ಎಂದಿದ್ದಾರೆ.

ಹಣಕಾಸಿನ ವಲಯದಲ್ಲಿ ಕ್ಲೇಮ್ ಆಗದೆ ಹಾಗೇ ಉಳಿದಿರುವ ಹಣವನ್ನು ಜನ ಕ್ಲೇಮ್ ಮಾಡುವಂತೆ ಉತ್ತೇಜನ ನೀಡುವ ಅಭಿಯಾನವೊಂದಕ್ಕೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಅಕ್ಟೋಬರ್ 4ರಂದು ಚಾಲನೆ ನೀಡಿದ್ದಾರೆ.

ಐ.ಟಿ. ಇಲಾಖೆಯಿಂದ 25 ಸಾವಿರ ಜನರಿಗೆ ಸಂದೇಶ



ನವದೆಹಲಿ (ಪಿಟಿಐ): 2025–26ನೇ ಮೌಲ್ಯಮಾಪನ ವರ್ಷದ ಆದಾಯ ತೆರಿಗೆ ವಿವರ ಸಲ್ಲಿಸುವಾಗ ವಿದೇಶಗಳಲ್ಲಿನ ಆಸ್ತಿಯ ಬಗ್ಗೆ ಮಾಹಿತಿ ನೀಡದ ಸುಮಾರು 25 ಸಾವಿರ ಮಂದಿಗೆ ಎಸ್‌ಎಂಎಸ್ ಹಾಗೂ ಇ–ಮೇಲ್ ಕಳುಹಿಸುವ ಕೆಲಸವನ್ನು ಆದಾಯ ತೆರಿಗೆ ಇಲಾಖೆಯು ಶುರುಮಾಡಲಿದೆ.

ವಿದೇಶಗಳಿಂದ ಪಡೆದಿರುವ ಮಾಹಿತಿ ಆಧರಿಸಿ ಇಷ್ಟು ಮಂದಿಯನ್ನು ಗುರುತಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಈ ಅಭಿಯಾನದ ಭಾಗವಾಗಿ ಕೇಂದ್ರ ನೇರ ತೆರಿಗೆಗಳ ಮಂಡಳಿಯು (ಸಿಬಿಡಿಟಿ) ಮೊದಲ ಹಂತದಲ್ಲಿ 25 ಸಾವಿರ ಮಂದಿಗೆ ಸಂದೇಶ ರವಾನಿಸಿ, ಅವರಿಗೆ ಪರಿಷ್ಕೃತ ಐ.ಟಿ. ವಿವರ ಸಲ್ಲಿಸುವಂತೆ ತಿಳಿಸಲಿದೆ. ಡಿಸೆಂಬರ್ 31ಕ್ಕೆ ಮೊದಲು ಪರಿಷ್ಕೃತ ವಿವರ ಸಲ್ಲಿಸದಿದ್ದರೆ ದಂಡ ಪಾವತಿಸಬೇಕಾಗುತ್ತದೆ.

ಕಪ್ಪು ಹಣ ಕಾಯ್ದೆಯ ಅನ್ವಯ, ವಿದೇಶಗಳಲ್ಲಿನ ಆಸ್ತಿಯ ಬಗ್ಗೆ ಮಾಹಿತಿ ನೀಡದೆ ಇದ್ದರೆ ₹10 ಲಕ್ಷದವರೆಗೆ ದಂಡ ವಿಧಿಸಲು ಅವಕಾಶ ಇದೆ. ಅಲ್ಲದೆ, ಶೇ 30ರಷ್ಟು ತೆರಿಗೆ ಹಾಗೂ ತೆರಿಗೆ ಮೊತ್ತದ ಮೇಲೆ ಶೇ 300ರಷ್ಟು ದಂಡ ವಿಧಿಸಲು ಕೂಡ ಅವಕಾಶ ಇದೆ.

ಕಳೆದ ವರ್ಷ ಕೂಡ ಇಲಾಖೆಯು ಇದೇ ಬಗೆಯಲ್ಲಿ ಸಂದೇಶ ರವಾನಿಸಿತ್ತು. ಇದಾದ ನಂತರ 24,678 ಮಂದಿ ತೆರಿಗೆ ಪಾವತಿದಾರರು ತಮ್ಮ ವಿವರದ ಮರುಪರಿಶೀಲನೆ ನಡೆಸಿದ್ದರು.

'ಪ್ರಾಕ್ಸ್‌ಏರ್‌ನಿಂದ ₹210 ಕೋಟಿ ಹೂಡಿಕೆ'

ಪ್ರಜಾವಾಣಿ ವಾರ್ತೆ


ಎಂ.ಬಿ. ಪಾಟೀಲ

ಬೆಂಗಳೂರು: ಕರ್ನಾಟಕದಲ್ಲಿ ದ್ರವ ಆಮ್ಲಜನಕ ಮತ್ತು ಸಾರಜನಕ ಉತ್ಪಾದನಾ ಘಟಕ ಆರಂಭಿಸಲು ಬ್ರಿಟನ್‌ನ ಪ್ರಾಕ್ಸ್‌ಏರ್ ಇಂಡಿಯಾ ಕಂಪನಿಯು ₹210 ಕೋಟಿ ಹೂಡಿಕೆ ಒಪ್ಪಂದಕ್ಕೆ ಸಹಿ ಹಾಕಿದೆ ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಅವರು ತಿಳಿಸಿದ್ದಾರೆ.

ಬಂಡವಾಳ ಆಕರ್ಷಣೆಗಾಗಿ ಬ್ರಿಟನ್ ಪ್ರವಾಸದಲ್ಲಿ ಇರುವ ಎಂ.ಬಿ.ಪಾಟೀಲ ಅವರು ಪ್ರಾಕ್ಸ್‌ಏರ್ ಪ್ರತಿನಿಧಿಗಳ ಜತೆಗೆ ಸಭೆ ನಡೆಸಿದರು. 'ಮೂರು ವರ್ಷಗಳಲ್ಲಿ ಹಂತ–ಹಂತವಾಗಿ ₹210 ಕೋಟಿ ಹೂಡಿಕೆ ಮಾಡಲು ಕಂಪನಿಯು ಒಪ್ಪಿಕೊಂಡಿದೆ. ಈ ವರ್ಷದಿಂದಲೇ ಹೂಡಿಕೆ ಆರಂಭಿಸಲಿದೆ. ಘಟಕ ಆರಂಭಕ್ಕೆ ಅಗತ್ಯವಿರುವ ಎಲ್ಲ ಅನುಮತಿ, ಸವಲತ್ತು ಮತ್ತು ಭೂಮಿಯನ್ನು ತ್ವರಿತವಾಗಿ ಒದಗಿಸಲಾಗುತ್ತದೆ' ಎಂದು ಮಾಹಿತಿ ನೀಡಿದ್ದಾರೆ.

ಬ್ರಿಟನ್‌ನಲ್ಲಿರುವ ಭಾರತದ ಹೈಕಮಿಷನರ್ ವಿಕ್ರಮ್ ದೊರೆಸ್ವಾಮಿ ಅವರನ್ನು ಭೇಟಿ ಮಾಡಿದ್ದ ಎಂ.ಬಿ.ಪಾಟೀಲರು, ಬೆಂಗಳೂರಿನ ಸಮೀಪ ಅಭಿವೃದ್ಧಿಪಡಿಸಲು ಉದ್ದೇಶಿಸಿರುವ ಕ್ವಿನ್ ಸಿಟಿಯಲ್ಲಿ ಹೂಡಿಕೆಗೆ ಇರುವ ಅವಕಾಶಗಳನ್ನು ವಿವರಿಸಿದರು. ಕ್ವಿನ್ ಸಿಟಿಯಲ್ಲಿ 'ಯುಕೆ ಟೆಕ್ ಸಿಟಿ' ಸ್ಥಾಪಿಸಲು ಅವಕಾಶವಿದೆ ಎಂಬುದನ್ನು ಬ್ರಿಟನ್‌ನ ಉದ್ಯಮಿಗಳಿಗೆ ತಿಳಿಸಿ ಎಂದು ಕೋರಿದರು.

ಕೈಗಾರಿಕಾ ಇಲಾಖೆ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್, ಇಲಾಖೆ ಆಯುಕ್ತೆ ಗುಂಜನ್ ಕೃಷ್ಣ, ಕರ್ನಾಟಕ ಉದ್ಯೋಗ ಮಿತ್ರ ವ್ಯವಸ್ಥಾಪಕ ನಿರ್ದೇಶಕ ದೊಡ್ಡ ಬಸವರಾಜ ಅವರು ಸಚಿವರ ನೇತೃತ್ವದ ನಿಯೋಗದಲ್ಲಿ ಇದ್ದರು.

ಸುದ್ದಿ 2 ನಿಮಿಷ

ಏರಿ, ಇಳಿದ ಸೂಚ್ಯಂಕಗಳು


ಮುಂಬೈ (ಪಿಟಿಐ): ದೇಶದ ಷೇರುಪೇಟೆ ಸೂಚ್ಯಂಕಗಳು ಗುರುವಾರದ ವಹಿವಾಟಿನಲ್ಲಿ ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ಏರಿಕೆ ಆಗಿದ್ದವು. ಆದರೆ, ಹೂಡಿಕೆದಾರರು ಷೇರುಗಳ ಮಾರಾಟಕ್ಕೆ ಮುಂದಾಗಿದ್ದರಿಂದ, ಆರಂಭಿಕ ಏರಿಕೆಯನ್ನು ನಂತರದ ವಹಿವಾಟಿನಲ್ಲಿ ಉಳಿಸಿಕೊಳ್ಳಲಿಲ್ಲ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 110 ಅಂಶ ಏರಿಕೆಯಾಗಿ, 85,720ಕ್ಕೆ ವಹಿವಾಟು ಅಂತ್ಯಗೊಂಡಿದೆ. ವಹಿವಾಟಿನ ವೇಳೆ ಸೆನ್ಸೆಕ್ಸ್ 86,055ಕ್ಕೆ ಮುಟ್ಟಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 10 ಅಂಶ ಹೆಚ್ಚಳವಾಗಿ 26,215ಕ್ಕೆ ಕೊನೆಗೊಂಡಿದೆ. ವಹಿವಾಟಿನ ವೇಳೆ ಇದು 26,310 ಅಂಶದವರೆಗೆ ತಲುಪಿತ್ತು.

2024ರ ಸೆಪ್ಟೆಂಬರ್ 27ರಂದು ಸೆನ್ಸೆಕ್ಸ್ 85,978 ಅಂಶ ಮತ್ತು ನಿಫ್ಟಿ 26,277 ಅಂಶಕ್ಕೆ ತಲುಪಿತ್ತು. ಇದು ಇದುವರೆಗಿನ ಸಾರ್ವಕಾಲಿಕ ಗರಿಷ್ಠ ಮಟ್ಟದ ಏರಿಕೆ ಆಗಿತ್ತು. ಗುರುವಾರದ ವಹಿವಾಟಿನ ನಡುವಿನಲ್ಲಿ ಈ ದಾಖಲೆಯನ್ನು ಸೂಚ್ಯಂಕಗಳು ಮೀರಿದಂತಾಗಿದೆ.

ಅಮೆರಿಕದ ಫೆಡರಲ್ ರಿಸರ್ವ್‌ನ ಬಡ್ಡಿ ದರ ಕಡಿತದ ನಿರೀಕ್ಷೆ ಹೆಚ್ಚಳ ಮತ್ತು ವಿದೇಶಿ ಬಂಡವಾಳದ ಒಳಹರಿವಿನಿಂದ ದೇಶದ ಷೇರುಪೇಟೆ ಸೂಚ್ಯಂಕಗಳು ಏರಿಕೆ ಕಂಡಿವೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

'ದೇಶದ ಷೇರುಪೇಟೆ ಸೂಚ್ಯಂಕಗಳು ಗುರುವಾರದ ವಹಿವಾಟಿನ ವೇಳೆ ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ತಲುಪಿದ್ದವು. ಆದರೆ, ಹೂಡಿಕೆದಾರರು ಲಾಭದ ಗಳಿಕೆಗಾಗಿ ಷೇರುಗಳ ಮಾರಾಟಕ್ಕೆ ಮುಂದಾಗಿದ್ದರಿಂದ ಆರಂಭಿಕ ಏರಿಕೆಯ ಮಟ್ಟವನ್ನು ಕಾಯ್ದುಕೊಳ್ಳಲಾಗಲಿಲ್ಲ' ಎಂದು ಜಿಯೋಜಿತ್ ಇನ್ವೆಸ್ಟ್‌ಮೆಂಟ್ ಲಿಮಿಟೆಡ್‌ನ ಸಂಶೋಧನಾ ವಿಭಾಗದ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.



ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಬುಧವಾರದ ವಹಿವಾಟಿನಲ್ಲಿ ₹4,778 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ. ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ಶೇ 0.05ರಷ್ಟು ಇಳಿದಿದೆ. ಪ್ರತೀ ಬ್ಯಾರಲ್ ದರವು 63.10 ಡಾಲರ್ ಆಗಿದೆ.

ಫ್ರೀಡಂ ಆಯಿಲ್‌ನಿಂದ ಹೊಸ ಅಭಿಯಾನ

ಬೆಂಗಳೂರು: 'ಫ್ರೀಡಂ ಹೆಲ್ತಿ ಕುಕಿಂಗ್ ಆಯಿಲ್‌ನ ಪ್ರತಿ ಒಂದು ಲೀಟರ್ ಪೊಟ್ಟಣದಲ್ಲಿ 910 ಗ್ರಾಂ ಅಡುಗೆ ಎಣ್ಣೆ ಇರುತ್ತದೆ ಎಂದು ನಾವು ಭರವಸೆ ನೀಡುತ್ತೇವೆ' ಎಂದು ಜೆಮಿನಿ ಎಡಿಬಲ್ಸ್ ಆ್ಯಂಡ್ ಫ್ಯಾಟ್ಸ್ ಇಂಡಿಯಾ ಲಿಮಿಟೆಡ್‌ನ ಮಾರಾಟ ಮತ್ತು ಮಾರುಕಟ್ಟೆ ವಿಭಾಗದ ಹಿರಿಯ ಉಪಾಧ್ಯಕ್ಷ ಪಿ. ಚಂದ್ರಶೇಖರ ರೆಡ್ಡಿ ಹೇಳಿದ್ದಾರೆ.

'ಫ್ರೀಡಂ ಸನ್‌ಫ್ಲವರ್ ಆಯಿಲ್' ಹೊಸದೊಂದು ಅಭಿಯಾನ ಆಯೋಜಿಸಿದೆ. ಗ್ರಾಹಕರು ತಾವು ಖರೀದಿಸುವ ಖಾದ್ಯ ತೈಲದ ಪೊಟ್ಟಣದಲ್ಲಿರುವ ತೈಲದ ಪ್ರಮಾಣವನ್ನು ಪರಿಶೀಲಿಸಬೇಕಿರುವುದರ ಬಗ್ಗೆ ಈ ಅಭಿಯಾನವು ಜಾಗೃತಿ ಮೂಡಿಸುವ ಉದ್ದೇಶ ಹೊಂದಿದೆ. ಈ ಅಭಿಯಾನದಲ್ಲಿ ರಾಹುಲ್ ದ್ರಾವಿಡ್ ಅವರು, ಪೊಟ್ಟಣದ ಮೇಲೆ ನಮೂದಿಸಲಾದ ಪ್ರಮಾಣವನ್ನು ಪರಿಶೀಲಿಸುವ ಪ್ರಾಮುಖ್ಯವನ್ನು ಹೇಳಿದ್ದಾರೆ.

ಕೇಂದ್ರ ಸರ್ಕಾರದ ಗ್ರಾಹಕ ವ್ಯವಹಾರಗಳ ಸಚಿವಾಲಯದ ಪ್ರಕಾರ ಪ್ರತಿ 1 ಲೀಟರ್ ಸೂರ್ಯಕಾಂತಿ ಎಣ್ಣೆ ಪೊಟ್ಟಣದಲ್ಲಿ 910 ಗ್ರಾಂ ಎಣ್ಣೆ ಇರಬೇಕು. ಆದರೆ, ಕೆಲವು ಬ್ರ್ಯಾಂಡ್‌ಗಳು 1 ಲೀಟರ್‌ನಂತೆ ಕಾಣುವ ಪೊಟ್ಟಣವನ್ನು ಕಡಿಮೆ ಪ್ರಮಾಣದ ಎಣ್ಣೆಯೊಂದಿಗೆ (ಸುಮಾರು 800ರಿಂದ 870 ಗ್ರಾಂ) ಮಾರಾಟ ಮಾಡುತ್ತಿವೆ ಎಂದು ಪ್ರಕಟಣೆ ಹೇಳಿದೆ.

1 ಲೀಟರ್ ಪೊಟ್ಟಣದಂತೆ ಕಾಣುವ, ಕಡಿಮೆ ಪ್ರಮಾಣದಲ್ಲಿ ಎಣ್ಣೆ ಇರುವ ಪೊಟ್ಟಣವನ್ನು ಖರೀದಿಸದಂತೆ ಈ ಅಭಿಯಾನವು ಗ್ರಾಹಕರನ್ನು ಒತ್ತಾಯಿಸುತ್ತದೆ.

ಚುಟುಕು ಸುದ್ದಿ

ಮೃತಪಟ್ಟವರ 2 ಕೋಟಿ ಆಧಾರ್ ನಿಷ್ಕ್ರಿಯ

ನವದೆಹಲಿ: 'ಸುಮಾರು 2 ಕೋಟಿಗೂ ಅಧಿಕ ಆಧಾರ್ ಕಾರ್ಡ್‌ಗಳನ್ನು ನಿಷ್ಕ್ರಿಯಗೊಳಿಸಿದ್ದೇವೆ. ಇವುಗಳು ಮೃತಪಟ್ಟವರ ಕಾರ್ಡ್‌ಗಳಾಗಿದ್ದವು' ಎಂದು ಭಾರತೀಯ ವಿಶಿಷ್ಟ ಗುರುತಿನ ಚೀಟಿ ಪ್ರಾಧಿಕಾರವು ಹೇಳಿದೆ.

'ದೇಶದಾದ್ಯಂತ ಅನರ್ಹರ ಹೆಸರಿನಲ್ಲಿರುವ, ಮೃತಪಟ್ಟವರ ಆಧಾರ್ ಕಾರ್ಡ್‌ಗಳನ್ನು ನಮ್ಮ ಡೇಟಾಬೇಸ್‌ನಿಂದ ತೆಗೆದು ಹಾಕುವ ಕಾರ್ಯ ನಡೆಸುತ್ತಿದ್ದೇವೆ. ತಮ್ಮ ಕುಟುಂಬದವರು ಯಾರಾದರೂ ಮೃತಪಟ್ಟರೆ ಅವರ ಮರಣಪತ್ರ ದೊರೆತ ನಂತರ ನಮ್ಮ ವೆಬ್‌ಸೈಟ್‌ನಲ್ಲಿ ಮಾಹಿತಿ ಅಪ್‌ಲೋಡ್ ಮಾಡುವ ಅವಕಾಶ ನೀಡಲಾಗಿದೆ' ಎಂದು ಹೇಳಿದೆ.

ಮುಂಬೈ ಧಾರಣೆ (ಶೇಂಗಾ)

27-11-2025	
ಜಾವಾ 70/80(ಹೊಸ)	10700-10800
ಜಾವಾ 80/90(ಹೊಸ)	10000-10100
ದಪ್ಪ ಮಧ್ಯಪ್ರದೇಶ (ಹೊಸ)	7900-8000
ದಪ್ಪ ಗುಜರಾತ್ (ಹೊಸ)	9000-9100
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1560 (1560)
ಒಂದು ವಾರದ ಡೆಲಿವರಿ	1555 (1555)
ಪಾಮ್ ವಾರದ ಡೆಲಿವರಿ	1243 (1238)
ಸೂರ್ಯಕಾಂತಿ ಎಣ್ಣೆ ಕಚ್ಚಾ	1400 (1400)
ಚಿನ್ನ–ಬೆಳ್ಳಿ (ಜಿಎಸ್‌ಟಿ ಸೇರಿದ)	
ಅಪರಂಜಿ ಚಿನ್ನ 10 ಗ್ರಾಂ	1,25,600 (1,25,500)
ಬೆಳ್ಳಿ ಕೆ.ಜಿಗೆ	1,62,000 (1,58,800)

ಆವರಣದಲ್ಲಿ ಹಿಂದಿನ ವಹಿವಾಟಿನ ದರ

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹17000-17800
ತಿಪಟೂರು	₹26950-28500
ತುರುವೇಕೆರೆ	₹26500-27500

ಅಡಿಕೆ ಧಾರಣೆ

ಕುಮಟಾ		ಸಿಪ್ಪೆಗೋಟು	9800-23225	ಶಿರಸಿ	
ಚಾಲಿ	44699-48501	**ಶಿವಮೊಗ್ಗ**		ಬೆಟ್ಟೆ	42696-50779
ಚಿಪ್ಪು	23000-34069	ಬೆಟ್ಟೆ	51800-70299	ಬಿಳೆಗೋಟು	26599-38899
ಕೋಕ	12099-30199	ಗೊರಬಲು	19000-42615	ಚಾಲಿ	44299-49668
ಫ್ಯಾಕ್ಟರಿ	10169-23699	ಹೊಸತು	43569-59219	ಕೆಂಪುಗೋಟು	14709-34169
ಹೊಸ ಚಾಲಿ	33899-37501	ರಾಶಿ	41599-59269	ರಾಶಿ	57399-61699
ಪುತ್ತೂರು		ಸರಕು	51500-99999	**ಯಲ್ಲಾಪುರ**	
ಕೋಕ	20000-35000	**ಸಿದ್ದಾಪುರ**		ಅಪಿ	63709-72421
ಹೊಸದು	26000-41000	ಬಿಳೆಗೋಟು	28719-35619	ಬಿಳೆಗೋಟು	18909-37000
ಸಾಗರ		ಚಾಲಿ	42099-48159	ಚಾಲಿ	38599-49000
ಬಿಳೆಗೋಟು	18899-36200	ಕೋಕ	23219-34299	ಕೋಕ	18899-31799
ಚಾಲಿ	22099-42599	ಕೆಂಪುಗೋಟು	23980-33099	ಕೆಂಪುಗೋಟು	16009-33320
ಕೋಕ	10199-34699	ರಾಶಿ	55999-58199	ರಾಶಿ	52009-64209
ಕೆಂಪುಗೋಟು	26989-39899	ತಟ್ಟಿಬೆಟ್ಟೆ	33999-53909	ತಟ್ಟಿಬೆಟ್ಟೆ	38806-50109
ರಾಶಿ	45669-61819				

'ಸ್ಕೈರೂಟ್'ನ ಇನ್ಫಿನಿಟಿ ಕ್ಯಾಂಪಸ್ ಉದ್ಘಾಟಿಸಿದ ಮೋದಿ

ಹೈದರಾಬಾದ್ (ಪಿಟಿಐ): ಭಾರತೀಯ ಬಾಹ್ಯಾಕಾಶ ಕ್ಷೇತ್ರಕ್ಕೆ ಸಂಬಂಧಿಸಿದ ನವೋದ್ಯಮ ಸಂಸ್ಥೆ 'ಸ್ಕೈರೂಟ್'ನ ಇನ್ಫಿನಿಟಿ ಕ್ಯಾಂಪಸ್ ಅನ್ನು ಪ್ರಧಾನಿ ನರೇಂದ್ರ ಮೋದಿ ಅವರು ವರ್ಚುವಲ್ ಆಗಿ ಗುರುವಾರ ಉದ್ಘಾಟಿಸಿದರು.

ಉಪಗ್ರಹಗಳನ್ನು ಕಕ್ಷೆಗೆ ಉಡಾಯಿಸುವ ಸಾಮರ್ಥ್ಯ ಹೊಂದಿರುವ, ಈ ಸಂಸ್ಥೆಯ ಮೊದಲ ರಾಕೆಟ್ 'ವಿಕ್ರಮ್–1' ಅನ್ನೂ ಅವರು ಅನಾವರಣಗೊಳಿಸಿದರು.

ಈ ವೇಳೆ ಮಾತನಾಡಿದ ಮೋದಿ, 'ಸರ್ಕಾರವು ಬಾಹ್ಯಾಕಾಶ ಕ್ಷೇತ್ರದಲ್ಲಿ ಐತಿಹಾಸಿಕ ಸುಧಾರಣೆಗಳನ್ನು ಮಾಡಿದೆ. ಬಾಹ್ಯಾಕಾಶ ವಲಯವನ್ನು ಖಾಸಗಿ ವಲಯಕ್ಕೆ ಮುಕ್ತಗೊಳಿಸಿದ್ದರಿಂದ 'ಸ್ಕೈರೂಟ್' ಹಾಗೂ ಇಂತಹ ಅನೇಕ ಸಂಸ್ಥೆಗಳು ಹೊಸ ಸಾಧನೆ ಮಾಡುತ್ತಿವೆ. 300ಕ್ಕೂ ಅಧಿಕ ನವೋದ್ಯಮಗಳು ಈ ವಲಯಕ್ಕೆ ಹೊಸ ಭರವಸೆಯನ್ನು ನೀಡಿವೆ' ಎಂದರು.

'ಜೆನ್–ಝಿ ವೃತ್ತಿಪರರು ದೇಶದಲ್ಲಿ ನೂತನ ತಂತ್ರಜ್ಞಾನಗಳನ್ನು ಸೃಷ್ಟಿಸುತ್ತಿದ್ದಾರೆ' ಎಂದು ಶ್ಲಾಘಿಸಿದರು.

'ಇನ್ಫಿನಿಟಿ ಕ್ಯಾಂಪಸ್, ಭಾರತದ ಹೊಸ ಚಿಂತನೆ, ಆವಿಷ್ಕಾರ ಮತ್ತು ಯುವಶಕ್ತಿಯ ಪ್ರತಿಬಿಂಬವಾಗಿದೆ. ಯುವಜನರ ಸಂಶೋಧನೆಗಳು, ಸಮಸ್ಯೆಗಳನ್ನು ಎದುರಿಸುವ ಸಾಮರ್ಥ್ಯ ಹಾಗೂ ಉದ್ಯಮಶೀಲತೆಯು ಹೊಸ ಎತ್ತರವನ್ನು ತಲುಪಿವೆ' ಎಂದರು. 'ಭಾರತದ ಬಾಹ್ಯಾಕಾಶ ವಲಯವು ಜಾಗತಿಕ ಹೂಡಿಕೆದಾರರನ್ನು ಆಕರ್ಷಿಸುತ್ತಿದೆ. ಇಲ್ಲಿನ ಖಾಸಗಿ ಸಂಸ್ಥೆಗಳು ವಿಶ್ವಮಟ್ಟದಲ್ಲಿ ಗುರುತಿಸಿಕೊಳ್ಳುತ್ತಿವೆ' ಎಂದೂ ಮೋದಿ ಶ್ಲಾಘಿಸಿದರು.

ಬೆಳ್ಳಿ ದರ ₹5,100 ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಚಿನ್ನದ ದರ ಇಳಿಕೆಯಾಗಿದೆ, ಬೆಳ್ಳಿ ಬೆಲೆ ಹೆಚ್ಚಳವಾಗಿದೆ.

10 ಗ್ರಾಂ ಚಿನ್ನದ (ಶೇ 99.9ರಷ್ಟು ಪರಿಶುದ್ಧತೆ) ದರವು ₹640ರಷ್ಟು ಕಡಿಮೆಯಾಗಿ, ₹1,29,460ರಂತೆ ಮಾರಾಟವಾಗಿದೆ. ಆಭರಣ ಚಿನ್ನದ (ಶೇ 99.5ರಷ್ಟು ಪರಿಶುದ್ಧತೆ) ಬೆಲೆ ಇಷ್ಟೇ ಪ್ರಮಾಣದಲ್ಲಿ ಇಳಿಕೆಯಾಗಿ, ₹1,28,860 ಆಗಿದೆ. ಆದರೆ, ಬೆಳ್ಳಿ ದರವು ಕೆ.ಜಿಗೆ ₹5,100 ಹೆಚ್ಚಳವಾಗಿ, ₹1,68,200 ಆಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಡ್ರಗ್ಸ್: ಭಾರತ– ಮ್ಯಾನ್ಮಾರ್ ಗಡಿಯಲ್ಲಿ ಇ.ಡಿ ಶೋಧ

ನವದೆಹಲಿ/ಐಜ್ವಾಲ್ (ಪಿಟಿಐ): ಮಾದಕವಸ್ತು ಕಳ್ಳಸಾಗಣೆ ಸಂಬಂಧಿತ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಮಿಜೋರಾಂನಲ್ಲಿ ಹಾದು ಹೋಗಿರುವ ಭಾರತ–ಮ್ಯಾನ್ಮಾರ್ ಗಡಿ ಸೇರಿದಂತೆ ಅಸ್ಸಾಂ ಮತ್ತು ಗುಜರಾತ್‌ನ ಕೆಲವು ಸ್ಥಳಗಳಲ್ಲಿ ಜಾರಿ ನಿರ್ದೇಶನಾಲಯವು (ಇ.ಡಿ) ಗುರುವಾರ ಶೋಧ ನಡೆಸಿದೆ.

ಕೆಲವು ಡಿಜಿಟಲ್ ಉಪಕರಣಗಳು ಸೇರಿದಂತೆ ₹35 ಲಕ್ಷ ನಗದನ್ನು ತನಿಖಾ ಸಂಸ್ಥೆ ವಶಪಡಿಸಿಕೊಂಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಿಜೋರಾಂನ ಐಜ್ವಾಲ್, ಚಂಫೈ, ಅಸ್ಸಾಂನ ಶ್ರೀಭೂಮಿ (ಕರೀಮ್‌ಗಂಜ್) ಹಾಗೂ ಗುಜರಾತ್‌ನ ಅಹಮದಾಬಾದ್‌ನಲ್ಲಿ ಹಣ ಅಕ್ರಮ ವರ್ಗಾವಣೆ ತಡೆ (ಪಿಎಂಎಲ್‌ಎ) ಕಾಯ್ದೆಯಡಿ ಶೋಧ ನಡೆಸಲಾಗಿದೆ ಎಂದಿದ್ದಾರೆ. ಆರು ಜನರಿಂದ ₹1.41 ಕೋಟಿ ಬೆಲೆಯ 4.72 ಕೆ.ಜಿ. ಹೆರಾಯಿನ್ ವಶಪಡಿಸಿಕೊಂಡ ಮಿಜೋರಾಂ ಪೊಲೀಸರು ದಾಖಲಿಸಿದ ಎಫ್‌ಐಆರ್‌ನಿಂದ ಈ ತನಿಖೆ ಆರಂಭವಾಗಿದೆ. ಭಾರತ– ಮ್ಯಾನ್ಮಾರ್ ಗಡಿಯಲ್ಲಿ ಇ.ಡಿ ನಡೆಸಿದ ಮೊದಲ ಶೋಧ ಇದಾಗಿದೆ.

ಹಾಂಗ್‌ಕಾಂಗ್: ಮೃತರ ಸಂಖ್ಯೆ 83ಕ್ಕೆ ಏರಿಕೆ

ಬೀಜಿಂಗ್/ಹಾಂಗ್‌ಕಾಂಗ್ (ಪಿಟಿಐ): ಹಾಂಗ್‌ಕಾಂಗ್‌ನ ಬಹುಮಹಡಿ ಕಟ್ಟಡಗಳಲ್ಲಿ ಸಂಭವಿಸಿದ ಭೀಕರ ಬೆಂಕಿ ದುರಂತದಲ್ಲಿ ಮೃತಪಟ್ಟವರ ಸಂಖ್ಯೆ 83ಕ್ಕೆ ಏರಿಕೆಯಾಗಿದ್ದು, 270ಕ್ಕೂ ಹೆಚ್ಚು ಜನರು ಇನ್ನೂ ನಾಪತ್ತೆಯಾಗಿದ್ದಾರೆ ಎಂದು ಚೀನಾದ ಸರ್ಕಾರಿ ಮಾಧ್ಯಮ ವರದಿಗಳು ಗುರುವಾರ ತಿಳಿಸಿವೆ.

ಬುಧವಾರ ವಾಂಗ್ ಫುಕ್ ಕೋರ್ಟ್ ಎಂಬ ವಸತಿ ಕಟ್ಟಡದಲ್ಲಿ ಸಂಭವಿಸಿದ ಬೆಂಕಿ ಅವಘಡವನ್ನು ನರಹತ್ಯೆ ಎಂದು ಆರೋಪಿಸಿ ಮೂವರು ಶಂಕಿತರನ್ನು ಬಂಧಿಸಲಾಗಿದೆ ಎಂದು ಹಾಂಗ್‌ಕಾಂಗ್ ಪೊಲೀಸರ ಹೇಳಿಕೆಯನ್ನು ಉಲ್ಲೇಖಿಸಿ ಸರ್ಕಾರಿ ಸ್ವಾಮ್ಯದ 'ಷಿನ್ಹುವಾ' ಸುದ್ದಿ ಸಂಸ್ಥೆ ವರದಿ ಮಾಡಿದೆ.

ಹಾಂಗ್‌ಕಾಂಗ್ ವಿಶೇಷ ಆಡಳಿತ ಪ್ರದೇಶದ ಮುಖ್ಯ ಕಾರ್ಯನಿರ್ವಾಹಕ ಜಾನ್ ಲೀ ಮಾತನಾಡಿ, 'ಇದು ಹಾಂಗ್‌ಕಾಂಗ್ ಇತಿಹಾಸದಲ್ಲೇ ಅತ್ಯಂತ ಭೀಕರ ಬೆಂಕಿ ಅವಘಡವಾಗಿದೆ. ಬಹುಮಹಡಿ ಕಟ್ಟಡಗಳು ಬೆಂಕಿಗೆ ಆಹುತಿಯಾಗಿವೆ. ಕನಿಷ್ಠ 68 ಜನರು ಆಸ್ಪತ್ರೆಯಲ್ಲಿದ್ದಾರೆ' ಎಂದು ಹಾಂಗ್‌ಕಾಂಗ್ ಮೂಲದ ಸೌತ್ ಚೀನಾ ಮಾರ್ನಿಂಗ್ ಪೋಸ್ಟ್ ವರದಿ ಮಾಡಿದೆ.



ಬೆಂಕಿಯನ್ನು ನಂದಿಸುವ ಕಾರ್ಯದಲ್ಲಿ ಅಗ್ನಿಶಾಮಕ ದಳದ ಸಿಬ್ಬಂದಿ ನಿರತರಾಗಿದ್ದರು ಎಎಫ್‌ಪಿ ಚಿತ್ರ

ಶ್ವೇತಭವನ ಬಳಿ ಗುಂಡಿನ ದಾಳಿ: ಒಬ್ಬ ಸೆರೆ

ವಾಷಿಂಗ್ಟನ್ (ಎಪಿ): ಶ್ವೇತಭವನದಿಂದ ತುಸು ದೂರದಲ್ಲೇ ಸೈನಿಕರಿಬ್ಬರ ಮೇಲೆ ಬುಧವಾರ ಮಧ್ಯಾಹ್ನ ಗುಂಡಿನ ದಾಳಿ ನಡೆದಿದ್ದು, ಮೇಯರ್ ಗುರಿಯಾಗಿಸಿಕೊಂಡು ಈ ದಾಳಿ ನಡೆಸಲಾಗಿದೆ ಎನ್ನಲಾಗಿದೆ.

ಗುಂಡಿನ ದಾಳಿಯಲ್ಲಿ ಸೈನಿಕರಿಬ್ಬರೂ ಗಂಭೀರವಾಗಿ ಗಾಯಗೊಂಡಿದ್ದಾರೆ. ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಎಫ್‌ಬಿಐ ನಿರ್ದೇಶಕ ಕಾಶ್ ಪಟೇಲ್ ಮತ್ತು ವಾಷಿಂಗ್ಟನ್ ಮೇಯರ್ ಮುರಿಯಲ್ ಬೌಸರ್ ಹೇಳಿದ್ದಾರೆ.

ಶಂಕಿತ ಆರೋಪಿ ಅಫ್ಗನ್ ಪ್ರಜೆ ರಹಮಾನುಲ್ಲಾ ಲಕನ್ವಾಲ್‌ನನ್ನು (29) ಬಂಧಿಸಲಾಗಿದೆ.

ದಾಳಿಯನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಖಂಡಿಸಿದ್ದು, ಬೈಡನ್ ಆಡಳಿತದಲ್ಲಿ ಅಮೆರಿಕ ಪ್ರವೇಶಿಸಿದ ಅಫ್ಗನ್ ನಿರಾಶ್ರಿತರನ್ನು ಮರು ತನಿಖೆಗೆ ಒಳಪಡಿಸಬೇಕು ಎಂದಿದ್ದಾರೆ.

'ಜಿಎಸ್‌ಟಿ ಇಳಿಕೆಯಿಂದ ಬೇಡಿಕೆ ಚುರುಕು'

ನವದೆಹಲಿ (ಪಿಟಿಐ): ಜಿಎಸ್‌ಟಿ ದರ ಇಳಿಕೆಯು ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚಿಸಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯದ ಅಕ್ಟೋಬರ್ ತಿಂಗಳ ವರದಿ ಗುರುವಾರ ತಿಳಿಸಿದೆ.

ದೇಶದ ಆರ್ಥಿಕತೆ ಸ್ಥಿರವಾಗಿದೆ. ಪ್ರಸಕ್ತ ಆರ್ಥಿಕ ವರ್ಷದುದ್ದಕ್ಕೂ ಬೆಳವಣಿಗೆ ಕಾಯ್ದುಕೊಳ್ಳಲಿದೆ ಎಂದು ತಿಳಿಸಿದೆ.

ಜಿಎಸ್‌ಟಿ ಇಳಿಕೆ ಕೂಡ ಚಿಲ್ಲರೆ ಹಣದುಬ್ಬರದ ಇಳಿಕೆಗೆ ನೆರವಾಗಿದೆ. ಇತ್ತೀಚೆಗಿನ ತೆರಿಗೆ ಸುಧಾರಣೆಗಳಿಂದ ಕುಟುಂಬದ ಮಟ್ಟದಲ್ಲಿ ವೆಚ್ಚಕ್ಕೆ ಹೆಚ್ಚು ಹಣ ಉಳಿಯುತ್ತಿದೆ ಎಂದು ತಿಳಿಸಿದೆ.

ಜಾಗತಿಕ ಮಾರುಕಟ್ಟೆಗಳಲ್ಲಿ ವ್ಯಾಪಾರ ಅನಿಶ್ಚಿತತೆ ಉಂಟಾಗಿದೆ. ಇದು ಪ್ರಗತಿಯನ್ನು ಮಂದಗೊಳಿಸಿದೆ. ಆದರೂ, ಪ್ರಸಕ್ತ ಆರ್ಥಿಕ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಜಿಡಿಪಿ ಬೆಳವಣಿಗೆ ಶೇ 7ರಿಂದ ಶೇ 7.5ರಷ್ಟು ಇರಲಿದೆ ಎಂದು ಅಂದಾಜಿಸಲಾಗಿದೆ. ಇದು ದೇಶದ ಆರ್ಥಿಕ ಚಟುವಟಿಕೆಯ ಸದೃಢತೆಯನ್ನು ಸೂಚಿಸುತ್ತಿದೆ ಎಂದು ಹೇಳಿದೆ.



ಸೆಪ್ಟೆಂಬರ್ ತ್ರೈಮಾಸಿಕದ ಜಿಡಿಪಿ ಪ್ರಗತಿ ಅಂಕಿ–ಅಂಶಗಳು ಶುಕ್ರವಾರ ಪ್ರಕಟವಾಗಲಿವೆ.

ವ್ಯಾಪಾರ ನಿಯಮಗಳಲ್ಲಿ ಅನಿಶ್ಚಿತತೆ, ಜಾಗತಿಕ ರಾಜಕೀಯ ಬಿಕ್ಕಟ್ಟು, ಷೇರುಪೇಟೆಯ ಏರಿಳಿತ ಸೇರಿದಂತೆ ಜಾಗತಿಕ ಅನಿಶ್ಚಿತತೆಯು ದೇಶದ ರಫ್ತು, ಬಂಡವಾಳ ಒಳಹರಿವು ಮತ್ತು ಹೂಡಿಕೆದಾರರ ಭಾವನೆ ಮೇಲೆ ಪರಿಣಾಮ ಬೀರಿವೆ ಎಂದು ತಿಳಿಸಿದೆ.

ಕಾರ್ಪೊರೇಟ್ ಕಂಪನಿಗಳ ಕಾರ್ಯಾಚರಣೆ ಆರೋಗ್ಯಕರವಾಗಿದ್ದು, ಸುಸ್ಥಿರ ಲಾಭ ಕಂಡಿವೆ. ಹೊಸದಾಗಿ ಬಂದಿರುವ ಕಾರ್ಮಿಕ ಸಂಹಿತೆಗಳು 'ವಿಕಸಿತ ಭಾರತ'ದ ಗುರಿಗೆ ನೆರವಾಗಿವೆ ಎಂದು ತಿಳಿಸಿದೆ.

ಭ್ರಷ್ಟಾಚಾರ ಪ್ರಕರಣ: ಮಾಜಿ ಪ್ರಧಾನಿ ಶೇಖ್ ಹಸೀನಾಗೆ 21 ವರ್ಷ ಜೈಲು


ಶೇಖ್ ಹಸೀನಾ

ಢಾಕಾ (ಪಿಟಿಐ): ಬಾಂಗ್ಲಾದೇಶದ ಪದಚ್ಯುತ ಪ್ರಧಾನಿ ಶೇಖ್ ಹಸೀನಾ ಅವರಿಗೆ ಢಾಕಾ ವಿಶೇಷ ನ್ಯಾಯಾಲಯವು ಗುರುವಾರ 21 ವರ್ಷ ಜೈಲು ಶಿಕ್ಷೆ ವಿಧಿಸಿದೆ.

ಸರ್ಕಾರದ ವಸತಿ ಯೋಜನೆಯಲ್ಲಿ ಅಕ್ರಮ ಎಸಗಿರುವುದೂ ಸೇರಿ ಮೂರು ಭ್ರಷ್ಟಾಚಾರ ಪ್ರಕರಣಗಳಿಗೆ ಸಂಬಂಧಿಸಿದಂತೆ ಹಸೀನಾ ಅವರೊಂದಿಗೆ ಅವರ ಮಕ್ಕಳಾದ ಸಜೀಬ್ ವಾಜೆದ್ ಜಾಯ್ (54) ಮತ್ತು ಸೈಮಾ ವಾಜೆದ್ ಪುತಲ್ (52) ಅವರಿಗೂ ತಲಾ 5 ವರ್ಷಗಳ ಜೈಲು ಶಿಕ್ಷೆ ವಿಧಿಸಲಾಗಿದೆ. ವಿಚಾರಣೆಗೆ ಮೂವರೂ ಗೈರುಹಾಜರಾಗಿದ್ದರು.

2024ರಲ್ಲಿ ಬಾಂಗ್ಲಾದೇಶದಲ್ಲಿ ನಡೆದ ದಂಗೆಯ ಸಂದರ್ಭದಲ್ಲಿ 'ಮಾನವೀಯತೆ ಮೇಲಿನ ದಾಳಿ' ಕುರಿತ ಆರೋಪವು ಸಾಬೀತಾದ ನಂತರ ಅಂತರರಾಷ್ಟ್ರೀಯ ಅಪರಾಧ ನ್ಯಾಯಮಂಡಳಿಯು (ಐಸಿಟಿ) 78 ವರ್ಷದ ಹಸೀನಾ ಅವರಿಗೆ ನವೆಂಬರ್ 17ರಂದು ಮರಣ ದಂಡನೆ ವಿಧಿಸಿತ್ತು. ಈ ಶಿಕ್ಷೆ ಪ್ರಕಟಗೊಂಡ 10 ದಿನಗಳ ಅಂತರದಲ್ಲೇ ಢಾಕಾ ನ್ಯಾಯಾಲಯದ ತೀರ್ಪು ಪ್ರಕಟಗೊಂಡಿದೆ.

'ಸರ್ಕಾರದ ವಸತಿ ಯೋಜನೆಯಡಿ ಹಸೀನಾ ಅವರು ಅಧಿಕಾರ ವ್ಯಾಪ್ತಿ ಮೀರಿ ಅಕ್ರಮವಾಗಿ ನಿವೇಶನ ಪಡೆದುಕೊಂಡಿರುವುದು ಸಾಬೀತಾಗಿದೆ' ಎಂದು ಢಾಕಾ ನ್ಯಾಯಾಲಯದ ನ್ಯಾಯಾಧೀಶ ಮೊಹಮದ್ ಅಬ್ದುಲ್ಲಾ ಅಲ್ ಮಮುನ್ ತೀರ್ಪಿನಲ್ಲಿ ಹೇಳಿದ್ದಾರೆ. ಮೂರು ಭ್ರಷ್ಟಾಚಾರ ಪ್ರಕರಣಗಳಲ್ಲಿ ತಲಾ 7 ವರ್ಷಗಳಂತೆ ಒಟ್ಟು 21 ವರ್ಷಗಳ ಜೈಲು ಶಿಕ್ಷೆಯನ್ನು ನ್ಯಾಯಾಲಯ ಪ್ರಕಟಿಸಿದೆ.

ಹಸೀನಾ ಮತ್ತು ಅವರ ಕುಟುಂಬದ ಸದಸ್ಯರನ್ನು ಹೊರತುಪಡಿಸಿ ಬಾಂಗ್ಲಾದೇಶದ ಮಾಜಿ ಕಿರಿಯ ವಸತಿ ಸಚಿವ ಶರೀಫ್ ಅಹಮದ್ ಮತ್ತು ವಸತಿ ಇಲಾಖೆಯ ಅಧಿಕಾರಿಗಳು ಸೇರಿ ಒಟ್ಟು 20 ಜನರಿಗೆ ಈ ಪ್ರಕರಣದಲ್ಲಿ ವಿವಿಧ ಹಂತದ ಜೈಲು ಶಿಕ್ಷೆ ವಿಧಿಸಲಾಗಿದೆ. ಆರೋಪಿಗಳಲ್ಲಿ ಒಬ್ಬರು ಮಾತ್ರ ಕೋರ್ಟ್‌ಗೆ ಹಾಜರಾಗಿ ನೇರವಾಗಿ ವಿಚಾರಣೆ ಎದುರಿಸಿದರು. ಅವರಿಗೆ ಮೂರು ವರ್ಷ ಶಿಕ್ಷೆ ವಿಧಿಸಲಾಗಿದೆ.

2024ರ ಆಗಸ್ಟ್ 5ರಂದು ಬಾಂಗ್ಲಾದೇಶದ ಸರ್ಕಾರ ಪತನವಾದ ನಂತರ ದೇಶ ತೊರೆದಿರುವ ಹಸೀನಾ ಭಾರತದಲ್ಲಿ ಆಶ್ರಯ ಪಡೆದಿದ್ದಾರೆ.

ಮಾಜಿ ಪ್ರಧಾನಿ ಕುರಿತ ವದಂತಿ ಅಲ್ಲಗಳೆದ ಜೈಲಿನ ಆಡಳಿತ

'ಇಮ್ರಾನ್ ಖಾನ್ ಆರೋಗ್ಯವಾಗಿದ್ದಾರೆ'


ಇಮ್ರಾನ್ ಖಾನ್

ಲಾಹೋರ್ (ಪಿಟಿಐ): ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರು 'ಅಡಿಯಾಲಾ ಜೈಲಿನಲ್ಲಿ ಸಂಪೂರ್ಣವಾಗಿ ಆರೋಗ್ಯವಾಗಿದ್ದಾರೆ' ಎಂದು ಜೈಲು ಅಧಿಕಾರಿಗಳು ಗುರುವಾರ ಹೇಳಿದ್ದಾರೆ. ಅವರ ಆರೋಗ್ಯದ ಬಗ್ಗೆ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿರುವ ವದಂತಿಗಳನ್ನು ಅಲ್ಲಗಳೆದಿದ್ದಾರೆ.

'ಇಮ್ರಾನ್ ಅವರ ಆರೋಗ್ಯದ ಬಗ್ಗೆ ಪಾಕಿಸ್ತಾನ್ ತೆಹ್ರೀಕ್-ಎ-ಇನ್ಸಾಫ್ (ಪಿಟಿಐ) ಪಕ್ಷದ ನಾಯಕತ್ವಕ್ಕೆ ಮಾಹಿತಿ ನೀಡಲಾಗಿದೆ. ಅವರ ಆರೈಕೆಗೆ ಅಗತ್ಯವಿರುವ ಎಲ್ಲ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ' ಎಂದು ಅಡಿಯಾಲಾ ಜೈಲು ಆಡಳಿತವು ಹೇಳಿಕೆಯಲ್ಲಿ ತಿಳಿಸಿದೆ.

73 ವರ್ಷದ ಇಮ್ರಾನ್ ಅವರು 2023ರ ಆಗಸ್ಟ್‌ನಿಂದ ಜೈಲಿನಲ್ಲಿದ್ದಾರೆ. ಭ್ರಷ್ಟಾಚಾರ ಪ್ರಕರಣವೊಂದರಲ್ಲಿ ಅವರು 14 ವರ್ಷ ಶಿಕ್ಷೆಗೆ ಗುರಿಯಾಗಿದ್ದಾರೆ.

ಇಮ್ರಾನ್ ಅವರು ಜೈಲಿನಲ್ಲಿ ಮೃತಪಟ್ಟಿದ್ದಾರೆ ಎಂಬ ಸುದ್ದಿ 'ಎಕ್ಸ್' ಒಳಗೊಂಡಂತೆ ಸಾಮಾಜಿಕ ಮಾಧ್ಯಮಗಳಲ್ಲಿ ಬುಧವಾರ ಹರಿದಾಡಿದ್ದವು. ವಿದೇಶಗಳ ಕೆಲವು ಮಾಧ್ಯಮಗಳು ಅವರ ಆರೋಗ್ಯದ ಬಗ್ಗೆ ಹಬ್ಬಿರುವ ವದಂತಿಗಳ ಕುರಿತು ವರದಿ ಮಾಡಿವೆ.

'ಇಮ್ರಾನ್ ಖಾನ್ ಎಲ್ಲಿದ್ದಾರೆ?' ಎಂಬ ಹ್ಯಾಷ್‌ಟ್ಯಾಗ್‌ನಡಿ ಅವರ ಆರೋಗ್ಯಕ್ಕೆ ಸಂಬಂಧಿಸಿದ ವದಂತಿಗಳು ಗುರುವಾರ ಬೆಳಿಗ್ಗೆ 'ಎಕ್ಸ್'ನಲ್ಲಿ ಟ್ರೆಂಡಿಂಗ್ ಆಗಿತ್ತು.

ಇಮ್ರಾನ್ ಆರೋಗ್ಯದ ಬಗ್ಗೆ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿರುವ ವದಂತಿಗಳಲ್ಲಿ ಯಾವುದೇ ಹುರುಳಿಲ್ಲ. ಅವರನ್ನು ಅಡಿಯಾಲಾ ಜೈಲಿನಿಂದ ಬೇರೆಡೆಗೆ ಸ್ಥಳಾಂತರ ಮಾಡಲಾಗುತ್ತಿದೆ ಎಂಬ ವರದಿಯಲ್ಲೂ ಸತ್ಯಾಂಶವಿಲ್ಲ ಎಂದು ಜೈಲಿನ ಹೇಳಿಕೆ ತಿಳಿಸಿದೆ.

ಇಮ್ರಾನ್ ಅವರ ಮೂವರು ಸಹೋದರಿಯರಿಗೆ ಅವರನ್ನು ಜೈಲಿನಲ್ಲಿ ಭೇಟಿಯಾಗುವ ಅವಕಾಶವನ್ನು ಅಧಿಕಾರಿಗಳು ನೀಡಿರಲಿಲ್ಲ. ಕಳೆದ ಆರು ವಾರಗಳಲ್ಲಿ ಅವರ ಭೇಟಿಯನ್ನು ಪದೇ ಪದೇ ನಿರಾಕರಿಸಿದ್ದು ಈ ವದಂತಿಗಳು ಹಬ್ಬಲು ಕಾರಣವಾಗಿದೆ. ಭೇಟಿಗೆ ಅವಕಾಶ ನೀಡುವಂತೆ ಕೋರಿ ಕುಟುಂಬದ ಸದಸ್ಯರು ಮತ್ತು ಪಿಟಿಐ ಕಾರ್ಯಕರ್ತರು ಜೈಲಿನ ಹೊರಗೆ ಧರಣಿಯನ್ನೂ ನಡೆಸಿದ್ದರು.

ಭೇಟಿಗೆ ಅವಕಾಶ ನೀಡುವಂತೆ ಒತ್ತಾಯ

ಇಮ್ರಾನ್ ಅವರ ಭೇಟಿಗೆ ಅವಕಾಶ ನೀಡಬೇಕು ಎಂದು ಪಿಟಿಐ ಪಕ್ಷ ಗುರುವಾರ ಒತ್ತಾಯಿಸಿದೆ. 'ನ.4ರ ಬಳಿಕ ಇಮ್ರಾನ್ ಅವರನ್ನು ಯಾರೂ ಭೇಟಿಯಾಗಿಲ್ಲ. ಭೇಟಿಗೆ ಅವಕಾಶ ನಿರಾಕರಿಸಿದ್ದಕ್ಕೆ ಸ್ಪಷ್ಟ ಕಾರಣವನ್ನೂ ನೀಡಿಲ್ಲ' ಎಂದು ಪಕ್ಷದ ವಕ್ತಾರ ಜುಲ್ಫಿಕರ್ ಬುಖಾರಿ ಹೇಳಿದ್ದಾರೆ.

ಜೈಲು ನಿಯಮಗಳ ಪ್ರಕಾರ ಇಮ್ರಾನ್ ಅವರಿಗೆ ವಾರಕ್ಕೊಮ್ಮೆಯಾದರೂ ಹೊರಗಿನವರನ್ನು ಭೇಟಿಯಾಗಲು ಅವಕಾಶವಿದೆ. ಆದರೂ, ಜೈಲು ಅಧಿಕಾರಿಗಳು ಇಂತಹ ಭೇಟಿಗೆ ಅವಕಾಶ ನೀಡದೆಯೂ ಇರಬಹುದು. ಇದೀಗ ಹೊರಗಿನವರನ್ನು ಭೇಟಿಯಾಗಲು ಅವಕಾಶ ನೀಡದೆ ಹಲವು ವಾರಗಳು ಕಳೆದಿವೆ ಎಂದು ಪಕ್ಷ ಹೇಳಿದೆ.

ದೀಪ್ತಿ, ಅಮೇಲಿಯಾಗೆ ‘ಬಂಪರ್’

ಮಹಿಳಾ ಪ್ರೀಮಿಯರ್ ಲೀಗ್ ಬಿಡ್: ಶ್ರೀಚರಣಿ, ಶಿಖಾಗೆ ದೊಡ್ಡ ಮೊತ್ತ



ಅಮೇಲಿಯಾ ಕರ್



ಶಿಖಾ ಪಾಂಡೆ

ನವದೆಹಲಿ (ಪಿಟಿಐ): ಭಾರತ ಮಹಿಳಾ ಕ್ರಿಕೆಟ್ ತಂಡದ ಆಲ್‌ರೌಂಡರ್ ದೀಪ್ತಿ ಶರ್ಮಾ ಅವರು ಗುರುವಾರ ನಡೆದ ಮಹಿಳಾ ಪ್ರೀಮಿಯರ್ ಲೀಗ್ ಬಿಡ್ ಪ್ರಕ್ರಿಯೆಯಲ್ಲಿ ದೊಡ್ಡ ಮೊತ್ತ ಗಳಿಸಿದರು. ಯುಪಿ ವಾರಿಯರ್ಸ್ ತಂಡವು ಅವರಿಗೆ ₹3.20 ಕೋಟಿ ನೀಡಿ ಖರೀದಿಸಿತು.

ಈಚೆಗೆ ನಡೆದ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ಭಾರತ ತಂಡವು ಚಾಂಪಿಯನ್ ಪಟ್ಟವೇರುವಲ್ಲಿ ದೀಪ್ತಿ ಅವರ ಪಾತ್ರ ಮಹತ್ವದ್ದಾಗಿತ್ತು. ಯುಪಿ ತಂಡವು ರೈಟ್ ಟು ಮ್ಯಾಚ್ ಕಾರ್ಡ್ (ಆರ್‌ಟಿಎಂ) ಬಳಸಿಕೊಂಡು ದೀಪ್ತಿ ಅವರನ್ನು ಸೆಳೆದುಕೊಂಡಿತು. ಡಬ್ಲ್ಯುಪಿಎಲ್ ಇತಿಹಾಸದಲ್ಲಿ ಅತ್ಯಧಿಕ ಮೌಲ್ಯ ಪಡೆದ ಎರಡನೇ ಆಟಗಾರ್ತಿ ಎಂಬ ಹೆಗ್ಗಳಿಕೆಗೆ ದೀಪ್ತಿ ಪಾತ್ರರಾದರು. ಇವರಿಗಿಂತ ₹20 ಲಕ್ಷ (ರಿಟೇನ್ ಮೊತ್ತ) ಹೆಚ್ಚು ಮೌಲ್ಯ ಹೊಂದಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ನಾಯಕಿ ಸ್ಮೃತಿ ಮಂದಾನ ಮೊದಲ ಸ್ಥಾನದಲ್ಲಿದ್ದಾರೆ.

‘ನಾವು ಅಂದುಕೊಂಡ ಮೌಲ್ಯಕ್ಕೆ ದೀಪ್ತಿ ಅವರನ್ನು ಸೇರ್ಪಡೆ ಮಾಡಿಕೊಳ್ಳಲು ಸಾಧ್ಯವಾಯಿತು. ಉತ್ತಮ ದರ್ಜೆಯ ಸ್ಪಿನ್ ಬೌಲಿಂಗ್ ಆಲ್‌ರೌಂಡರ್ ಅವರಾಗಿದ್ದು ದೊಡ್ಡ ಮೌಲ್ಯ ನೀಡಿದ್ದು ಸೂಕ್ತವಾಗಿದೆ’ ಎಂದು ಯುಪಿ ವಾರಿಯರ್ಸ್ ತಂಡದ ನಿರ್ದೇಶಕ (ಕ್ರಿಕೆಟ್ ಚಟುವಟಿಕೆಗಳು) ಕ್ಷೇಮಲ್ ವೈಂಗಣಕರ್ ಹೇಳಿದರು.

ಮುಂಬೈ ಇಂಡಿಯನ್ಸ್ ತಂಡವು ನ್ಯೂಜಿಲೆಂಡ್ ಆಟಗಾರ್ತಿ ಅಮೇಲಿಯಾ ಕರ್ (₹3 ಕೋಟಿ) ಅವರನ್ನು ಖರೀದಿಸಿತು. 25 ವರ್ಷದ ಅಮೇಲಿಯಾ ಅವರು 2023 ಮತ್ತು 2025ರಲ್ಲಿ ಮುಂಬೈ ತಂಡದಲ್ಲಿ ಆಡಿದ್ದರು. ಆಗ ತಂಡವು ಪ್ರಶಸ್ತಿ ಜಯಿಸಿತ್ತು.

ಯುಪಿ ವಾರಿಯರ್ಸ್ ತಂಡವು ಅನುಭವಿ ಆಲ್‌ರೌಂಡರ್ ಶಿಖಾ ಪಾಂಡೆ (₹2.40 ಕೋಟಿ) ಅವರನ್ನು ಖರೀದಿಸಿತು. ಶಿಖಾ ಅವರು 2023ರಲ್ಲಿ ಕೊನೆಯ ಬಾರಿಗೆ ಭಾರತ ತಂಡದಲ್ಲಿ ಆಡಿದ್ದರು.

ವಿಶ್ವಕಪ್ ಟೂರ್ನಿಯಲ್ಲಿ ಗಮನ ಸೆಳೆದಿದ್ದ ಭಾರತ ತಂಡದ ಎಡಗೈ ಸ್ಪಿನ್ನರ್ ಶ್ರೀಚರಣಿ ಅವರಿಗೂ ಉತ್ತಮ ಮೊತ್ತ ಒಲಿಯಿತು. ಡೆಲ್ಲಿ ಕ್ಯಾಪಿಟಲ್ಸ್ ತಂಡವು ₹1.30 ಕೋಟಿ ನೀಡಿ ಅವರನ್ನು ಖರೀದಿಸಿತು. ಯುಪಿ ವಾರಿಯರ್ಸ್ ತಂಡವು ನಿಕಟ ಪೈಪೋಟಿಯೊಡ್ಡಿತು. ಲಾರಾ ವೋಲ್ವಾರ್ಟ್ (₹ 1 ಕೋಟಿ) ಕೂಡ ಡೆಲ್ಲಿ ತಂಡಕ್ಕೆ ಸೇರಿಕೊಂಡರು.

ವಾರಿಯರ್ಸ್ ತಂಡವು ಆಸ್ಟ್ರೇಲಿಯಾದ ಉದಯೋನ್ಮುಖ ಪ್ರತಿಭೆ ಫೋಬಿ ಲಿಚ್‌ಫೀಲ್ಡ್ (₹ 1.20 ಕೋಟಿ) ಮತ್ತು ಭಾರತದ ಬ್ಯಾಟರ್ ಪ್ರತೀಕಾ ರಾವಲ್ (₹50 ಲಕ್ಷ) ಅವರನ್ನು ಸೆಳೆದುಕೊಳ್ಳುವಲ್ಲಿ ಯಶಸ್ವಿಯಾಯಿತು. ಮೆಗ್ ಲ್ಯಾನಿಂಗ್ (₹1.9 ಕೋಟಿ) ಅವರೂ ಯುಪಿ ತಂಡದ ಪಾಲಾದರು. ಖ್ಯಾತನಾಮ ಆಟಗಾರ್ತಿ ಸೋಫಿ ಡಿವೈನ್ (₹2 ಕೋಟಿ) ಗುಜರಾತ್ ಜೈಂಟ್ಸ್ ಸೇರಿದರು.

ಬಿಡ್ ಪ್ರಕ್ರಿಯೆಯಲ್ಲಿ ಆಸ್ಟ್ರೇಲಿಯಾ ತಂಡದ ನಾಯಕಿ ಅಲೀಸಾ ಹೀಲಿ ಅವರನ್ನು ಯಾರೂ ಖರೀದಿಸದಿರುವುದು ಅಚ್ಚರಿಗೆ ಕಾರಣವಾಯಿತು.

ಬಿಡ್‌ನಲ್ಲಿ ಒಟ್ಟು 67 ಆಟಗಾರ್ತಿಯರನ್ನು ತಂಡಗಳು ಸೇರ್ಪಡೆ ಮಾಡಿಕೊಂಡವು.

ಜನವರಿ 9ರಿಂದ ಫೆಬ್ರುವರಿ 5ರ ವರೆಗೆ ಡಬ್ಲ್ಯೂಪಿಎಲ್ ನಡೆಯಲಿದೆ. ನವಿ ಮುಂಬೈ ಮತ್ತು ವಡೋದರಾದಲ್ಲಿ ಪಂದ್ಯಗಳು ಆಯೋಜನೆಗೊಂಡಿವೆ.

ಆರ್‌ಸಿಬಿ ತಂಡಕ್ಕೆ ಅರುಂಧತಿ, ಪೂಜಾ

ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ತನ್ನ ಬೌಲಿಂಗ್ ವಿಭಾಗವನ್ನು ಬಲಿಷ್ಠಗೊಳಿಸುವತ್ತ ಚಿತ್ತ ಹರಿಸಿತು.


ಲಾರೆನ್ ಬೆಲ್

ಅದರಿಂದಾಗಿ ಭಾರತ ತಂಡದ ಬೌಲರ್ ಅರುಂಧತಿ ರೆಡ್ಡಿ (₹75 ಲಕ್ಷ) ಮತ್ತು ಸ್ಪಿನ್ನರ್ ಆಲ್‌ರೌಂಡರ್ (₹85 ಲಕ್ಷ) ಅವರನ್ನು ಸೇರ್ಪಡೆ ಮಾಡಿಕೊಂಡಿತು.ಅವರಲ್ಲದೇ, ಲಾರೆನ್ ಬೆಲ್ (₹90 ಲಕ್ಷ) ಅವರೂ ಆರ್‌ಸಿಬಿ ಸೇರಿದರು.

ಬಿಡ್ ಆದ ಆಟಗಾರ್ತಿಯರು

- **ರಾಯಲ್ ಚಾಲೆಂಜರ್ಸ್ ಬೆಂಗಳೂರು:** ಲಾರೆನ್ ಬೆಲ್ (₹90 ಲಕ್ಷ), ಪೂಜಾ ವಸ್ತ್ರಾಕರ್ (₹85 ಲಕ್ಷ), ಅರುಂಧತಿ ರೆಡ್ಡಿ (₹75 ಲಕ್ಷ), ಗ್ರೇಸ್ ಹ್ಯಾರಿಸ್ (₹75 ಲಕ್ಷ), ನದೀನ್ ಡಿ ಕ್ಲರ್ಕ್ (₹65 ಲಕ್ಷ), ರಾಧಾ ಯಾದವ್ (₹65 ಲಕ್ಷ), ಜಾರ್ಜಿಯಾ ವಾಲ್ (₹60 ಲಕ್ಷ), ಲಿನ್ಸೆ ಸ್ಮಿತ್ (₹30 ಲಕ್ಷ), ದಯಾಳನ್ ಹೇಮಲತಾ (₹30 ಲಕ್ಷ), ಪ್ರೇಮಾ ರಾವತ್ (₹20 ಲಕ್ಷ), ಗೌತಮಿ ನಾಯಕ್ (₹10 ಲಕ್ಷ) ಹಾಗೂ ಪ್ರತ್ಯುಷಾ ಕುಮಾರ್ (₹10 ಲಕ್ಷ).
- **ಯು.ಪಿ. ವಾರಿಯರ್ಸ್:** ದೀಪ್ತಿ ಶರ್ಮಾ (₹3.2 ಕೋಟಿ), ಶಿಖಾ ಪಾಂಡೆ (₹2.4 ಕೋಟಿ), ಮೆಗ್ ಲ್ಯಾನಿಂಗ್ (₹1.9 ಕೋಟಿ), ಫೋಬಿ ಲಿಚ್‌ಫೀಲ್ಡ್ (₹1.2 ಕೋಟಿ), ಆಶಾ ಶೋಭನಾ ಜಾಯ್ (₹1.1 ಕೋಟಿ), ಸೋಫಿ ಎಕ್ಲೆಸ್ಟೋನ್ (₹85 ಲಕ್ಷ), ದಿಯಾಂದ್ರಾ ಡಾಟಿನ್ (₹80 ಲಕ್ಷ), ಕಿರಣ್ ನವಗಿರೆ (₹60 ಲಕ್ಷ), ಹರ್ಲೀನ್ ಡಿಯೋಲ್ (₹50 ಲಕ್ಷ), ಕ್ರಾಂತಿ ಗೌಡ್ (₹50 ಲಕ್ಷ), ಪ್ರತೀಕಾ ರಾವಲ್ (₹50 ಲಕ್ಷ), ಕ್ಲೋಯೆ ಟ್ರೈಯಾನ್ (₹30 ಲಕ್ಷ), ಶಿಪ್ರಾ ಗಿರಿ (₹10 ಲಕ್ಷ), ಸಿಮ್ರನ್ ಶೇಖ್ (₹10 ಲಕ್ಷ), ತಾರಾ ನೋರಿಸ್ (₹10 ಲಕ್ಷ), ಸುಮನ್ ಮೀನಾ (₹10 ಲಕ್ಷ) ಹಾಗೂ ಗೋಂಗಡಿ ತ್ರಿಶಾ (₹10 ಲಕ್ಷ).
- **ದೆಹಲಿ ಕ್ಯಾಪಿಟಲ್ಸ್:** ಚಿನೆಲ್ ಹೆನ್ರಿ (₹1.3 ಕೋಟಿ), ಶ್ರೀಚರಣಿ (₹1.3 ಕೋಟಿ), ಲಾರಾ ವೋಲ್ವಾರ್ಟ್ (₹1.1ಕೋಟಿ), ಸ್ನೇಹ್ ರಾಣಾ (₹50 ಲಕ್ಷ), ಮಿನ್ನು ರಾಣಿ (₹40 ಲಕ್ಷ), ಲಿಜೆಲ್ ಲೀ (₹30 ಲಕ್ಷ), ತಾನಿಯಾ ಭಾಟಿಯಾ (₹30 ಲಕ್ಷ), ನಂದಿ ಶರ್ಮಾ (₹20 ಲಕ್ಷ), ದೀಯಾ ಯಾದವ್ (₹10 ಲಕ್ಷ), ಮಮತಾ ಮಡಿವಾಳ (₹10 ಲಕ್ಷ) ಹಾಗೂ ಲ್ಯೂಸಿ ಹ್ಯಾಮಿಲ್ಟನ್ (₹10 ಲಕ್ಷ).
- **ಗುಜರಾತ್ ಜೈಂಟ್ಸ್:** ಸೋಫಿ ಡಿವೈನ್ (₹2 ಕೋಟಿ), ಜಾರ್ಜಿಯಾ ವಾರ್ಹೆಮ್ (₹1 ಕೋಟಿ), ಭಾರತಿ ಫೂಲ್ಮಾಲಿ (₹70 ಲಕ್ಷ), ಕಾಶ್ವಿ ಗೌತಮ್ (₹65 ಲಕ್ಷ), ರೇಣುಕಾ ಸಿಂಗ್ (₹60 ಲಕ್ಷ), ಕಿಮ್ ಗಾರ್ಥ್ (₹50 ಲಕ್ಷ), ಯಷ್ಟಿಕಾ ಭಾಟಿಯಾ (₹50 ಲಕ್ಷ), ಡ್ಯಾನಿ ವ್ಯಾಟ್ (₹50 ಲಕ್ಷ), ತನುಜಾ ಕನ್ವರ್ (₹45 ಲಕ್ಷ), ಅನುಷ್ಕಾ ಶರ್ಮಾ (₹45 ಲಕ್ಷ), ರಾಜೇಶ್ವರಿ ಗಾಯಕ್ವಾಡ್ (₹40 ಲಕ್ಷ), ತೀತಾಸ್ ಸಾಧು (₹30 ಲಕ್ಷ), ಕನಿಕಾ ಅಹುಜಾ (₹30 ಲಕ್ಷ), ಆಯುಷಿ ಸೋನಿ (₹30 ಲಕ್ಷ), ಹ್ಯಾಪಿ ಕುಮಾರಿ (₹10 ಲಕ್ಷ) ಹಾಗೂ ಶಿವಾನಿ ಸಿಂಗ್ (₹10 ಲಕ್ಷ).
- **ಮುಂಬೈ ಇಂಡಿಯನ್ಸ್:** ಅಮೇಲಿಯಾ ಕರ್ (₹3 ಕೋಟಿ), ಸಜೀವನ್ ಸಜನಾ (₹75 ಲಕ್ಷ), ಶಬನಿಮ್ ಇಸ್ಮಾಯಿಲ್ (₹60 ಲಕ್ಷ), ನಿಕೋಲಾ ಕ್ಯಾರಿ (₹30 ಲಕ್ಷ), ಸೈಕಾ ಇಶಾಕ್ (₹30 ಲಕ್ಷ), ಸಂಸ್ಕೃತಿ ಗುಪ್ತಾ (₹20 ಲಕ್ಷ), ತ್ರಿವೇಣಿ ವಸಿಷ್ಠ (₹20 ಲಕ್ಷ), ರಹೀಲಾ ಫಿರ್ದೂಸ್ (₹10 ಲಕ್ಷ), ಪೂನಂ ಖೆಮ್ನಾರ್ (₹10 ಲಕ್ಷ), ನಲ್ಲಾ ರೆಡ್ಡಿ (₹10 ಲಕ್ಷ) ಹಾಗೂ ಮಿಲಿ ಇಲ್ಲಿಂಗ್‌ವರ್ಥ್ (₹10 ಲಕ್ಷ).

ವಾಟರ್‌ಪೋಲೊ: ಎನ್‌ಎಸಿ ಪಾರಮ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೆಟ್ಟಕಲ್ಲಪ್ಪ ಈಜು ಕೇಂದ್ರ (ಎನ್‌ಎಸಿ) ತಂಡವು ಕ್ಯಾಪ್ಟನ್ ಸಿ.ಷಣ್ಮುಗಂ ರಾಜ್ಯ 15 ವರ್ಷದೊಳಗಿನವರ ವಾಟರ್‌ಪೋಲೊ ಚಾಂಪಿಯನ್‌ಷಿಪ್‌ನಲ್ಲಿ ಬಾಲಕ ಹಾಗೂ ಬಾಲಕಿಯರ ವಿಭಾಗದಲ್ಲಿ ಪ್ರಶಸ್ತಿ ಗೆದ್ದು ಪಾರಮ್ಯ ಮೆರೆಯಿತು.

ಗುರುವಾರ ನಡೆದ ಬಾಲಕರ ವಿಭಾಗದ ಫೈನಲ್‌ನಲ್ಲಿ ಎನ್‌ಎಸಿ ತಂಡವು 7–5ರಿಂದ ಸ್ಟಾರ್ ಅಕ್ವಾಟಿಕ್ಸ್ ತಂಡದ ವಿರುದ್ಧ ರೋಚಕ ಗೆಲುವು ಸಾಧಿಸಿತು. ಕಂಚಿನ ಪದಕಕ್ಕಾಗಿ ನಡೆದ ಹಣಾಹಣಿಯಲ್ಲಿ ಸ್ವಿಮ್‌ಲೈಫ್ ಈಜು ಅಕಾಡೆಮಿ ತಂಡವು 12–9ರಿಂದ ಬಸವನಗುಡಿ ಈಜು ಕೇಂದ್ರ (ಬಿಎಸಿ) ತಂಡವನ್ನು ಸೋಲಿಸಿತು.

ತೀವ್ರ ಪೈಪೋಟಿ ಇದ್ದ ಬಾಲಕಿಯರ ವಿಭಾಗದ ಪ್ರಶಸ್ತಿ ಸುತ್ತಿನಲ್ಲಿ ಎನ್‌ಎಸಿ ತಂಡವು 4–3ರಿಂದ ಬಿಎಸಿ ತಂಡವನ್ನು ಪರಾಭವಗೊಳಿಸಿತು.

ಸ್ವಿಮ್‌ಲೈಫ್ ತಂಡವು 16–3ರಿಂದ ಸೀವರ್ಲ್ಡ್ ಅಕ್ವಾಟಿಕ್ಸ್ ಸವಾಲನ್ನು ಮೆಟ್ಟಿ ಕಂಚು ಜಯಿಸಿತು.


ಬಾಲಕಿಯರ ಫೈನಲ್‌ನಲ್ಲಿ ನಿರ್ಣಾಯಕ ಗೋಲು ಗಳಿಸಿದ ನೆಟ್ಟಕಲ್ಲಪ್ಪ ಈಜು ಕೇಂದ್ರ ತಂಡದ ಸಾಕ್ಷಿ ಸಂತೋಷ್ (ಎಡ) ಚಿತ್ರ: ಪುಷ್ಕರ್ ವಿ.

ಪ್ರಧಾನಿಗೆ ಬ್ಯಾಟ್ ಉಡುಗೊರೆ

ಚಿತ್ರ: ಪಿಟಿಐ


ಕೊಲಂಬೊದಲ್ಲಿ ಇತ್ತೀಚೆಗೆ ನಡೆದ ಅಂಧ ಮಹಿಳಾ ಟಿ20 ಕ್ರಿಕೆಟ್ ವಿಶ್ವಕಪ್ ಗೆದ್ದುಕೊಂಡ ಭಾರತ ತಂಡದ ಆಟಗಾರ್ತಿಯರು ಗುರುವಾರ ನವದೆಹಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾದರು. ಈ ಸಂದರ್ಭದಲ್ಲಿ ಆಟಗಾರ್ತಿಯರ ಹಸ್ತಾಕ್ಷರಗಳಿದ್ದ ಬ್ಯಾಟ್‌ಅನ್ನು ಮೋದಿ ಅವರಿಗೆ ಉಡುಗೊರೆಯಾಗಿ ನೀಡಲಾಯಿತು

ಕೆಐಎಸ್‌ಎಸ್ ತಂಡ ಶುಭಾರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜು ಎಂ. ಅವರ (4ನೇ ನಿ., 17ನೇ ನಿ., 18ನೇ ನಿ. ಹಾಗೂ 40ನೇ ನಿ.) ಅವರ ನಾಲ್ಕು ಗೋಲುಗಳ ನೆರವಿನಿಂದ ಭುವನೇಶ್ವರದ ಕಳಿಂಗ ಇನ್‌ಸ್ಟಿಟ್ಯೂಟ್ ಆಫ್ ಸೋಷಿಯಲ್ ಸೈನ್ಸಸ್ (ಕೆಐಎಸ್‌ಎಸ್) ಶಾಲಾ ತಂಡವು ಗುರುವಾರ ಆರಂಭಗೊಂಡ 13ನೇ ಆವೃತ್ತಿಯ ಪರಿಕ್ರಮ ಚಾಂಪಿಯನ್ಸ್ ಲೀಗ್ (ಪಿಸಿಎಲ್) ಫುಟ್‌ಬಾಲ್ ಟೂರ್ನಿಯಲ್ಲಿ 4–0ಯಿಂದ ಕ್ಯಾಥೆಡ್ರಲ್ ಪ್ರೌಢಶಾಲಾ ತಂಡವನ್ನು ಮಣಿಸಿತು.

16 ವರ್ಷದೊಳಗಿನ ಅಂತರ ಶಾಲಾ ಲೀಗ್ ಇದಾಗಿದ್ದು, ಡಿವೈಇಎಸ್ ಆಯುಕ್ತ ಆರ್.ಚೇತನ್ ಅವರು ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಉದ್ಘಾಟನಾ ಸಮಾರಂಭದಲ್ಲಿ ಟೂರ್ನಿಗೆ ಚಾಲನೆ ನೀಡಿದರು.

ಪರಿಕ್ರಮ ಹ್ಯುಮ್ಯಾನಿಟಿ ಫೌಂಡೇಷನ್ ಆಶ್ರಯದಲ್ಲಿ ಈ ಟೂರ್ನಿ ಆಯೋಜನೆಗೊಂಡಿದೆ. ಬೆಂಗಳೂರಿನ 13 ಶಾಲೆಗಳು ಸೇರಿ ಗೋವಾ, ಉದಯಪುರ ಹಾಗೂ ಒಡಿಶಾದ ಒಟ್ಟು 16 ತಂಡಗಳು ಟೂರ್ನಿಯಲ್ಲಿ ಭಾಗವಹಿಸಿವೆ.

ಫಲಿತಾಂಶಗಳು: ಲಯೊಲಾ ಪ್ರೌಢಶಾಲಾ ತಂಡ (ಗೋವಾ) 1–0ಯಿಂದ ದೆಹಲಿ ಪಬ್ಲಿಕ್ ಶಾಲೆ (ಪೂರ್ವ) ವಿರುದ್ಧ; ಕೆಐಎಸ್‌ಎಸ್ ಶಾಲಾ ತಂಡ 4–0ಯಿಂದ ಕ್ಯಾಥೆಡ್ರಲ್ ಹೈಸ್ಕೂಲ್ ವಿರುದ್ಧ; ಹೆಡ್‌ಸ್ಟಾರ್ಟ್ ಶಿಕ್ಷಣ ಸಂಸ್ಥೆ ತಂಡ 2–0ಯಿಂದ ಲೆಗಸಿ ಶಾಲೆ ವಿರುದ್ಧ; ದೆಹಲಿ ಪಬ್ಲಿಕ್ ಶಾಲೆ (ಉತ್ತರ) 3–0ಯಿಂದ ಬಿಷಪ್ ಕಾಟನ್ ಬಾಲಕರ ಶಾಲೆ ವಿರುದ್ಧ; ಸರ್ಕಾರಿ ಪ್ರೌಢಶಾಲೆ, ಪಾಟರಿಟೌನ್ ತಂಡ 6–0ಯಿಂದ ಸೇಂಟ್ ಅಲೋಷಿಯಸ್ ಪ್ರೌಢಶಾಲೆ ವಿರುದ್ಧ; ಸೇಂಟ್ ಜೋಸೆಫ್ ಬಾಲಕರ ಪ್ರೌಢಶಾಲಾ ತಂಡವು 3–1ರಿಂದ ಇನ್ವೆಂಚರ್ ಅಕಾಡೆಮಿ ವಿರುದ್ಧ; ಗ್ರೀನ್‌ವುಡ್ ಪ್ರೌಢಶಾಲಾ ತಂಡವು 2–0ಯಿಂದ ಸ್ಟೆಪ್ ಬೈ ಸ್ಟೆಪ್ ಪ್ರೌಢಶಾಲೆ (ಉದಯಪುರ) ವಿರುದ್ಧ; ಪರಿಕ್ರಮ ಸೆಂಟರ್ ಫಾರ್ ಲರ್ನಿಂಗ್ ತಂಡವು 1–0ಯಿಂದ ರೈಯಾನ್ ಅಂತರರಾಷ್ಟ್ರೀಯ ಶಾಲೆ ವಿರುದ್ಧ ಗೆಲುವು ಸಾಧಿಸಿದವು.


ಸರ್ಕಾರಿ ಪ್ರೌಢಶಾಲೆ, ಪಾಟರಿಟೌನ್ ಹಾಗೂ ಸೇಂಟ್ ಅಲೋಷಿಯಸ್ ಪ್ರೌಢಶಾಲಾ ತಂಡಗಳ ನಡುವಣ ಪಂದ್ಯದಲ್ಲಿ ಆಟಗಾರರು ಚೆಂಡಿಗಾಗಿ ಪೈಪೋಟಿ ನಡೆಸಿದರು

ಸೆಮಿಗೆ ಬ್ಯಾಂಕ್ ಆಫ್ ಬರೋಡಾ

ಬೆಂಗಳೂರು: ಅರವಿಂದ್ (14 ಅಂಕ) ಮತ್ತು ದಿನೇಶ್ (13 ಅಂಕ) ಅವರ ಆಟದ ನೆರವಿನಿಂದ ಬ್ಯಾಂಕ್ ಆಫ್ ಬರೋಡಾ ತಂಡವು ರಾಜ್ಯ ಅಸೋಸಿಯೇಷನ್ ಕಪ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್ ಪಂದ್ಯದಲ್ಲಿ ವಿವೇಕ್ಸ್ ಸ್ಪೋರ್ಟ್ಸ್ ಕ್ಲಬ್ ತಂಡದ ಮೇಲೆ 104–54 ಪಾಯಿಂಟ್‌ಗಳ ಭಾರಿ ಗೆಲುವು ಪಡೆದು ಸೆಮಿಫೈನಲ್ ತಲುಪಿತು.

ಶ್ರೀಕಂಠೀರವ ಕ್ರೀಡಾಂಗಣದಲ್ಲಿ ನಡೆದ ಪುರುಷರ ವಿಭಾಗದ ಇನ್ನೊಂದು ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಸದರ್ನ್ ಬ್ಲೂಸ್ ತಂಡ 90–74 ಪಾಯಿಂಟ್‌ಗಳಿಂದ ಬೀಗಲ್ಸ್ ಬ್ಯಾಸ್ಕೆಟ್‌ಬಾಲ್ ಕ್ಲಬ್ ತಂಡವನ್ನು ಸೋಲಿಸಿತು.

ಇತರ ಪಂದ್ಯಗಳಲ್ಲಿ ಯಂಗ್ ಒರಿಯನ್ಸ್ ಎಸ್‌ಸಿ ತಂಡ 114–89 ಪಾಯಿಂಟ್‌ಗಳಿಂದ ಎಂಎನ್‌ಕೆ ರಾವ್ ಪಾರ್ಕ್ ಬಿ.ಸಿ. ತಂಡವನ್ನು, ಡಿವೈಇಎಸ್, ಬೆಂಗಳೂರು ತಂಡ 100–93 ರಿಂದ ಜಿಎಸ್‌ಟಿ ಅಂಡ್ ಕಸ್ಟಮ್ಸ್ ತಂಡವನ್ನು ಸೋಲಿಸಿದವು. ಡಿವೈಇಎಸ್‌ನ ಮನೋಜ್ 27 ಅಂಕ, ಜಿಎಸ್‌ಟಿ ತಂಡದ ಸಮ್ಯುಮ್ 27 ಮತ್ತು ವಿಷ್ಣು 24 ಅಂಕ ಗಳಿಸಿದರು.

ಮಹಿಳೆಯರ ಸೆಮಿಫೈನಲ್ ಲೀಗ್ ಪಂದ್ಯಗಳಲ್ಲಿ ಬೀಗಲ್ಸ್ 51–29 ರಿಂದ ಮೌಂಟ್ಸ್ ಕ್ಲಬ್ ತಂಡವನ್ನು ಮಣಿಸಿದರೆ, ಸೌತ್ ವೆಸ್ಟರ್ನ್ ರೈಲ್ವೆ 61–43 ರಿಂದ ರಾಜಮಹಲ್ ಬಿ.ಸಿ. ತಂಡವನ್ನು ಸೋಲಿಸಿತು.

ಕೆಎಸ್‌ಸಿಎ ಚುನಾವಣೆ: ಆದೇಶ ಕಾಯ್ದಿರಿಸಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ (ಕೆಎಸ್‌ಸಿಎ) ಅಧ್ಯಕ್ಷ ಸ್ಥಾನಕ್ಕೆ ನಡೆಯುತ್ತಿರುವ ಚುನಾವಣೆಯ ಕಣದಲ್ಲಿ ನನ್ನನ್ನೂ ಅಭ್ಯರ್ಥಿಯನ್ನಾಗಿ ಪರಿಗಣಿಸಲು ನಿರ್ದೇಶಿಸಬೇಕು’ ಎಂದು ಕೋರಿ ಕೆ.ಎನ್.ಶಾಂತಕುಮಾರ್ ಅವರು ಸಲ್ಲಿಸಿರುವ ಅರ್ಜಿ ವಿಚಾರಣೆ ಪೂರ್ಣಗೊಳಿಸಿರುವ ಹೈಕೋರ್ಟ್ ಅಂತಿಮ ಆದೇಶ ಕಾಯ್ದಿರಿಸಿದೆ.

ಈ ಕುರಿತ ರಿಟ್ ಅರ್ಜಿ ವಿಚಾರಣೆಯನ್ನು ಗುರುವಾರ ಮುಂದುವರಿಸಿದ ನ್ಯಾ. ಸೂರಜ್ ಗೋವಿಂದರಾಜು ಅವರಿದ್ದ ಏಕಸದಸ್ಯ ನ್ಯಾಯಪೀಠ ಸುದೀರ್ಘ ವಾದ–ಪ್ರತಿವಾದ ಆಲಿಸಿತು.

‘ಕೆಎಸ್‌ಸಿಎ ಚುನಾವಣಾ ಕಣದಲ್ಲಿ ಉಳಿದಿರುವ ಅಭ್ಯರ್ಥಿಗಳು ಯಾರೆಂಬುದನ್ನು ಸದ್ಯ ಪ್ರಕಟಿಸಬಾರದು’ ಎಂಬ ಮಧ್ಯಂತರ ತಡೆ ಆದೇಶವನ್ನು ವಿಸ್ತರಿಸಿತಲ್ಲದೇ, ಡಿಸೆಂಬರ್ 1ರಂದು ಅಂತಿಮ ಆದೇಶ ಪ್ರಕಟಿಸುವುದಾಗಿ ತಿಳಿಸಿತು.

‘ನಾಮಪತ್ರ ಪರಿಶೀಲನಾ ಪ್ರಕ್ರಿಯೆ ಪೂರ್ಣಗೊಳ್ಳುವ ಮೊದಲೇ ಅಂದರೆ ನವೆಂಬರ್ 24 ರಂದೇ ನಾನು ಬಾಕಿ ಹಣ ಪಾವತಿಸಿದ್ದೇನೆ. ಆದರೆ, ಚಂದಾ ಬಾಕಿ ಪಾವತಿ ಮಾಡಿಲ್ಲ ಎಂಬ ಕಾರಣಕ್ಕೆ ನನ್ನ ನಾಮಪತ್ರವನ್ನು ತಿರಸ್ಕರಿಸಿ ಚುನಾವಣಾ ಅಧಿಕಾರಿ 2025ರ ನವೆಂಬರ್ 24ರಂದು ಹೊರಡಿಸಿರುವ ಆದೇಶವನ್ನು ರದ್ದುಗೊಳಿಸಬೇಕು. ಚುನಾವಣೆಯಲ್ಲಿ ಸ್ಪರ್ಧಿಸಲು ನನ್ನನ್ನೂ ಮಾನ್ಯ ಅಭ್ಯರ್ಥಿ ಎಂದು ಘೋಷಿಸಿ, ಚುನಾವಣಾ ವೇಳಾಪಟ್ಟಿ ಪ್ರಕ್ರಿಯೆ ಮುಂದುವರಿಸಲು ಚುನಾವಣಾ ಅಧಿಕಾರಿಗೆ ನಿರ್ದೇಶಿಸಬೇಕು’ ಎಂದು ಅರ್ಜಿದಾರರು ಕೋರಿದ್ದಾರೆ.

ಪ್ರತ್ಯೇಕ ಪ್ರಕರಣ: ಬ್ಯಾಸ್ಕೆಟ್‌ಬಾಲ್ ಕಂಬ ಉರುಳಿ ಇಬ್ಬರು ಆಟಗಾರರ ಸಾವು

ಚಂಡೀಗಢ (ಪಿಟಿಐ): ಎರಡು ಪ್ರತ್ಯೇಕ ಘಟನೆಗಳಲ್ಲಿ ಬ್ಯಾಸ್ಕೆಟ್‌ಬಾಲ್ ಕಂಬ ಬಿದ್ದು ಹದಿಹರೆಯದ ಇಬ್ಬರು ಆಟಗಾರರು ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಹರಿಯಾಣದ ರೋಹ್ತಕ್‌ನಲ್ಲಿ ರಾಷ್ಟ್ರೀಯ ಮಟ್ಟದ ಆಟಗಾರ ಹಾರ್ದಿಕ್ ರಾಥಿ (16) ಅವರು ಮಂಗಳವಾರ ಏಕಾಂಗಿಯಾಗಿ ಅಭ್ಯಾಸದಲ್ಲಿ ತೊಡಗಿದ್ದ ವೇಳೆ, ಚೆಂಡನ್ನು ‘ಬ್ಯಾಸ್ಕೆಟ್’ಗೆ ಹಾಕುವ ವೇಳೆ ಕಬ್ಬಿಣದ ಕಂಬ ಅವರ ಎದೆಯ ಮೇಲೆ ಬಿದ್ದಿದೆ. ಇತರ ಆಟಗಾರರು ಧಾವಿಸಿ ಆಸ್ಪತ್ರೆಗೆ ದಾಖಲಿಸಿದ್ದು, ಅಷ್ಟರೊಳಗೆ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಫೆ.8ಕ್ಕೆ ಎಚ್‌ಸಿಎಲ್ ಸೈಕ್ಲೊಥಾನ್

ಬೆಂಗಳೂರು: ನೊಯ್ಡಾ, ಚೆನ್ನೈ, ಹೈದರಾಬಾದ್ ನಗರಗಳಲ್ಲಿ ನಡೆದಿರುವ ಎಚ್‌ಸಿಎಲ್ ಸೈಕ್ಲೊಥಾನ್ ಈಗ ಬೆಂಗಳೂರಿನಲ್ಲೂ ಮೊದಲ ಬಾರಿ ನಡೆಯಲಿದೆ. ಮುಂದಿನ ಫೆಬ್ರುವರಿ 8ರಂದು ಬೆಂಗಳೂರಿನ ನೈಸ್ ರಸ್ತೆಯಲ್ಲಿ ಈ ಸೈಕ್ಲೊಥಾನ್ ಆಯೋಜನೆಯಾಗಲಿದೆ.

ಎಚ್‌ಸಿಎಲ್ ಸಮೂಹವು, ಭಾರತ ಸೈಕ್ಲಿಂಗ್ ಫೆಡರೇಷನ್ ಸಹಯೋಗದಲ್ಲಿ ಈ ಸೈಕ್ಲೊಥಾನ್ ಆಯೋಜಿಸುತ್ತಿದೆ. ವೃತ್ತಿಪರ, ಹವ್ಯಾಸಿ ಮತ್ತು ಜನಪ್ರಿಯ ಗ್ರೀನ್ ರೈಡ್ – ಈ ಮೂರು ವಿಭಾಗಗಳಲ್ಲಿ ಸ್ಪರ್ಧೆಗಳು ನಡೆಯಲಿವೆ ಎಂದು ಎಚ್‌ಸಿಎಲ್ ಗ್ರೂಪ್‌ನ ಅಸೋಸಿಯೇಟ್ ವೈಸ್ ಪ್ರೆಸಿಡೆಂಟ್ ಮತ್ತು ಬ್ರಾಂಡ್ ಮುಖ್ಯಸ್ಥ ರಜತ್ ಚಾಂದೋಲಿಯಾ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

18 ರಿಂದ 35 ವಯೋಮಿತಿಯ ವೃತ್ತಿಪರರಿಗೆ (ಸಿಎಫ್‌ಐ ಪರವಾನಿಗೆ ಹೊಂದಿರುವ) 50 ಕಿ.ಮೀ. ರೋಡ್ ರೇಸ್ ನಿಗದಿಪಡಿಸಲಾಗಿದೆ. ಹವ್ಯಾಸಿಗಳಿಗೆ (18–30 ವರ್ಷ, 30–40 ವರ್ಷ, 40–50 ವರ್ಷ, +50) ವಿಭಾಗಗಳ ಪುರುಷರು ಮತ್ತು ಮಹಿಳೆಯರಿಗೆ 50 ಕೀ.ಮೀ. ರೋಡ್ ರೇಸ್ ಇರಲಿದೆ. ಜೊತೆಗೆ 32 ಕಿ.ಮೀ. ಎಂಟಿಬಿ (ಮೌಂಟನ್ ಬೈಕ್) ರೇಸ್ ಇರಲಿದೆ.

ಹೊಸದಾಗಿ ಪಾಲ್ಗೊಳ್ಳುವ ಉತ್ಸಾಹಿಗಳು (16 ವರ್ಷ ಮೇಲ್ಪಟ್ಟವರು) ಗ್ರೀನ್ ರೈಡ್ ವಿಭಾಗದಲ್ಲಿ ಪಾಲ್ಗೊಳ್ಳಬಹುದು.

www.hclcyclothon.com ನಲ್ಲಿ ಹೆಸರು ನೋಂದಾಯಿಸಬಹುದು. ಜನವರಿ 26ರವರೆಗೆ ಅವಕಾಶವಿದೆ.

‘ಎಚ್‌ಸಿಎಲ್ ಸ್ಪರ್ಧೆ ಆಯೋಜಿಸುತ್ತಿರುವ ಕಾರಣ ಹೊಸ ಪ್ರತಿಭೆಗಳನ್ನು ಕಂಡುಕೊಳ್ಳಲು ನೆರವಾಗಲಿದೆ. ಭಾರತದಲ್ಲಿ ಸೈಕ್ಲಿಂಗ್ ಸ್ಪರ್ಧೆಗಳನ್ನು ಹೆಚ್ಚಿನ ಪ್ರಮಾಣದಲ್ಲಿ ನಡೆಸಲು ಸೈಕ್ಲಿಂಗ್ ಫೆಡರೇಷನ್ ಆಫ್ ಇಂಡಿಯಾ ಕಾರ್ಯೋನ್ಮುಖವಾಗಿದೆ’ ಎಂದು ಫೆಡರೇಷನ್‌ನ ಮಹಾ ಪ್ರಧಾನ ಕಾರ್ಯದರ್ಶಿ ಮಣೀಂದರ್ ಸಿಂಗ್ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ 9 ಬಾರಿಯ ರಾಷ್ಟ್ರೀಯ ಚಾಂಪಿಯನ್ ಹಾಗೂ ಎಚ್‌ಸಿಎಲ್ ಮೊದಲ ಸೈಕ್ಲೊಥಾನ್ ರನ್ನರ್ ಅಪ್ ನವೀನ್ ಜಾನ್ ಅವರು ಹಾಜರಿದ್ದರು.



ಎಚ್‌ಸಿಎಲ್ ಸೈಕ್ಲೊಥಾನ್‌ನ ಜರ್ಸಿಯನ್ನು 9 ಬಾರಿಯ ರಾಷ್ಟ್ರೀಯ ಸೈಕ್ಲಿಂಗ್ ಚಾಂಪಿಯನ್ ನವೀನ್ ಜಾನ್, ಎಚ್‌ಸಿಎಲ್ ಗ್ರೂಪ್‌ನ ಬ್ರಾಂಡ್ ಸ್ಟ್ರಾಟಜಿ ಮುಖ್ಯಸ್ಥ ರಜತ್ ಚಾಂದೋಲಿಯಾ, ಸೈಕ್ಲಿಂಗ್ ಫೆಡರೇಷನ್ ಮಹಾಪ್ರಧಾನ ಕಾರ್ಯದರ್ಶಿ ಮಣಿಂದರ್ ಸಿಂಗ್ ಗುರುವಾರ ಅನಾವರಣಗೊಳಿಸಿದರು.

‘ನಿರುದ್ಯೋಗಿಯಾಗಿದ್ದರೂ ಜೀವನಾಂಶ ಕಡ್ಡಾಯ’

ಪ್ರಜಾವಾಣಿ ವಾರ್ತೆ

ಹೈಕೋರ್ಟ್ ಸುದ್ದಿ

ಲಖನೌ: ‘ಪತಿ ನಿರುದ್ಯೋಗಿಯಾಗಿದ್ದರೂ ಪತ್ನಿಗೆ ಜೀವನಾಂಶ ಪಾವತಿಸುವುದು ಕಡ್ಡಾಯ’ ಎಂದು ಅಲಹಾಬಾದ್ ಹೈಕೋರ್ಟ್‌ನ ಲಖನೌ ಪೀಠವು ಪ್ರಕರಣವೊಂದರಲ್ಲಿ ತೀರ್ಪು ನೀಡಿದೆ.

‘ಪತಿ ದೈಹಿಕವಾಗಿ ದುಡಿಯಲು ಸಮರ್ಥನಿದ್ದರೂ ನಿರುದ್ಯೋಗದ ಕಾರಣ ನೀಡಿ ಪತ್ನಿಗೆ ಜೀವನಾಂಶ ನೀಡುವ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ’ ಎಂದು ಕೋರ್ಟ್ ಅಭಿಪ್ರಾಯಪಟ್ಟಿದೆ.

ನ್ಯಾಯಮೂರ್ತಿ ಸೌರವ್ ಲವಾನಿಯಾ ನೇತೃತ್ವದ ಏಕ ಸದಸ್ಯ ಪೀಠವು ಈ ಮಹತ್ವದ ತೀರ್ಪು ನೀಡಿದೆ. ಪತ್ನಿಗೆ ತಿಂಗಳಿಗೆ ₹2,500 ಮಧ್ಯಂತರ ಪರಿಹಾರ ನೀಡುವಂತೆ ಕುಟುಂಬ ನ್ಯಾಯಾಲಯ ನೀಡಿದ ತೀರ್ಪನ್ನು ಪ್ರಶ್ನಿಸಿ, ವ್ಯಕ್ತಿಯೊಬ್ಬರು ಹೈಕೋರ್ಟ್‌ನ ಲಖನೌ ಪೀಠದ ಮೊರೆಹೋಗಿದ್ದರು.

ಪತ್ನಿ ಮತ್ತು ಚಿಕ್ಕ ಮಕ್ಕಳನ್ನು ನೋಡಿಕೊಳ್ಳುವುದು ಪತಿಯ ಪವಿತ್ರ ಕರ್ತವ್ಯ. ನಿರುದ್ಯೋಗದ ನೆಪವೊಡ್ಡಿ ಅವರಿಗೆ ಹಣಕಾಸು ನೆರವು ನಿರಾಕರಿಸುವುದು ತಪ್ಪು. ದೈಹಿಕವಾಗಿ ಸಮರ್ಥನಿರುವ ವ್ಯಕ್ತಿ ಕೂಲಿ ಮಾಡಿಯಾದರೂ ತನ್ನ ಕುಟುಂಬವನ್ನು ಸಲಹಬೇಕು. ನಿರುದ್ಯೋಗದ ಕಾರಣ ನೀಡಿ, ಪತ್ನಿಗೆ ಕಾನೂನುಬದ್ಧವಾಗಿ ನೀಡಬೇಕಿರುವ ಜೀವನಾಂಶ ನಿರಾಕರಿಸುವಂತಿಲ್ಲ’ ಎಂದು ಕೋರ್ಟ್ ಹೇಳಿದೆ.

ಆಹಾರ, ಆಶ್ರಯಕ್ಕಾಗಿ ಪತ್ನಿ ಮತ್ತು ಮಕ್ಕಳು ಅಲೆದಾಡುವುದನ್ನು ತಪ್ಪಿಸಲು, ಜೀವನಾಂಶವನ್ನು ತ್ವರಿತವಾಗಿ ಪಾವತಿಸಬೇಕು. ಈ ವಿಷಯದಲ್ಲಿ ನಿರ್ಲಕ್ಷ್ಯ ವಹಿಸಿದರೆ ಅಥವಾ ವಿಳಂಬ ಮಾಡಿದರೆ ಅದು ಶಿಕ್ಷಾರ್ಹ ಅಪರಾಧ ಎಂದು ದೂರುದಾರನಿಗೆ ಕೋರ್ಟ್ ಎಚ್ಚರಿಕೆ ನೀಡಿತು.

ಪಂಜಾಬ್‌ನ ಜಲಂಧರ್‌ನ ಮಹಿಳೆ 2013ರಲ್ಲಿ ವಿವಾಹವಾಗಿದ್ದರು. ‘ಪತಿ ಮತ್ತು ಅವರ ಕುಟುಂಬದವರಿಂದ ವರದಕ್ಷಿಣೆ ಕಿರುಕುಳ ಸಹಿಸಲಾಗದೆ 2021ರಲ್ಲಿ ಮನೆ ತೊರೆದು, ಪ್ರತ್ಯೇಕವಾಗಿ ವಾಸವಿದ್ದೆ. ಪತಿಯು ಹಣ್ಣಿನ ವ್ಯಾಪಾರ ಮಾಡಿ ತಿಂಗಳಿಗೆ ₹1 ಲಕ್ಷ ಸಂಪಾದನೆ ಮಾಡುತ್ತಾರೆ. ಅವರಿಂದ ಜೀವನಾಂಶ ಕೊಡಿಸಬೇಕು’ ಎಂದು ಮಹಿಳೆ ಕುಟುಂಬ ನ್ಯಾಯಾಲಯಕ್ಕೆ ಮನವಿ ಮಾಡಿದ್ದರು. ‘ಈಗ ಹಣ್ಣಿನ ವ್ಯಾಪಾರ ಮಾಡುತ್ತಿಲ್ಲ. ನಿರುದ್ಯೋಗಿಯಾಗಿರುವುದರಿಂದ ಜೀವನಾಂಶ ಪಾವತಿಸಲು ಸಾಧ್ಯವಿಲ್ಲ’ ಎಂದು ಪತಿ ಕೋರ್ಟ್‌ಗೆ ತಿಳಿಸಿದ್ದರು.

ಅಧಿವೇಶನ: ಸರ್ವಪಕ್ಷ ಸಭೆ 30ರಂದು

ನವದೆಹಲಿ: ಸಂಸತ್ತಿನ ಚಳಿಗಾಲದ ಅಧಿವೇಶನಕ್ಕೆ ಒಂದು ದಿನದ ಮುನ್ನ ನ.30ರಂದು ಸರ್ವಪಕ್ಷಗಳ ಸಭೆಯನ್ನು ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಕರೆದಿದ್ದಾರೆ.

ಬಿಹಾರ ಗೆಲುವಿನಿಂದ ಎನ್‌ಡಿಎ ಬೀಗುತ್ತಿದ್ದರೆ, ವಿರೋಧ ಪಕ್ಷಗಳು ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್), ಅಮೆರಿಕದ ವ್ಯಾಪಾರ ಸುಂಕಗಳು ಮುಂತಾದ ವಿಷಯಗಳನ್ನು ಅಧಿವೇಶನದಲ್ಲಿ ಪ್ರಸ್ತಾಪಿಸಿ ಕೇಂದ್ರ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಲು ಕಾರ್ಯತಂತ್ರ ರೂಪಿಸುತ್ತಿವೆ.

ಅಧಿವೇಶನದಲ್ಲಿ ಮಂಡಿಸಲು ಸರ್ಕಾರ ಕಳುಹಿಸಿರುವ ಮಸೂದೆಗಳ ಕುರಿತು ಚರ್ಚಿಸಲಾಗುತ್ತದೆ. 10 ಮಸೂದೆ ಮಂಡನೆಯಾಗಲಿದ್ದು, ಕಾವೇರಿದ ಚರ್ಚೆಗೆ ಕಾರಣವಾಗಲಿದೆ.

‘ಸಂವಿಧಾನದ 240ನೇ ವಿಧಿಯಡಿ ಚಂಡೀಗಢವನ್ನು ಸೇರಿಸಲು ಪ್ರಸ್ತಾಪಿಸಲಾದ ಮಸೂದೆಯು ಈ ಹಿಂದೆ ಕೋಲಾಹಲವನ್ನು ಸೃಷ್ಟಿಸಿತ್ತು. ನಂತರ ಸರ್ಕಾರ ಅದನ್ನು ಹಿಂದಕ್ಕೆ ಪಡೆದುಕೊಂಡಿತ್ತು. ಮತ್ತೊಂದು ಮಸೂದೆಯು ಯುಜಿಸಿ, ಎಐಸಿಟಿಇ ಮತ್ತು ಎನ್‌ಟಿಇಗಳನ್ನು ಭಾರತೀಯ ಉನ್ನತ ಶಿಕ್ಷಣ ಮಂಡಳಿಯಲ್ಲಿ ವಿಲೀನಗೊಳಿಸುವ ಪ್ರಸ್ತಾಪವನ್ನು ಹೊಂದಿದೆ. ಈ ಮಸೂದೆಗಳನ್ನು ವಿರೋಧ ಪಕ್ಷಗಳ ಗಮನಕ್ಕೆ ತರಲು ಸಭೆ ಕರೆಯಲಾಗುವುದು’ ಎಂದು ಸಂಸದೀಯ ವ್ಯವಹಾರಗಳ ರಾಜ್ಯ ಸಚಿವ ಅರ್ಜುನ್ ರಾಮ್ ಮೇಘವಾಲ್ ಈ ಹಿಂದೆ ಹೇಳಿದ್ದರು.

‘ವಿಪಕ್ಷಗಳು ಕೆಲ ವಿಷಯಗಳಲ್ಲಿ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಲು ನೋಡುತ್ತಿವೆ. ಎಸ್‌ಐಆರ್ ಮತ್ತು ಆಯೋಗದ ಪಾತ್ರ, ಪ್ರವಾಹ ಪರಿಹಾರ, ನಿರುದ್ಯೋಗ ಸೇರಿದಂತೆ ಅನೇಕ ವಿಷಯಗಳನ್ನು ಪ್ರಸ್ತಾಪಿಸಲಾಗುವುದು’ ಎಂದು ಲೋಕಸಭೆಯಲ್ಲಿ ಕಾಂಗ್ರೆಸ್‌ನ ಉಪ ಮುಖ್ಯ ಸಚೇತಕ ಮಾಣಿಕ್ಕಂ ಟ್ಯಾಗೋರ್ ಹೇಳಿದರು.

‘ಡಿ.1ರಿಂದ 19ರವರೆಗೆ ಅಧಿವೇಶನ ನಡೆಯಲಿದೆ’ ಎಂದು ರಿಜಿಜು ಈ ಹಿಂದೆ ‘ಎಕ್ಸ್’ನಲ್ಲಿ ತಿಳಿಸಿದ್ದರು.

‘ವಾಯು ಗುಣಮಟ್ಟ ಕುಸಿತ: ಯಾವ ಮಂತ್ರದಂಡ ಪ್ರಯೋಗಿಸಬೇಕು?’

ನವದೆಹಲಿ (ಪಿಟಿಐ): ‘ನ್ಯಾಯಾಂಗವು ಯಾವ ರೀತಿಯ ಮಂತ್ರದಂಡ ಪ್ರಯೋಗಿಸಬೇಕು? ವಾಯು ಗುಣಮಟ್ಟ ತೀರಾ ಹದಗೆಟ್ಟಿರುವುದು ದೆಹಲಿಗೆ ಮಾರಕ ಎಂದು ತಿಳಿದಿದೆ. ಆದರೆ, ಇದಕ್ಕೆ ಪರಿಹಾರವೇನು’ ಎಂದು ಭಾರತದ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸೂರ್ಯಕಾಂತ್ ಪ್ರಶ್ನಿಸಿದರು.

ದೆಹಲಿ ಮತ್ತು ಎನ್‌ಸಿಆರ್‌ನಲ್ಲಿ ವಾಯು ಗುಣಮಟ್ಟ ಕುಸಿದಿರುವ ಕಾರಣ ಸಲ್ಲಿಸಲಾಗಿರುವ ಅರ್ಜಿಯೊಂದರ ವಿಚಾರಣೆಯನ್ನು ಡಿ.3ರಂದು ನಡೆಸಲು ಸಿಜೆಐ ಮತ್ತು ನ್ಯಾಯಮೂರ್ತಿ ಜಾಯ್‌ಮಾಲ್ಯಾ ಬಾಗ್ಚಿ ಅವರ ಪೀಠವು ಗುರುವಾರ ಒಪ್ಪಿಗೆ ನೀಡಿದೆ. ‘ಈ ವಿಚಾರದ ಬಗ್ಗೆ ನಿರಂತರವಾಗಿಯೇ ಮೇಲ್ವಿಚಾರಣೆ ನಡೆಸಬೇಕು’ ಎಂದಿದೆ.

‘ವಾಯು ಗುಣಮಟ್ಟ ಎಷ್ಟು ಹದಗೆಟ್ಟಿದೆ ಎಂದರೆ, ದೆಹಲಿಯಲ್ಲಿ ಆರೋಗ್ಯ ತುರ್ತು ಪರಿಸ್ಥಿತಿ ಇದೆ’ ಎಂದು ಹೇಳಿದ ವಕೀಲ ಅಪರಾಜಿತ ಸಿಂಗ್ ಮಾತುಗಳನ್ನು ಪೀಠ ಉಲ್ಲೇಖಿಸಿತು.

‘ನಾವು ಏನು ನಿರ್ದೇಶನ ನೀಡಬೇಕು? ನಾವು ಕೆಲವು ನಿರ್ದೇಶನ-ಗಳನ್ನು ನೀಡುತ್ತೇವೆ ಎಂದಿಟ್ಟುಕೊಳ್ಳಿ… ಆ ತಕ್ಷಣವೇ ನಾವು ಉತ್ತಮ ಗುಣಮಟ್ಟದ ಗಾಳಿಯನ್ನು ಉಸಿರಾಡುತ್ತೇವೆಯೇ? ಸರ್ಕಾರವು ಯಾವ ರೀತಿಯ ಸಮಿತಿಯನ್ನು ರಚಿಸುತ್ತದೆಯೋ ನೋಡೋಣ’ ಎಂದು ಸಿಜೆಐ ಹೇಳಿದರು.

ಟಿಟಿಡಿ ಮಾಜಿ ಅಧ್ಯಕ್ಷ ವೈ.ವಿ.ಸುಬ್ಬಾರೆಡ್ಡಿ ಹೇಳಿಕೆ

ಅಪಪ್ರಚಾರ ತಡೆಗೆ ‘ಸುಪ್ರೀಂ’ಗೆ

ನವದೆಹಲಿ (ಪಿಟಿಐ): ತಿರುಪತಿ ಲಡ್ಡು ಪ್ರಸಾದದಲ್ಲಿ ಕಲಬೆರಕೆ ತುಪ್ಪ ಬಳಸಲಾಗಿದೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ತಮ್ಮ ವಿರುದ್ಧ ನಡೆಯುತ್ತಿರುವ ‘ತಪ್ಪು ಮಾಹಿತಿ ಅಭಿಯಾನ’ಕ್ಕೆ ತಡೆ ನೀಡುವಂತೆ ಕೋರಿ ಸುಪ್ರೀಂ ಕೋರ್ಟ್ ಮೊರೆಹೋಗಲು ಯೋಜಿಸಿರುವುದಾಗಿ ತಿರುಮಲ ತಿರುಪತಿ ದೇವಸ್ಥಾನಂನ (ಟಿಟಿಡಿ) ಮಾಜಿ ಅಧ್ಯಕ್ಷ ಮತ್ತು ರಾಜ್ಯಸಭಾ ಸದಸ್ಯ (ವೈಎಸ್‌ಆರ್‌ಸಿಪಿ) ವೈ.ವಿ.ಸುಬ್ಬಾರೆಡ್ಡಿ ತಿಳಿಸಿದರು.

ಈ ಕುರಿತು ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಸುಪ್ರೀಂ ಕೋರ್ಟ್ ಆದೇಶದ ಅನ್ವಯ ರಚನೆಯಾಗಿರುವ ವಿಶೇಷ ತನಿಖಾ ತಂಡ (ಎಸ್‌ಐಟಿ) ತನಿಖೆ ನಡೆಸುತ್ತಿದೆ. ಆದರೆ ಕೆಲ ಆಯ್ದ ವಿಷಯಗಳನ್ನು ಮತ್ತು ಊಹಾಪೋಹದ ಅಂಕಿಅಂಶಗಳನ್ನು ಆಧರಿಸಿ ಟಿಟಿಡಿ ಖ್ಯಾತಿಗೆ ಹಾನಿ ಮಾಡಲಾಗುತ್ತಿದೆ. ಈ ಮೂಲಕ ಭಕ್ತರ ಭಾವನೆಗಳಿಗೂ ಧಕ್ಕೆ ತರಲಾಗುತ್ತಿದೆ’ ಎಂದು ಅವರು ಹೇಳಿದರು.

‘ಈ ವಿಷಯದಲ್ಲಿ ನಾನು ಅಮಾಯಕ. ಈ ಸಂಬಂಧ ಸತ್ಯಶೋಧನಾ ಪರೀಕ್ಷೆ ಮತ್ತು ಸುಳ್ಳು ಪತ್ತೆ ಪರೀಕ್ಷೆಗೆ ಒಳಗಾಗಲು ಸಿದ್ಧನಿದ್ದೇನೆ’ ಎಂದು ಅವರು ತಿಳಿಸಿದರು.

ತಿರುಮಲದಲ್ಲಿನ ವೆಂಕಟೇಶ್ವರ ಕ್ಷೇತ್ರವನ್ನು ರಾಜಕೀಯ ಹಗ್ಗಜಗ್ಗಾಟಕ್ಕೆ ಎಳೆದು ತರುತ್ತಿರುವುದು ಬೇಸರ ಮೂಡಿಸಿದೆ ಎಂದು ಅವರು ಹೇಳಿದರು.

‘ಟಿಟಿಡಿ ಆಡಳಿತ, ಸರ್ಕಾರ, ಮಾಧ್ಯಮ ಸಂಸ್ಥೆಗಳು ಜವಾಬ್ದಾರಿಯುತವಾಗಿ ವರ್ತಿಸಬೇಕು ಎಂದು ಒತ್ತಾಯಿಸುತ್ತೇನೆ. ಪರಾಮರ್ಶೆ ಮಾಡದೆ ಸುಳ್ಳು ಆರೋಪಗಳನ್ನು ಮಾಡುವುದನ್ನು ನಿಲ್ಲಿಸಿ. ಪ್ರಮಾಣೀಕೃತ ಪ್ರಯೋಗಾಲಯದ ಫಲಿತಾಂಶಗಳನ್ನಷ್ಟೇ ಬಿಡುಗಡೆ ಮಾಡಿ’ ಎಂದು ತಿಳಿಸಿದರು.

‘2019–2024ರ ಅವಧಿಯಷ್ಟೇ ಅಲ್ಲದೆ, ಕಳೆದ 15 ವರ್ಷಗಳಲ್ಲಿನ ತುಪ್ಪದ ಗುಣಮಟ್ಟವನ್ನು ಪರೀಕ್ಷಿಸುವಂತೆ ನಾನು ಎಸ್‌ಐಟಿಯನ್ನು ಕೋರಿದ್ದೇನೆ’ ಎಂದರು.

‘2014–19ರಲ್ಲಿ ನಾಯ್ಡು ಅವರ ಅವಧಿಯಲ್ಲಿ ನಿಯಮಗಳನ್ನು ಉಲ್ಲಂಘಿಸಿ ಟಿಟಿಡಿಗೆ ಸೇರಿದ ₹1,200 ಕೋಟಿಯನ್ನು ಖಾಸಗಿ ಬ್ಯಾಂಕಿನಲ್ಲಿ ಠೇವಣಿ ಇರಿಸಲಾಗಿತ್ತು’ ಎಂದು ಅವರು ಆರೋಪಿಸಿದರು.

‘ಇಂಡಿಯಾಸ್ ಗಾಟ್ ಲ್ಯಾಟೆಂಟ್’ ಪ್ರಕರಣದ ವಿಚಾರಣೆ ವೇಳೆ ಸುಪ್ರೀಂ ಕೋರ್ಟ್ ಅಭಿಪ್ರಾಯ

‘ಡಿಜಿಟಲ್ ಕಂಟೆಂಟ್ ನಿಯಂತ್ರಣಕ್ಕೆ ಸ್ವಾಯತ್ತ ಪ್ರಾಧಿಕಾರ ಅಗತ್ಯ’

ಪ್ರಜಾವಾಣಿ ವಾರ್ತೆ

ನವದೆಹಲಿ: ಡಿಜಿಟಲ್ ಕಂಟೆಂಟ್‌ಗಳ ಪ್ರಸಾರಕ್ಕೆ ಸಂಬಂಧಿಸಿದಂತೆ ಕಂಟೆಂಟ್ ಕ್ರಿಯೇಟರ್‌ಗಳು ಹಾಗೂ ಸಂಬಂಧಪಟ್ಟ ಡಿಜಿಟಲ್ ವೇದಿಕೆಗಳನ್ನೇ ಹೊಣೆಯಾಗಿಸಲು ಪ್ರತ್ಯೇಕ ಸ್ವಾಯತ್ತ ಸಂಸ್ಥೆ ಹಾಗೂ ಪ್ರಾಧಿಕಾರ ರಚಿಸಬೇಕಾದ ಅಗತ್ಯವನ್ನು ಸುಪ್ರೀಂ ಕೋರ್ಟ್ ಗುರುವಾರ ಪ್ರತಿಪಾದಿಸಿದೆ.

ಅಭಿವ್ಯಕ್ತಿ ಸ್ವಾತಂತ್ರ್ಯ–ಸಮಾಜದ ಹಿತದೃಷ್ಟಿ, ಮಕ್ಕಳ ರಕ್ಷಣೆಯ ನಡುವಿನ ಸಮತೋಲನ ಕಾಯ್ದುಕೊಳ್ಳಲು ಇಂಥ ಸ್ವಾಯತ್ತ ಸಂಸ್ಥೆಯನ್ನು ರೂಪಿಸುವ ಅಗತ್ಯವಿದೆ ಎಂದು ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್, ನ್ಯಾಯಮೂರ್ತಿ ಜಾಯ್‌ಮಾಲ್ಯ ಬಾಗ್ಚಿ ಅವರಿದ್ದ ಪೀಠ ಹೇಳಿದೆ.

ಕಂಟೆಂಟ್ ಕ್ರಿಯೇಟರ್ ಸಮಯ್ ರೈನಾ ಅವರ ‘ಇಂಡಿಯಾಸ್ ಗಾಟ್ ಲ್ಯಾಟೆಂಟ್’ ಕಾರ್ಯಕ್ರಮದಲ್ಲಿ ಪ್ರಸಾರ ಮಾಡಿದ ಅಶ್ಲೀಲ ಕಂಟೆಂಟ್‌ಗೆ ಸಂಬಂಧಿಸಿದಂತೆ ಪಾಡ್‌ಕಾಸ್ಟರ್ ರಣವೀರ್ ಅಲಹಾಬಾದಿಯಾ ಹಾಗೂ ಇತರರು ತಮ್ಮ ವಿರುದ್ಧ ದಾಖಲಿಸಿರುವ ಎಫ್‌ಐಆರ್ ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಿಚಾರಣೆ ನಡೆಸಿದೆ.

ಕೇಂದ್ರ ಸರ್ಕಾರದ ಪರವಾಗಿ ಹಾಜರಾಗಿದ್ದ ಅಟಾರ್ನಿ ಜನರಲ್ ಆರ್.ವೆಂಕಟರಮಣಿ ಹಾಗೂ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ಡಿಜಿಟಲ್ ವೇದಿಕೆಗಳ ವಸ್ತುವಿಷಯ ಕಡಿವಾಣಕ್ಕೆ ಹೊಸ ಮಾರ್ಗಸೂಚಿ ರೂಪಿಸಲಾಗಿದ್ದು, ಅದರ ಜಾರಿಗೆ ಸಂಬಂಧಿಸಿದಂತೆ ಸಮಾಲೋಚನೆ ನಡೆಸುತ್ತಿರುವುದಾಗಿ ನ್ಯಾಯಪೀಠಕ್ಕೆ ತಿಳಿಸಿದರು.

ಈ ವೇಳೆ, ‘ದೇಶವಿರೋಧಿ ವಿಚಾರವೂ ಸೇರಿದಂತೆ ಯಾವುದೇ ರೀತಿಯ ಅಶ್ಲೀಲ ವಿಚಾರವನ್ನು ಒಂದು ಬಾರಿ ಡಿಜಿಟಲ್ ವೇದಿಕೆಗೆ ಅಪ್‌ಲೋಡ್ ಮಾಡಿದರೆ ಅದು ವೇಗವಾಗಿ ಹರಿದಾಡುತ್ತದೆ. ಈ ಸ್ವರೂಪದ ವಸ್ತುವಿಷಯಗಳ ಮೇಲ್ವಿಚಾರಣೆ, ನಿಗ್ರಹಕ್ಕೆ ಪ್ರತ್ಯೇಕ ಸ್ವಾಯತ್ತ ಸಂಸ್ಥೆ ಅಥವಾ ಪ್ರಾಧಿಕಾರ ಇರಬೇಕು. ಅದು ಯಾವುದೇ ಆನ್‌ಲೈನ್ ವೇದಿಕೆ ಬಳಕೆದಾರರು ಹಾಗೂ ರಾಜ್ಯ ಆಡಳಿತದ ಪ್ರಭಾವದಿಂದ ಮುಕ್ತವಾಗಿರಬೇಕು’ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಜತೆಗೆ ಅಶ್ಲೀಲ ವಿಚಾರಕ್ಕೆ ಸಂಬಂಧಿಸಿದ ಕಂಟೆಂಟ್‌ಗಳನ್ನು ವೀಕ್ಷಿಸಲು ವಿಧಿಸಿರುವ ಬಳಕೆದಾರನ ವಯಸ್ಸಿನ ಮಿತಿಯನ್ನು ಖಾತರಿಪಡಿಸಿಕೊಳ್ಳಲು ಆಧಾರ್ ಕಾರ್ಡ್ ದೃಢೀಕರಣವನ್ನು ನಿಗದಿಪಡಿಸುವುದು ಸೂಕ್ತ ಎಂಬ ಸಲಹೆಯನ್ನೂ ನ್ಯಾಯಪೀಠ ನೀಡಿದೆ.

‘ಅಂಗವಿಕಲರ ಗೌರವ ರಕ್ಷಣೆಗೆ ಕಾನೂನು ರಚಿಸಿ’

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೇಲಿನ ದೌರ್ಜನ್ಯ ತಡೆಗೆ ಕಾಯ್ದೆ ಇರುವಂತೆಯೇ ಅಂಗವಿಕಲರ ಗೌರವ ಮತ್ತು ಘನತೆಯನ್ನು ಕಾಪಾಡಲು ಕಠಿಣ ಕಾನೂನು ರೂಪಿಸಲು ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಸಲಹೆ ನೀಡಿದೆ.

ಕಾರ್ಯಕ್ರಮವೊಂದರಲ್ಲಿ ಕೆಲವು ಹಾಸ್ಯನಟರು ಅಂಗವಿಕಲ ವ್ಯಕ್ತಿ ಒಬ್ಬರನ್ನು ಅಪಹಾಸ್ಯ ಮಾಡಿದ್ದ ವಿಡಿಯೊ ಜಾಲತಾಣಗಳಲ್ಲಿ ಹರಿದಾಡಿತ್ತು. ಇದರಿಂದ ವ್ಯಕ್ತಿಯ ಘನತೆ ಹಾಗೂ ಜೀವಿಸುವ ಹಕ್ಕಿಗೆ ಚ್ಯುತಿ ತರಲಾಗಿದೆ ಎಂದು ಆರೋಪಿಸಿ ಕ್ಯೂರ್ ಎಸ್‌ಎಂಎ ಫೌಂಡೇಷನ್ ಸಂಸ್ಥೆಯು ರಿಟ್ ಅರ್ಜಿ ಸಲ್ಲಿಸಿ, ಕ್ರಮಕ್ಕೆ ಆಗ್ರಹಿಸಿತ್ತು.

ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಪೀಠ, ಅಂಗವಿಕಲರಾಗಿದ್ದರೂ ಹಲವು ಸಾಧನೆಗೈದಿರುವಂತಹ ವ್ಯಕ್ತಿಗಳನ್ನು ಕರೆದು ಆತಿಥ್ಯ ವಹಿಸಿ, ಅವರ ಆದರ್ಶಪ್ರಾಯ ಜೀವನದ ಬಗ್ಗೆ ತಿಂಗಳಲ್ಲಿ ಎರಡು ಕಾರ್ಯಕ್ರಮಗಳನ್ನಾದರೂ ಪ್ರದರ್ಶಿಸುವಂತೆ ಕಂಟೆಂಟ್ ಕ್ರಿಯೇಟರ್ ಸಮಯ್ ರೈನಾ ಹಾಗೂ ಇತರೆ ಕೆಲವು ಹಾಸ್ಯ ನಟರಿಗೆ ಸೂಚಿಸಿದೆ. ಇಂಥ ಕಾರ್ಯಕ್ರಮಗಳ ಮೂಲಕ ಅಂಗವಿಕಲರ ಚಿಕಿತ್ಸೆಗೆ ನಿಧಿ ಸಂಗ್ರಹಿಸುವ ಸಲಹೆಯನ್ನೂ ನೀಡಿದೆ.



ಜೂನಿಯರ್ ಹಾಕಿ ವಿಶ್ವಕಪ್ ಟ್ರೋಫಿಯೊಂದಿಗೆ ತಂಡಗಳ ನಾಯಕರು ಚಿತ್ರ: 'ಹಾಕಿ ಇಂಡಿಯಾ'

ಭಾರತಕ್ಕೆ ಮಣಿದ ನ್ಯೂಜಿಲೆಂಡ್

ಇಪೊ (ಮಲೇಷ್ಯಾ), (ಪಿಟಿಐ): ಆಟ ಮುಕ್ತಾಯಕ್ಕೆ ಆರು ನಿಮಿಷಗಳಿದ್ದಾಗ ಸೆಲ್ವಂ ಕಾರ್ತಿ ಗಳಿಸಿದ ಗೋಲಿನ ನೆರವಿನಿಂದ ಭಾರತ ತಂಡ, ಸುಲ್ತಾನ್ ಅಜ್ಲಾನ್ ಶಾ ಕಪ್ ಹಾಕಿ ಟೂರ್ನಿ ಪಂದ್ಯದಲ್ಲಿ ಗುರುವಾರ ನ್ಯೂಜಿಲೆಂಡ್ ತಂಡವನ್ನು 3–2ರಿಂದ ಸೋಲಿಸಿತು.

ಐದು ಬಾರಿಯ ಚಾಂಪಿಯುನ್ ಭಾರತ ತಂಡ ಬುಧವಾರ ಆತಿಥೇಯ ಮಲೇಷ್ಯಾ ತಂಡವನ್ನು 4–3 ಗೋಲುಗಳಿಂದ ಮಣಿಸಿತ್ತು.

ನ್ಯೂಜಿಲೆಂಡ್ ವಿರುದ್ಧದ ಪಂದ್ಯದಲ್ಲಿ ಅಮಿತ್ ರೋಹಿದಾಸ್ (4ನೇ ನಿಮಿಷ), ಸಂಜಯ್ (32ನೇ ನಿಮಿಷ) ಮತ್ತು ಸೆಲ್ವಂ (54ನೇ ನಿಮಿಷ) ಗೋಲುಗಳನ್ನು ಗಳಿಸಿದರು. ಮೊದಲೆರಡು ಗೋಲುಗಳು ಪೆನಾಲ್ಟಿ ಕಾರ್ನರ್ ಮೂಲಕ ಬಂದವು.

ನ್ಯೂಜಿಲೆಂಡ್ ಪರ ಜಾರ್ಜ್ ಬೆಕರ್ ಅವರು ಎರಡೂ ಗೋಲುಗಳನ್ನು ಕ್ರಮವಾಗಿ 42 ಮತ್ತು 48ನೇ ನಿಮಿಷ ಹೊಡೆದರು.

ಬ್ಯಾಡ್ಮಿಂಟನ್: ಒಕುಹಾರಾಗೆ ಆಘಾತ ನೀಡಿದ ತನ್ವಿ



ತನ್ವಿ ಶರ್ಮಾ

ಲಖನೌ (ಪಿಟಿಐ): ವಿಶ್ವ ಜೂನಿಯರ್ ಚಾಂಪಿಯನ್‌ಷಿಪ್ ಬೆಳ್ಳಿ ವಿಜೇತೆ ತನ್ವಿ ಶರ್ಮಾ ಅವರು ಸೈಯ್ಯದ್ ಮೋದಿ ಅಂತರರಾಷ್ಟ್ರೀಯ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಎರಡನೇ ಸುತ್ತಿನಲ್ಲಿ ಮಾಜಿ ವಿಶ್ವ ಚಾಂಪಿಯನ್ ನೊಝೊಮಿ ಒಕುಹಾರ ಅವರಿಗೆ ಸೋಲಿನ ಆಘಾತ ನೀಡಿ ಗುರುವಾರ ಕ್ವಾರ್ಟರ್‌ಫೈನಲ್‌ಗೆ ಮುನ್ನಡೆದರು.

ಪುರುಷರ ಸಿಂಗಲ್ಸ್ ಪ್ರಿಕ್ವಾರ್ಟರ್‌ಫೈನಲ್‌ನಲ್ಲಿ ಮನರಾಜ್ ಸಿಂಗ್ ಅವರು ಅನುಭವಿ ಎಚ್‌.ಎಸ್. ಪ್ರಣಯ್ ಅವರ ನಿರ್ಗಮನಕ್ಕೆ ಕಾರಣರಾದರು.

16 ವರ್ಷ ವಯಸ್ಸಿನ ತನ್ವಿ 13–21, 21–16, 21–19 ರಿಂದ ಎರಡನೇ ಶ್ರೇಯಾಂಕದ ಒಕುಹಾರ ಅವರನ್ನು 59 ನಿಮಿಷಗಳ ಹೋರಾಟದಲ್ಲಿ ಹಿಮ್ಮೆಟ್ಟಿಸಿ ಗಮನ ಸೆಳೆದರು.

ಅಗ್ರ ಶ್ರೇಯಾಂಕದ ಉನ್ನತಿ ಹೂಡ ಕೂಡ ಎಂಟರ ಘಟ್ಟಕ್ಕೆ ಮುನ್ನಡೆದರು. ಅವರು 21–15, 21–10 ರಿಂದ ಸ್ವದೇಶದ ತಸ್ನಿಮ್ ಮೀರ್ ಅವರನ್ನು ಸೋಲಿಸಿದರು. ಉನ್ನತಿ ಕ್ವಾರ್ಟರ್‌ಫೈನಲ್‌ನಲ್ಲಿ ಏಳನೇ ಶ್ರೇಯಾಂಕದ ರಕ್ಷಿತಾಶ್ರೀ ರಾಮರಾಜ್ ಅವರನ್ನು ಎದುರಿಸಲಿದ್ದಾರೆ.

ಕನ್ನಡಿಗ ಮಿಥುನ್ ಮಂಜುನಾಥ್ 21–16, 17–21, 21–17ರಿಂದ ಆರನೇ ಶ್ರೇಯಾಂಕದ ತರುಣ್ ಮನ್ನೇಪಲ್ಲಿ ವಿರುದ್ಧ ಹಾಗೂ ಕಿದಂಬಿ ಶ್ರೀಕಾಂತ್ 21–6, 21–16 ರಿಂದ ಸನೀತ್ ದಯಾನಂದ ವಿರುದ್ಧ ಗೆಲುವು ಸಾಧಿಸಿದರು.

ಜೂನಿಯರ್ ಹಾಕಿ ವಿಶ್ವಕಪ್ ಭಾರತ ತಂಡಕ್ಕೆ ಚಿಲಿ ಸವಾಲು

ಚೆನ್ನೈ (ಪಿಟಿಐ): ಒಂಬತ್ತು ವರ್ಷಗಳ ಬಳಿಕ ತವರಿನಲ್ಲಿ ನಡೆಯುತ್ತಿರುವ ಜೂನಿಯರ್ ವಿಶ್ವಕಪ್ ಹಾಕಿ ಟೂರ್ನಿಯಲ್ಲಿ ಭಾರತ ತಂಡವು ಪ್ರಶಸ್ತಿಯನ್ನು ಮರಳಿ ಪಡೆಯುವ ತವಕದಲ್ಲಿದೆ. ಆತಿಥೇಯರು ಶುಕ್ರವಾರ ಆರಂಭವಾಗುವ ಈ ಟೂರ್ನಿಯಲ್ಲಿ ಚಿಲಿ ವಿರುದ್ಧ ಆಡುವ ಮೂಲಕ ಅಭಿಯಾನ ಆರಂಭಿಸಲಿದ್ದಾರೆ.

ಎರಡು ಬಾರಿಯ ಚಾಂಪಿಯನ್ ಭಾರತ ತಂಡವು 'ಬಿ' ಗುಂಪಿನಿಂದ ನಾಕೌಟ್‌ಗೆ ಮುನ್ನಡೆಯುವ ನೆಚ್ಚಿನ ತಂಡ ಎನಿಸಿದೆ. ಭಾರತ ಮತ್ತು ಚಿಲಿ ಜೊತೆಗೆ ಒಮಾನ್ ಮತ್ತು ಸ್ವಿಟ್ಜರ್ಲೆಂಡ್ ತಂಡಗಳೂ ಇದೇ ಗುಂಪಿನಲ್ಲಿವೆ. ಸಿಂಧೂರ್ ಕಾರ್ಯಾಚರಣೆಯ ನಂತರ ಭದ್ರತೆಯ ಆತಂಕ ವ್ಯಕ್ತಪಡಿಸಿ ಪಾಕಿಸ್ತಾನ ತಂಡ ಟೂರ್ನಿಯಿಂದ ಹಿಂದೆಸರಿದ ಪರಿಣಾಮ ಒಮಾನ್‌ಗೆ ಅವಕಾಶ ದೊರಕಿದೆ.

1979ರಲ್ಲಿ ಜೂನಿಯರ್ ವಿಶ್ವಕಪ್ ಆರಂಭವಾಗಿದ್ದು, ಭಾರತ ತಂಡ 2001ರಲ್ಲಿ ನ್ಯೂಜಿಲೆಂಡ್‌ನ ಹೋಬಾರ್ಟ್‌ನಲ್ಲಿ ಮತ್ತು 2016ರಲ್ಲಿ ಲಖನೌದಲ್ಲಿ ಚಾಂಪಿಯನ್ ಆಗಿದೆ. ಜರ್ಮನಿ ತಂಡ ಏಳು ಬಾರಿ ಪ್ರಶಸ್ತಿ ಗೆಲ್ಲುವ ಮೂಲಕ ಅತಿ ಯಶಸ್ವಿ ತಂಡವೆನಿಸಿದೆ. ಭಾರತದಂತೆ ಅರ್ಜೆಂಟೀನಾ ಸಹ ಎರಡು ಬಾರಿ (2005 ಮತ್ತು 2021) ಕಿರೀಟ ಧರಿಸಿದೆ.

ಫ್ರಾನ್ಸ್‌ನ ವರ್ಸೇಲ್ಸ್‌ನಲ್ಲಿ ನಡೆದ 1979ರ ವಿಶ್ವಕಪ್‌ನಲ್ಲಿ ಪಾಕಿಸ್ತಾನ ಪ್ರಶಸ್ತಿ ಗೆದ್ದಿತ್ತು. 1997ರಲ್ಲಿ ಇಂಗ್ಲೆಂಡ್‌ನ ಮಿಲ್ಟನ್ ಕೀನ್ಸ್‌ನಲ್ಲಿ ನಡೆದ ವಿಶ್ವಕಪ್‌ನಲ್ಲಿ ಆಸ್ಟ್ರೇಲಿಯಾ ಭಾರತವನ್ನು ಸೋಲಿಸಿ ಚಾಂಪಿಯನ್ ಆಗಿತ್ತು.

ಕ್ವಾಲಾಲಂಪುರದಲ್ಲಿ ನಡೆದ ಈ ಹಿಂದಿನ (2023) ಆವೃತ್ತಿಯಲ್ಲಿ ಭಾರತ ಕಂಚಿನ ಪದಕಕ್ಕಾಗಿ ನಡೆದ ಪ್ಲೇ ಆಫ್ ಪಂದ್ಯದಲ್ಲಿ 1–3 ರಿಂದ ಸ್ಪೇನ್‌ಗೆ ಸೋತು ನಾಲ್ಕನೇ ಸ್ಥಾನಕ್ಕೆ ಸರಿದಿತ್ತು. ಜರ್ಮನಿ ಚಾಂಪಿಯನ್ ಆಗಿತ್ತು.

ಚೆನ್ನೈ ಮತ್ತು ಮದುರೈನಲ್ಲಿ ನಡೆಯುತ್ತಿರುವ ಈ ಟೂರ್ನಿಯಲ್ಲಿ ಇದೇ ಮೊದಲ ಬಾರಿ 24 ತಂಡಗಳು ಭಾಗವಹಿಸುತ್ತಿವೆ. ತಂಡಗಳನ್ನು ಆರು ಗುಂಪುಗಳಲ್ಲಿ ವಿಂಗಡಿಸಲಾಗಿದೆ. ಗುಂಪುಗಳಲ್ಲಿ ಅಗ್ರಸ್ಥಾನ ಪಡೆದ ಆರು ತಂಡಗಳ ಜೊತೆ, ಎರಡನೇ ಸ್ಥಾನ ಪಡೆದ ತಂಡಗಳಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದ ಎರಡು ತಂಡಗಳು ಕ್ವಾರ್ಟರ್‌ಫೈನಲ್ ಪ್ರವೇಶಿಸಲಿವೆ.

21 ವರ್ಷದೊಳಗಿನವರ ರ‍್ಯಾಂಕಿಂಗ್ ಪಟ್ಟಿಯಲ್ಲಿ ಪಿ.ಆರ್.ಶ್ರೀಜೇಶ್ ಗರಡಿಯಲ್ಲಿರುವ ಭಾರತ ತಂಡ ಎರಡನೇ ಸ್ಥಾನದಲ್ಲಿದೆ. ಜರ್ಮನಿ ಅಗ್ರಸ್ಥಾನದಲ್ಲಿದೆ. ಚಿಲಿ 18ನೇ ಸ್ಥಾನದಲ್ಲಿದ್ದು, ಭಾರತಕ್ಕೆ ಹೆಚ್ಚಿನ ಸಮಸ್ಯೆ ತಂದೊಡ್ಡದು ಎಂಬ ನಿರೀಕ್ಷೆಯಿದೆ.

ಪೆನಾಲ್ಟಿ ಕಾರ್ನರ್‌ಗಳ ಪರಿವರ್ತನೆ ವಿಷಯದಲ್ಲಿ ಭಾರತ ತಂಡ ಸುಧಾರಣೆ ಕಾಣಬೇಕಾಗಿದೆ. ಸುಲ್ತಾನ್ ಆಫ್ ಜೋಹರ್ ಕಪ್‌ನಲ್ಲಿ ಈ ದೌರ್ಬಲ್ಯ ಎದ್ದುಕಂಡಿತ್ತು. ಆ ಟೂರ್ನಿಯಲ್ಲಿ ದಕ್ಕಿದ 53 ಪೆನಾಲ್ಟಿ ಕಾರ್ನರ್‌ಗಳಲ್ಲಿ ಎಂಟು ಮಾತ್ರ ಗೋಲಾಗಿದ್ದವು.

ಶ್ರೀಜೇಶ್ ಅವರಿಗೆ ಇದು ಗೊತ್ತಿಲ್ಲದ ವಿಷಯವೇನಲ್ಲ. 'ಈ ವಿಷಯದಲ್ಲಿ ಕಳವಳವಿದೆ. ಇದರ ಬಗ್ಗೆ ಗಮನಹರಿಸಿದ್ದೇವೆ. ನಮ್ಮಲ್ಲಿ ಉತ್ತಮ ಡ್ರ್ಯಾಗ್‌ಫ್ಲಿಕರ್‌ಗಳಿದ್ದಾರೆ. ಹಿಂದಿನ ಅನುಭವಗಳಿಂದ ಪಾಠ ಕಲಿತಿದ್ದೇವೆ' ಎಂದಿದ್ದಾರೆ ಭಾರತ ತಂಡದ ಮಾಜಿ ಗೋಲ್‌ಕೀಪರ್. ರೋಹಿತ್ ತಂಡದ ನಾಯಕರಾಗಿದ್ದಾರೆ.

ಶುಕ್ರವಾರ ನಡೆಯುವ ಇತರ ಪಂದ್ಯಗಳಲ್ಲಿ ಜರ್ಮನಿ, ದಕ್ಷಿಣ ಆಫ್ರಿಕಾ ವಿರುದ್ಧ (ಮದುರೈ), ಕೆನಡಾ, ಐರ್ಲೆಂಡ್ ವಿರುದ್ಧ (ಮದುರೈ), ಅರ್ಜೆಂಟೀನಾ, ಜಪಾನ್ ವಿರುದ್ಧ (ಚೆನ್ನೈ), ಸ್ಪೇನ್, ಈಜಿಪ್ಟ್ ವಿರುದ್ಧ (ಮದುರೈ), ನ್ಯೂಜಿಲೆಂಡ್, ಚೀನಾ ವಿರುದ್ಧ (ಚೆನ್ನೈ), ಬೆಲ್ಜಿಯಂ, ನಮೀಬಿಯಾ ವಿರುದ್ಧ (ಮದುರೈ) ಮತ್ತು ಒಮಾನ್, ಸ್ವಿಟ್ಜರ್ಲೆಂಡ್ (ಚೆನ್ನೈ) ವಿರುದ್ಧ ಆಡಲಿವೆ.

ಭಾರತದ ಪಂದ್ಯಗಳು

ಪಂದ್ಯ	ಎದುರಾಳಿ	ತಾಣ
ನ.28	ಚಿಲಿ	ಚೆನ್ನೈ
ನ.29	ಒಮಾನ್	ಚೆನ್ನೈ
ಡಿ.2	ಸ್ವಿಟ್ಜರ್ಲೆಂಡ್	ಮದುರೈ